# ಅಧ್ಯಾಯ ೪

# ಕೃಷಿ ಮತ್ತು ನೀರಾವರಿ

ತುಮಕೂರು ಜಿಲ್ಲೆಯನ್ನು ಭೌಗೋಳಿಕ ಸ್ಥಿತಿಗತಿಯನ್ನನುಸರಿಸಿ ಬಯಲು ಪ್ರದೇಶದಿಂದ ಕೂಡಿದ್ದಾಗಿದೆಯೆಂದು ಪರಿಗಣಿಸಬಹುದು. ಇದು ರಾಜ್ಯದಲ್ಲಿ ಅಭಿವೃದ್ಧಿ ಹೊಂದುತ್ತಿರುವ ಜಿಲ್ಲೆಗಳಲ್ಲೊಂದಾಗಿದೆ. ಜಿಲ್ಲೆಯ ದಕ್ಷಿಣ ಭಾಗದಲ್ಲಿ ಉತ್ತರ ದಕ್ಷಿಣವಾಗಿ ಬೆಟ್ಟದ ಸಾಲು ಹಬ್ಬಿರುತ್ತದೆ. ಕುಣಿಗಲ್ ತಾಲೂಕಿನ ಹುತ್ರಿದುರ್ಗ ಮತ್ತು ಹುಲಿಯೂರು ದುರ್ಗದ ಬೆಟ್ಟಗಳು ಮುಖ್ಯವಾದವುಗಳು. ಇವುಗಳಿಗೆ ಸಮಾನಾಂತರವಾಗಿ ಉತ್ತರ ಭಾಗದಲ್ಲಿ ಮತ್ತೊಂದು ಗುಡ್ಡದ ಸಾಲು ಹಬ್ಬಿದ್ದು, ಇವುಗಳಲ್ಲಿ ಪಾವಗಡ ತಾಲೂಕಿನ ಕಾಯನದುರ್ಗ, ನಿಡಗಲ್‌ದುರ್ಗಗಳು, ಮಧುಗಿರಿ ತಾಲೂಕಿನ ಬೆಟ್ಟಗಳು ಮತ್ತು ಮಿಡಿಗೇಶಿದುರ್ಗ, ಕೊರಟಗೆರೆ ತಾಲೂಕಿನ ಚನ್ನರಾಯನದುರ್ಗ, ತುಮಕೂರಿನ ದೇವರಾಯನದುರ್ಗ ಪ್ರಮುಖವಾದವುಗಳು.

ರಾಗಿ, ಕಬ್ಬು, ಬತ್ತ, ತೆಂಗು, ಅಡಿಕೆ, ಶೇಂಗಾ ಮತ್ತು ಬೇಳೆಕಾಳುಗಳನ್ನು ಪ್ರಮುಖವಾಗಿ ಬೆಳೆಯಲಾಗುತ್ತಿದೆ. ಪ್ರಮುಖ ಜೀವನದಿಗಳು ಇಲ್ಲದಿರುವುದರಿಂದ ಜಿಲ್ಲೆಯಲ್ಲಿ ಮಳೆಯಾಶ್ರಿತ ಬೇಸಾಯವನ್ನು ಹೆಚ್ಚಾಗಿ ಕಾಣಬಹುದು. ಸಣ್ಣ ನದಿಗಳು ಮಳೆಗಾಲದಲ್ಲಿ ಮಾತ್ರ ತುಂಬಿ ಕೆರೆಗಳಿಗೆ ನೀರನ್ನು ಒದಗಿಸುತ್ತವೆ. ಜಯಮಂಗಲಿ ನದಿ ದೇವರಾಯನದುರ್ಗದಲ್ಲಿ ಹುಟ್ಟಿ ಕೊರಟಗೆರೆ, ಮಧುಗಿರಿ ತಾಲೂಕುಗಳಲ್ಲಿ ಹರಿಯುತ್ತದೆ. ಇದೇ ಸ್ಥಳದಲ್ಲಿ ಹುಟ್ಟುವ ಗರುಡಾಚಲ ಎಂಬ ಮತ್ತೊಂದು ನದಿ ಜಿಲ್ಲೆಯ ಕೆಲವು ಭಾಗಗಳಲ್ಲಿ ಹರಿದು ಜಯಮಂಗಲಿ ನದಿಯನ್ನು ಸೇರುತ್ತದೆ. ಜಯಮಂಗಲಿ ನದಿಯು ಮುಂದುವರೆದು ಆಂಧ್ರಪ್ರದೇಶದ ಅನಂತಪುರ ಜಿಲ್ಲೆಯಲ್ಲಿ ಪಿನಾಕಿನಿಯನ್ನು ಕೂಡುತ್ತದೆ. ಕೊರಟಗೆರೆ ತಾಲೂಕಿನ ಸಿದ್ದರಬೆಟ್ಟದಲ್ಲಿ ಸುವರ್ಣಮುಖಿ ಹುಟ್ಟಿ ಅದೇ ತಾಲೂಕಿನಲ್ಲಿ ಹರಿಯುತ್ತದೆ. ಶಿಂಷಾ ನದಿ ದೇವರಾಯನದುರ್ಗದಲ್ಲಿ ಹುಟ್ಟಿ ಗುಬ್ಬಿ, ಕುಣಿಗಲ್ ತಾಲೂಕಿನಲ್ಲಿ ಹರಿದು ಕೊನೆಗೆ ಕಾವೇರಿ ನದಿಯನ್ನು ಸೇರುತ್ತದೆ. ಈ ನದಿಗೆ ಮಾರ್ಕೊನಹಳ್ಳಿ ಜಲಾಶಯವನ್ನು ನಿರ್ಮಿಸಿದ್ದು,ಇದರಿಂದ ೪,೫೦೦ ಹೆಕ್ಟೇರ್ ಅಚ್ಚುಕಟ್ಟು ಪ್ರದೇಶಕ್ಕೆ ನೀರಾವರಿ ಸೌಲಭ್ಯವನ್ನು ಒದಗಿಸಲಾಗಿದೆ. ಪಿನಾಕಿನಿ ಮತ್ತು ಕುಮುದ್ವತಿ ನದಿಗಳು ಪಾವಗಡ ಮತ್ತು ಮಧುಗಿರಿ ತಾಲೂಕುಗಳಲ್ಲಿ ಹರಿದು ಕೆರೆ ಕಟ್ಟೆಗಳಿಗೆ ನೀರನ್ನು ಒದಗಿಸುತ್ತವೆ.

ಕೃಷಿಗೆ ನೀರಾವರಿ ಸೌಲಭ್ಯ ಒದಗಿಸುವ ಸಲುವಾಗಿ ಹಾಸನ ಜಿಲ್ಲೆಯಲ್ಲಿನ ಹೇಮಾವತಿ ಜಲಾಶಯದಿಂದ ನಾಲಾ ಮುಖಾಂತರ ನೀರನ್ನು ತರುವ ಕಾಮಗಾರಿಯನ್ನು ೧೯೮೭ರಲ್ಲಿ ಪ್ರಾರಂಭಿಸಲಾಯಿತು. ದಕ್ಷಿಣ ಭಾಗದ ತಾಲೂಕುಗಳಾದ ತುರುವೇಕೆರೆ, ತಿಪಟೂರು, ಗುಬ್ಬಿ ಮತ್ತು ಕುಣಿಗಲ್ ತಾಲೂಕುಗಳ ಕೆಲವು ಭಾಗಗಳಿಗೆ ಹೇಮಾವತಿ ನಾಲಾ ನೀರಾವರಿ ಸೌಲಭ್ಯ ದೊರೆತಿದ್ದು, ಈ ಸೌಲಭ್ಯ ಇನ್ನಷ್ಟು ಭಾಗಗಳಿಗೆ ಲಭ್ಯವಾಗಬೇಕಾಗಿದೆ. ಈ ಭಾಗದ ರೈತರು ಬತ್ತ ಮತ್ತು ಅಡಿಕೆ ಬೆಳೆಗಳನ್ನು ಹೆಚ್ಚಾಗಿ ಬೆಳೆಯತೊಡಗಿದ್ದಾರೆ.ಕಾಸರಗೋಡಿನಲ್ಲಿರುವ ಕೇಂದ್ರೀಯ ಪ್ಲಾಂಟೇಷನ್ ಬೆಳೆಗಳ ಸಂಶೋಧನಾ ಕೇಂದ್ರದ ಪ್ರಾದೇಶಿಕ ಕೇಂದ್ರವಾಗಿದ್ದ ಹಿರೇಹಳ್ಳಿಯ ಸಂಶೋಧನಾ ಕೇಂದ್ರವನ್ನು ಭಾರತೀಯ ತೋಟಗಾರಿಕಾ ಸಂಶೋಧನಾ ಸಂಸ್ಥೆಗೆ ೧–೪–೨೦೦೨ ರಂದು ವರ್ಗಾಯಿಸಿ ಕೇಂದ್ರೀಯ ತೋಟಗಾರಿಕಾ ಸಂಶೋಧನಾ ಕೇಂದ್ರ ಹಿರೇಹಳ್ಳಿ ಎಂದು ಹೆಸರಿಸಲಾಗಿದೆ.ಭಾರತೀಯ ತೋಟಗಾರಿಕಾ ಸಂಶೋಧನಾ ಸಂಸ್ಥೆಗೆ ಸೇರಿದ ಕೃಷಿ ವಿಜ್ಞಾನ ಕೇಂದ್ರವನ್ನು ಜಿಲ್ಲೆಯ ಹಿರೇಹಳ್ಳಿಯ ಬಳಿ ೨೪ನೇ ಮಾರ್ಚ್ ೨೦೦೯ ರಲ್ಲಿ ಪ್ರಾರಂಭಿಸಲಾಯಿತು. ಕೃಷಿ ವಿಜ್ಞಾನ ಕೇಂದ್ರವು ಸಮುದ್ರ ಮಟ್ಟದಿಂದ ೮೪೫ ಮೀ ಎತ್ತರದಲ್ಲಿದೆ. ಸರಾಸರಿ ವಾರ್ಷಿಕವಾಗಿ ೮೦೦ ಮಿ.ಮೀ ಮಳೆಯಾಗುತ್ತದೆ. ಈ ಕೇಂದ್ರವು ೧೬.೨೪ ಹೆಕ್ಟೇರು ಪ್ರದೇಶವನ್ನು ಹೊಂದಿರುತ್ತದೆ.

ಕೃಷಿ ಹವಾಮಾನಕ್ಕನುಗುಣವಾಗಿ ಅಂದರೆ ಮಳೆ ಹಂಚಿಕೆ ಮತ್ತು ಪ್ರಮಾಣ, ಮಣ್ಣಿನ ಗುಣಗಳ ಆಧಾರ, ಸಮುದ್ರ ಮಟ್ಟದಿಂದ ಇರುವ ಎತ್ತರ ಮತ್ತು ಪ್ರಮುಖ ಬೆಳೆಗಳ ಆಧಾರದ ಮೇಲೆ ಕರ್ನಾಟಕ ರಾಜ್ಯವನ್ನು ಹತ್ತು ಕೃಷಿ ವಲಯಗಳನ್ನಾಗಿ ವರ್ಗೀಕರಿಸಲಾಗಿದೆ. ತುಮಕೂರು ಜಿಲ್ಲೆಯ ಹತ್ತು ತಾಲೂಕುಗಳು ಒಟ್ಟು ಮೂರು ಕೃಷಿ ಹವಾಮಾನ ವಲಯಗಳಲ್ಲಿ ಸೇರ್ಪಡೆಯಾಗುತ್ತವೆ. ಅವುಗಳ ವಿವರಗಳನ್ನು ಮುಂದೆ ನೀಡಿದೆ. ಕೃಷಿ ವಲಯ–೪ ಮಧ್ಯಮ ಒಣವಲಯ: ಈ ವಲಯದಲ್ಲಿ ಆರು ತಾಲೂಕುಗಳು ಸೇರುತ್ತವೆ. ಸರಾಸರಿ ವಾರ್ಷಿಕ ಮಳೆ ಪ್ರಮಾಣ ೪೫೫.೫ ಮಿ.ಮೀ.ರಿಂದ ೭೧೭.೪ ಮಿ.ಮೀ. ಇರುತ್ತದೆ. ಬಹುತೇಕ ಸ್ಥಳಗಳಲ್ಲಿ ಮರಳುಮಿಶ್ರಿತ ಕೆಂಪು ಗೋಡು ಮಣ್ಣನ್ನು ಕಾಣಬಹುದು. ಉಳಿದ ಪ್ರದೇಶದಲ್ಲಿ ಆಳವಿಲ್ಲದ ಮತ್ತು ಆಳವಾದ ಕಪ್ಪುಮಣ್ಣನ್ನು ಕಾಣಬಹುದು. ಈ ವಲಯದಲ್ಲಿ ಬರುವ ಆರು ತಾಲೂಕುಗಳೆಂದರೆ ಮಧುಗಿರಿ, ಪಾವಗಡ, ಶಿರಾ, ಕೊರಟಗೆರೆ, ತಿಪಟೂರು ಮತ್ತು ಚಿಕ್ಕನಾಯಕನಹಳ್ಳಿ.

**ಕೃಷಿವಲಯ ೫– ಪೂರ್ವದ ಒಣವಲಯ:**ಈ ವಲಯದಲ್ಲಿ ತುಮಕೂರು ಮತ್ತು ಗುಬ್ಬಿ ತಾಲೂಕುಗಳು ಸೇರುತ್ತವೆ. ಸರಾಸರಿ ವಾರ್ಷಿಕ ಮಳೆ ಪ್ರಮಾಣ ೬೭೯.೧ ನಿಂದ ೮೮೮.೯ ಮಿ.ಮೀ ಇರುತ್ತದೆ. ಬಹುತೇಕ ಪ್ರದೇಶದಲ್ಲಿ ಕೆಂಪು ಗೋಡುಮಣ್ಣನ್ನು ಮತ್ತು ಉಳಿದ ಪ್ರದೇಶದಲ್ಲಿ ಗೋಡು ಮತ್ತು ಜಂಬಿಟ್ಟಿಗೆ ಮೂಲದ ಮಣ್ಣನ್ನು ಕಾಣಬಹುದು.

**ಕೃಷಿ ವಲಯ–೬:ದಕ್ಷಿಣ ಒಣವಲಯ**: ಈ ವಲಯದಲ್ಲಿ ತುರುವೇಕೆರೆ ಮತ್ತು ಕುಣಿಗಲ್ ತಾಲೂಕುಗಳು ಸೇರುತ್ತವೆ. ಸರಾಸರಿ ವಾರ್ಷಿಕ ಮಳೆ ಪ್ರಮಾಣ ೬೭೦.೬ ರಿಂದ ೮೮೮.೬ ಮಿ.ಮೀ ಆಗಿರುತ್ತದೆ. ಮರಳು ಮಿಶ್ರಿತ ಕೆಂಪುಗೋಡು ಮಣ್ಣು ಹಾಗೂ ಅಲ್ಲಲ್ಲಿ ಕಪ್ಪು ಮಣ್ಣನ್ನು ಸಹಾ ಕಾಣಬಹುದು.

ಜಿಲ್ಲೆಯ ಕೆರೆಗಳ ಅಚ್ಚುಕಟ್ಟು ಪ್ರದೇಶ ಹಾಗೂ ನಾಲಾ ಪ್ರದೇಶಗಳಲ್ಲಿ ಜೇಡಿಮಣ್ಣು, ಜೇಡಿಮಿಶ್ರಿತ ಗೋಡು, ಮರಳುಮಿಶ್ರಿತ ಗೋಡು, ಕೆಂಪು ಮರಳು ಮಿಶ್ರಿತಗೋಡು, ನುರಜುಕಲ್ಲು ಮಿಶ್ರಿತ ಗೋಡು ಮಣ್ಣು ಮುಂತಾದ ವಿವಿಧ ರೀತಿಯ ಫಲವತ್ತಾದ ಮಣ್ಣುಗಳು ಕಂಡುಬರುತ್ತವೆ. ಕೆಲ ಪ್ರದೇಶಗಳಲ್ಲಿ ಸಾಮಾನ್ಯವಾಗಿ ನುರಜುಕಲ್ಲು ಮಿಶ್ರಿತ ಮಣ್ಣು, ಮರಳುಮಿಶ್ರಿತ ಗೋಡು ಮತ್ತು ಕೆಂಪುಮಣ್ಣುಗಳು ಕಂಡುಬರುತ್ತವೆ. ವಿವಿಧ ಮಣ್ಣಿನಿಂದ ಆವರಿಸಿರುವ ಪ್ರದೇಶದ ವಿಸ್ತೀರ್ಣದ ಮಾಹಿತಿಯನ್ನು ಕೋಷ್ಟಕ ೪.೧ರಲ್ಲಿ ನೀಡಲಾಗಿದೆ.

**ಕೋಷ್ಟಕ ೪.೧ ಜಿಲ್ಲೆಯ ವಿವಿಧ ಬಗೆಯ ಮಣ್ಣಿನ ಪ್ರದೇಶಗಳು (ಎಕರೆಗಳಲ್ಲಿ)**

| ತಾಲೂಕು | ಕೆಂಪು ಮಣ್ಣು | ಗ್ರಾವೆಲಿ ಮಣ್ಣು | ಮರಳು ಮಿಶ್ರಿತ ಮಣ್ಣು | ಜೇಡಿ ಮಿಶ್ರಿತ ಮಣ್ಣು | ಕೆಂಪು ಬಣ್ಣದ ಗೋಡು ಮಣ್ಣು | ಕಪ್ಪು ಮಣ್ಣು | ಮರಳು ಮಿಶ್ರಿತ ಗೋಡು ಮಣ್ಣು | ಜೇಡಿ ಮಣ್ಣು | ಚೌಳು ಮಣ್ಣು |
|---|---|---|---|---|---|---|---|---|---|
| **ತುಮಕೂರು** | ೧,೧೮,೩೬೨ | ೨೪,೧೭೬ | – | – | ೩೦,೦೩೬ | – | ೬೧,೧೦೦ | ೨೦,೦೦೦ | – |
| **ಮಧುಗಿರಿ** | ೫೦,೦೦೦ | – | – | ೮,೦೦೦ | – | ೨೫,೦೦೦ | – | – | – |

| | | | | | | | | | |
|---|---|---|---|---|---|---|---|---|---|
| ಪಾವಗಡ | ೨೦,೦೦೦ | – | – | ೮೫,೦೦೦ | – | ೪೫೦ | ೨೫,೬೩೨ | ೯,೪೦೦ | – |
| ತಿಪಟೂರು | ೧,೦೦,೦೬೦ | ೨೫,೦೦೦ | – | – | – | ೨,೫೦೦ | ೩೯,೫೦೦ | ೨೨,೦೦೦ | – |
| ತುರುವೇಕೆರೆ | ೫೪,೨೦೦ | ೧೫,೦೦೦ | ೧೦,೦೦೦ | ೧೦,೫೦೦ | ೭೫,೪೮೯ | ೧,೫೦೦ | – | ೧೬,೦೦೦ | – |
| ಕುಣಿಗಲ್ | ೬೫,೨೫೦ | ೨೩,೩೬೭ | ೮,೩೮೭ | – | – | – | – | – | – |
| ಗುಬ್ಬಿ | ೨,೦೦,೦೦೦ | ೮೭,೦೦೦ | ೧೦,೦೦೦ | – | – | ೫,೨೦೦ | – | ೧,೦೦೦ | – |
| ಚಿಕ್ಕನಾಯ್ಕನಹಳ್ಳಿ | – | ೭೧,೯೨೦ | ೪೦,೫೦೦ | – | ೬೦,೧೩೦ | ೬,೦೮೦ | – | – | – |
| ಕೊರಟಗೆರೆ | – | – | ೨೦೦ | – | ೧೦,೦೦೦ | – | ೨೦,೦೦೦ | ೩,೦೦೦ | ೨,೦೦೦ |
| ಶಿರಾ | – | ೪,೨೦೦ | ೧೧,೦೦೦ | ೩,೫೫,೪೪೪ | – | ೮,೦೦೦ | ೫,೦೦೦ | – | – |

**ಮೂಲ: ತುಮಕೂರು ಜಿಲ್ಲಾ ಗ್ಯಾಸೆಟಿಯರ್ ೧೯೬೯.**

## ಹವಾಮಾನ ಮತ್ತು ಬೆಳೆ ಪರಿಸ್ಥಿತಿ

ತುಮಕೂರು ಜಿಲ್ಲೆಯ ವಾರ್ಷಿಕ ವಾಡಿಕೆ ಮಳೆಯು ೫೮೪ ಮಿ.ಮೀ. ಆಗಿದ್ದು, ಜಿಲ್ಲೆಯ ಬಹುತೇಕ ಮಳೆಯನ್ನು ನೈಋತ್ಯ ದಿಕ್ಕಿನಿಂದ ಬರುವ ಮುಂಗಾರು ಮಾರುತದಿಂದ ಪಡೆಯುತ್ತದೆ. ಮುಂಗಾರು ಮಾರುತವು ಜೂನ್‌ನಿಂದ ಸೆಪ್ಟೆಂಬರ್ ಅವಧಿಯಲ್ಲಿ ಬಹಳ ಚುರುಕಾಗಿರುತ್ತದೆ. ಈ ಅವಧಿಯಲ್ಲಿ ಬಿತ್ತನೆ, ಅಂತರ ಬೇಸಾಯ, ಕ್ರಿಮಿ ಕೀಟಗಳ ಹತೋಟಿ, ಕಟಾವು ಇತ್ಯಾದಿ ಚಟುವಟಿಕೆಗಳನ್ನು ಕೃಷಿ ಜಮೀನುಗಳಲ್ಲಿ ಕಾಣಬಹುದು. ರೈತ ಸಮುದಾಯವು ಅತ್ಯಂತ ಚುರುಕಾಗಿ ಕೃಷಿ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡಿರುತ್ತದೆ. ಈಶಾನ್ಯ ದಿಕ್ಕಿನಿಂದ ಅಕ್ಟೋಬರ್–ನವೆಂಬರ್ ತಿಂಗಳಿನ ಅವಧಿಯಲ್ಲಿ ಹಿಂಗಾರು ಮಾರುತದಿಂದ ಬರುವ ಮಳೆಯಿಂದ ಕೆರೆ–ಕುಂಟೆಗಳು ಭರ್ತಿಯಾಗಿ ಮುಂಬರುವ ಒಣ–ಹವೆಯಿಂದ ಕೂಡಿರುವ ತಿಂಗಳುಗಳಲ್ಲಿ ನೀರನ್ನು ಒದಗಿಸುತ್ತದೆ. ಡಿಸೆಂಬರ್‌ನಿಂದ ಮಾರ್ಚ್ ತಿಂಗಳ ಅವಧಿಯಲ್ಲಿ ಬರುವ ಮಳೆಯು ಚದುರಿನಿಂದ ಕೂಡಿರುತ್ತದೆ. ಈ ಮಳೆಯಿಂದ ಬೆಳೆದು ನಿಂತ ಪಸಲಿಗೆ ಯಾವ ಪ್ರಯೋಜನ ಇಲ್ಲದಿದ್ದರೂ ಜಾನುವಾರುಗಳಿಗೆ ಮೇವನ್ನು ಒದಗಿಸುವಲ್ಲಿ ಸಹಾಯವಾಗುತ್ತದೆ. ಏಪ್ರಿಲ್–ಮೇ ಅವಧಿಯಲ್ಲಿ ಈಶಾನ್ಯ ದಿಕ್ಕಿನಿಂದ ಬರುವ ಮಳೆಯು ಅನಿರೀಕ್ಷಿತ ಮತ್ತು ಅಲ್ಪಾವಧಿಯಾಗಿದ್ದು, ಮುಂಬರುವ ಕೃಷಿ ಚಟುವಟಿಕೆಗಳಿಗೆ ಜಮೀನನ್ನು ಸಿದ್ದಗೊಳಿಸಲು ಸಹಾಯವಾಗುತ್ತದೆ. ಈಗಲೂ ಸಹಾ ಜಿಲ್ಲೆಯಲ್ಲಿ ಅತ್ಯಂತ ಚುರುಕಾದ ಕೃಷಿ ಚಟುವಟಿಕೆಗಳನ್ನು ಮುಂಗಾರು (ಜೂನ್–ಸೆಪ್ಟೆಂಬರ್) ಮತ್ತು ಹಿಂಗಾರು (ಅಕ್ಟೋಬರ್–ನವೆಂಬರ್) ಸಮಯದಲ್ಲಿ ಕಾಣಬಹುದು. ನೀರಾವರಿ ಆಶ್ರಯದಲ್ಲಿ ವರ್ಷಪೂರ್ತಿ ಬೆಳೆಗಳನ್ನು ಬೆಳೆಯಬಹುದಾದ ಹವಾಮಾನ ಪರಿಸ್ಥಿತಿ ಇರುತ್ತದೆ. ಜಿಲ್ಲೆಯ ಉಷ್ಣಾಂಶ ೧೮ ಡಿಗ್ರಿ ಸೆಲ್ಸಿಯಸ್ ನಿಂದ ೩೮ ಡಿಗ್ರಿ ಸೆಲ್ಸಿಯಸ್ ಇದ್ದು, ಸಾಧಾರಣವಾಗಿ ಒಣ ಹವೆಯಿಂದ ಕೂಡಿರುತ್ತದೆ.

## ಭೂಮಿಯ ಬಳಕೆ

ಭೌಗೋಳಿಕ ವಿಸ್ತೀರ್ಣದ ಅನುಸಾರ ಜಿಲ್ಲೆಯ ಹತ್ತು ತಾಲೂಕುಗಳಲ್ಲಿ ಶಿರಾ ತಾಲೂಕು ದೊಡ್ಡದಾಗಿದ್ದು, ಕೊರಟಗೆರೆ ತಾಲೂಕು ಅತ್ಯಂತ ಚಿಕ್ಕದಾಗಿರುತ್ತದೆ. ಅರಣ್ಯ ಪ್ರದೇಶದ ವಿಸ್ತೀರ್ಣದಲ್ಲಿ ಗುಬ್ಬಿ ತಾಲೂಕು ಹೆಚ್ಚಿನ ಮತ್ತು ತುರುವೇಕೆರೆ ತಾಲೂಕು ಕಡಿಮೆ ಪ್ರದೇಶವನ್ನು ಹೊಂದಿರುತ್ತದೆ. ಶಿರಾ ತಾಲೂಕು ಸಾಗುವಳಿಗೆ ಲಭ್ಯವಿಲ್ಲದಿರುವ ಹೆಚ್ಚಿನ ಭೂ ವಿಸ್ತೀರ್ಣವನ್ನು ಮತ್ತು ತುರುವೇಕೆರೆ ತಾಲೂಕು ಸಾಗುವಳಿಗೆ ಲಭ್ಯವಿಲ್ಲದಿರುವ ಕಡಿಮೆ ಭೂ ವಿಸ್ತೀರ್ಣವನ್ನು ಹೊಂದಿದೆ. ಸಾಗುವಳಿ ಮಾಡದಿರುವ ಇತರೆ ಭೂ ಪ್ರದೇಶದ ಘಟಕದಲ್ಲಿ ಶಿರಾ ತಾಲೂಕು ಹೆಚ್ಚಿನ ಮತ್ತು ಗುಬ್ಬಿ ತಾಲೂಕು ಕಡಿಮೆ ವಿಸ್ತೀರ್ಣವನ್ನು ಹೊಂದಿರುತ್ತದೆ. ಚಿಕ್ಕನಾಯಕನಹಳ್ಳಿ ತಾಲೂಕು, ಸಾಗುವಳಿಗೆ ಯೋಗ್ಯವಿದ್ದರೂ ಬಂಜರು ಬಿದ್ದಿರುವ ಹೆಚ್ಚಿನ ಭೂಪ್ರದೇಶವನ್ನು ಹೊಂದಿರುತ್ತದೆ. ಈ ವಿಭಾಗದಲ್ಲಿ ತುರುವೇಕೆರೆ ತಾಲೂಕು ಕಡಿಮೆ ಭೂಪ್ರದೇಶವನ್ನು ಹೊಂದಿರುತ್ತದೆ. ಶಿರಾ ತಾಲೂಕು ಹೆಚ್ಚಿನ ಖಾಯಂ ಗೋಮಾಳ ಪ್ರದೇಶವನ್ನು ಹೊಂದಿದ್ದು, ಗುಬ್ಬಿ ತಾಲೂಕು ಕಡಿಮೆ ಪ್ರದೇಶವನ್ನು ಹೊಂದಿರುತ್ತದೆ. ಬೀಳು ಭೂಮಿ ಪ್ರದೇಶದ ವಿಸ್ತೀರ್ಣದಲ್ಲಿ ಪಾವಗಡ ಮತ್ತು ತಿಪಟೂರು ತಾಲೂಕುಗಳು ಕ್ರಮವಾಗಿ ಹೆಚ್ಚಿನ ಮತ್ತು ಕಡಿಮೆ ಪ್ರದೇಶವನ್ನು ಹೊಂದಿರುತ್ತದೆ. ಭೂಬಳಕೆಯ ವಿವರಗಳನ್ನು ಕೋಷ್ಟಕ ೪.೨ ರಲ್ಲಿ ನೀಡಲಾಗಿದೆ.

## ಕೋಷ್ಟಕ ೪.೨: ಭೂಮಿಯ ಬಳಕೆ ವಿವರಗಳು ೨೦೧೨–೧೩

| ತಾಲೂಕು ಗಳು | ಭೌಗೋಳಿಕ ವಿಸ್ತೀರ್ಣ | ಅರಣ್ಯ | ಸಾಗುವಳಿ ಲಭ್ಯವಿಲ್ಲದಿರುವ ಭೂಮಿ | | |
|---|---|---|---|---|---|
| | | | ವ್ಯವಸಾಯೇತರ | ಬಂಜರು | ಒಟ್ಟು |
| ಚಿಕ್ಕನಾಯಕನಹಳ್ಳಿ | ೧,೧೨,೯೮ | ೮,೨೩೫ | ೬,೭೮೫ | ೭,೭೭೩ | ೧೪,೫೫೮ |
| ಗುಬ್ಬಿ | ೧,೨೨,೦೫೭ | ೧೦,೦೯೦ | ೧೭,೪೨೮ | ೪,೯೭೧ | ೨೨,೩೯೯ |
| ಕೊರಟಗೆರೆ | ೭೦,೯೧೯ | ೩,೪೭೬ | ೪,೩೪೯ | ೫,೦೧೩ | ೯,೩೬೨ |
| ಕುಣಿಗಲ್ | ೯೯,೧೧೦ | ೬,೭೮೭ | ೬,೪೫೦ | ೬,೨೨೮ | ೧೨,೬೭೮ |
| ಮಧುಗಿರಿ | ೧,೧೨,೧೧೯ | ೩,೨೭೯ | ೯,೦೪೮ | ೧೨,೬೭೦ | ೨೧,೭೧೮ |
| ಪಾವಗಡ | ೧,೩೫,೮೪೯ | ೫,೮೭೫ | ೭,೨೩೪ | ೬,೧೮೦ | ೧೩,೪೧೪ |
| ಶಿರಾ | ೧,೫೫,೩೭೭ | ೫,೪೫೨ | ೧೦,೭೮೫ | ೧೯,೧೯೭ | ೨೯,೯೮೨ |
| ತಿಪಟೂರು | ೭೬,೫೧೦ | ೫೯೫ | ೭,೪೬೫ | ೩೭೨ | ೭,೮೩೭ |
| ತುಮಕೂರು | ೧,೦೩,೮೫೨ | ೮೨೭ | ೯,೭೦೧ | ೪,೭೫೧ | ೧೪,೪೫೨ |
| ತುರುವೇಕೆರೆ | ೭೫,೯೬೪ | ೫೬೧ | ೬,೦೩೬ | ೩೮೪ | ೬,೪೨೦ |
| ಜಿಲ್ಲಾ ಮೊತ್ತ | ೧೦,೬೪,೭೫೫ | ೪೫,೧೭೭ | ೮೫,೨೮೧ | ೬೭,೫೨೯ | ೧,೫೨,೮೧೦ |

| ತಾಲೂಕು ಗಳು | ಸಾಗುವಳಿ ಮಾಡದಿರುವ ಇತರೆ ಭೂಮಿ | | | |
|---|---|---|---|---|
| | ಸಾಗುವಳಿಗೆ ಯೋಗ್ಯವಾದ ಬಂಜರು | ಖಾಯಂ ಗೋಮಾಳ | ವೃಕ್ಷ ಮತ್ತು ತೋಪು ಗಳು | ಒಟ್ಟು |
| ಚಿಕ್ಕನಾಯಕನಹಳ್ಳಿ | ೧೮,೧೬೪ | ೪,೫೦೦ | ೨೭೧೫ | ೨೫,೩೭೯ |
| ಗುಬ್ಬಿ | ೨,೭೩೧ | ೩,೮೫೦ | ೨,೮೧೧ | ೯,೩೯೨ |
| ಕೊರಟಗೆರೆ | ೨,೭೪೯ | ೯,೮೩೧ | ೩೭೭ | ೧೨,೯೫೭ |
| ಕುಣಿಗಲ್ | ೧೧,೮೭೩ | ೪,೨೪೮ | ೧೭೧ | ೧೬,೨೯೨ |
| ಮಧುಗಿರಿ | ೮,೯೫೩ | ೭,೧೦೦ | ೨,೦೯೩ | ೧೮,೧೪೬ |
| ಪಾವಗಡ | ೫,೬೨೮ | ೭,೪೫೬ | ೫೦೮ | ೧೩,೫೯೨ |
| ಶಿರಾ | ೮,೧೫೧ | ೧೬,೩೧೬ | ೨,೬೮೩ | ೨೭,೧೫೦ |
| ತಿಪಟೂರು | ೧,೯೨೦ | ೭,೦೧೦ | ೪,೬೦೪ | ೧೩,೫೩೪ |
| ತುಮಕೂರು | ೧,೮೧೭ | ೭,೦೯೯ | ೪,೨೯೩ | ೧೩,೨೦೯ |
| ತುರುವೇಕೆರೆ | ೬೫೬ | ೯,೦೪೩ | ೭೭೮ | ೧೦,೪೭೭ |
| ಜಿಲ್ಲಾ ಮೊತ್ತ | ೬೨,೬೪೨ | ೭೬,೪೫೩ | ೨೧,೦೩೩ | ೧,೬೦,೧೨೮ |

## ಕೋಷ್ಟಕ ೪.೨: ಭೂಮಿಯ ಬಳಕೆ ವಿವರಗಳು ೨೦೧೨–೧೩ (ಮುಂದುವರೆದಿದೆ)

| ತಾಲೂಕುಗಳು | ಬೀಳು ಭೂಮಿ | | | ಬಿತ್ತನೆಯಾದ ಪ್ರದೇಶ | | |
|---|---|---|---|---|---|---|
| | ಚಾಲ್ತಿ | ಇತರೆ | ಒಟ್ಟು | ನಿವ್ವಳ | ಒಂದಕ್ಕಿಂತ ಹೆಚ್ಚು | ಒಟ್ಟು |
| ಚಿಕ್ಕನಾಯಕನಹಳ್ಳಿ | ೧,೦೭೮ | ೪೦೪ | ೧,೪೮೨ | ೬೩,೩೪೪ | ೯,೩೫೫ | ೭೨,೬೯೯ |
| ಗುಬ್ಬಿ | ೨೧,೬೪೪ | ೪೫೦ | ೨೨,೦೯೪ | ೫೮,೦೮೨ | ೧೦,೯೬೯ | ೬೯,೦೫೧ |
| ಕೊರಟಗೆರೆ | ೯,೬೬೭ | ೨,೦೨೧ | ೧೧,೬೮೮ | ೩೩,೪೩೬ | ೧,೮೭೯ | ೩೫,೩೧೫ |
| ಕುಣಿಗಲ್ | ೧೯,೦೨೭ | ೨೬೮ | ೧೯,೨೯೫ | ೪೪,೦೫೮ | ೫,೧೪೭ | ೪೯,೨೦೫ |
| ಮಧುಗಿರಿ | ೨೮,೫೦೭ | ೪,೫೩೬ | ೩೩,೦೪೩ | ೩೫,೯೩೩ | ೬,೮೬೧ | ೪೨,೭೯೪ |
| ಪಾವಗಡ | ೩೭,೫೪೦ | ೭,೫೮೮ | ೪೫,೧೨೮ | ೫೭,೮೪೦ | ೫,೦೪೦ | ೬೨,೮೮೦ |
| ಶಿರಾ | ೪೪,೪೦೭ | ೩,೧೭೧ | ೪೭,೫೭೮ | ೪೫,೨೧೫ | ೭,೦೯೦ | ೫೨,೩೦೫ |

| | | | | | | |
|---|---|---|---|---|---|---|
| **ತಿಪಟೂರು** | ೩,೭೮೮ | ೯೨೪ | ೪,೭೧೨ | ೪೯,೮೩೨ | ೭,೪೨೦ | ೫೭,೨೫೨ |
| **ತುಮಕೂರು** | ೧೮,೭೫೯ | ೨,೯೭೬ | ೨೧,೭೩೫ | ೫೩,೬೨೯ | ೪,೭೩೭ | ೫೮,೩೬೬ |
| **ತುರುವೇಕೆರೆ** | ೭,೯೭೧ | ೨,೦೦೩ | ೯,೯೭೪ | ೪೮,೫೩೨ | ೮,೫೪೮ | ೫೭,೦೮೦ |
| **ಜಿಲ್ಲಾ ಮೊತ್ತ** | ೧,೯೨,೩೮೮ | ೨೪,೩೪೧ | ೨,೧೬,೭೨೯ | ೪,೮೯,೯೦೧ | ೬೭,೦೪೬ | ೫,೫೬,೯೪೭ |

**ಆಧಾರ: ತುಮಕೂರು ಜಿಲ್ಲೆಯ ಅಂಕಿ–ಅಂಶಗಳ ನೋಟ. ೨೦೧೧–೧೨. ಜಿಲ್ಲಾ ಸಂಖ್ಯಾ ಸಂಗ್ರಹಣಾಧಿಕಾರಿಗಳವರ ಕಛೇರಿ, ತುಮಕೂರು**

**ಕೃಷಿ ಕೆಲಸಗಾರರು:** ಭಾರತದ ಜನಗಣತಿ ೨೦೧೧ರ ಅನ್ವಯ ಒಟ್ಟು ೫,೦೫,೯೧೦ ಜನರು ಕೃಷಿ ಸಾಗುವಳಿದಾರರು ಮತ್ತು ೩,೫೨,೨೮೬ ಜನರು ಕೃಷಿ ಕಾರ್ಮಿಕರಿದ್ದಾರೆ. ೨೦೦೩–೦೪ರಲ್ಲಿ ಒಟ್ಟು ೬,೦೨,೩೬೧ ಜನರು ಕೃಷಿ ಸಾಗುವಳಿದಾರರು ಮತ್ತು ೩,೧೩,೯೦೬ ಜನರು ಕೃಷಿ ಕಾರ್ಮಿಕರಿದ್ದರು. ಕೃಷಿ ಸಾಗುವಳಿದಾರರ ಸಂಖ್ಯೆಯಲ್ಲಿ ಇಳಿಮುಖವಾಗಿರುವುದು ಮತ್ತು ಕೃಷಿ ಕಾರ್ಮಿಕರ ಸಂಖ್ಯೆಯಲ್ಲಿ ಸ್ವಲ್ಪಮಟ್ಟಿಗೆ ಹೆಚ್ಚಾಗಿರುವುದು ಕಂಡುಬರುತ್ತದೆ. ೨೦೧೧ರ ಜನಗಣತಿಯಂತೆ ಸಾಗುವಳಿದಾರರಲ್ಲಿ ೩,೫೫,೨೭೭ ಮಂದಿ ಪುರುಷರು ಮತ್ತು ೧,೫೦,೬೩೩ ಮಂದಿ ಮಹಿಳೆಯರಿದ್ದರೆ ಕೃಷಿ ಕಾರ್ಮಿಕರಲ್ಲಿ ೧,೪೨,೦೭೩ ಮಂದಿ ಪುರುಷರು ಮತ್ತು ೨,೧೦,೨೧೩ ಮಂದಿ ಮಹಿಳೆಯರಾಗಿದ್ದಾರೆ. ಇಂದಿಗೂ ಸಹಾ ಕೃಷಿ ಚಟುವಟಿಕೆಯಲ್ಲಿ ಮಹಿಳೆಯ ಪಾತ್ರ ಅನನ್ಯವಾಗಿರುವುದು ಕಂಡುಬರುತ್ತದೆ. ಕೃಷಿ ಸಾಗುವಳಿದಾರರು ಮತ್ತು ಕೃಷಿ ಕಾರ್ಮಿಕರ ವಿವರಗಳನ್ನು ಹಾಗೂ ಒಟ್ಟು ಕೆಲಸಗಾರರಿಗೆ ಅನುಗುಣವಾಗಿ ಈ ವರ್ಗಗಳ ಶೇಕಡಾವಾರು ಮಾಹಿತಿಯನ್ನು ಮತ್ತು ವಿವಿಧ ಪ್ರಮಾಣದ ಭೂ ಹಿಡುವಳಿದಾರರ ವಿವರಗಳನ್ನು ಮುಂದಿನ ಕೋಷ್ಟಕ ೪.೩ ರಲ್ಲಿ ನೀಡಲಾಗಿದೆ.

### ಕೋಷ್ಟಕ ೪.೩: ತುಮಕೂರು ಜಿಲ್ಲೆಯಲ್ಲಿನ ಕೃಷಿ ಸಾಗುವಳಿದಾರರು ಮತ್ತು ಒಟ್ಟು ಕೆಲಸಗಾರರಿಗೆ ಅನುಗುಣವಾಗಿ ಶೇಕಡಾವಾರು ಮಾಹಿತಿ

| | **ಕೃಷಿ ಸಾಗುವಳಿದಾರರು** | | | **ಒಟ್ಟು ಕೆಲಸಗಾರರಿಗೆ ಅನುಗುಣವಾಗಿ ಶೇಕಡಾವಾರು ಮಾಹಿತಿ** | | | | | |
|---|---|---|---|---|---|---|---|---|---|
| | **೨೦೧೧** | | | **೨೦೦೧** | | | **೨೦೧೧** | | |
| | **ಒಟ್ಟು** | **ಗ್ರಾಮೀಣ** | **ನಗರ** | **ಒಟ್ಟು** | **ಗ್ರಾಮೀಣ** | **ನಗರ** | **ಒಟ್ಟು** | **ಗ್ರಾಮೀಣ** | **ನಗರ** |
| **ಒಟ್ಟು** | ೫,೦೫,೯೧೦ | ೪,೯೬,೫೫೭ | ೯,೩೫೩ | ೪೫.೭೪ | ೫೫.೫೧ | ೫.೩೭ | ೩೫.೩೫ | ೪೪.೩೩ | ೩.೯೯ |
| **ಪುರುಷರು** | ೩,೫೫,೨೭೭ | ೩,೪೭,೨೯೭ | ೭,೯೮೦ | ೪೮.೮೮ | ೫೮.೪೬ | ೫.೪೭ | ೪೨.೪೨ | ೫೨.೨೨ | ೪.೬೩ |
| **ಮಹಿಳೆಯರು** | ೧,೫೦,೬೩೩ | ೧,೪೯,೨೬೦ | ೧,೩೭೩ | ೪೧ | ೪೪.೪೬ | ೫.೦೫ | ೨೯.೧೩ | ೩೨.೭೯ | ೨.೨೨ |
| | **ಕೃಷಿ ಕಾರ್ಮಿಕರು** | | | **ಒಟ್ಟು ಕೆಲಸಗಾರರಿಗೆ ಅನುಗುಣವಾಗಿ ಶೇಕಡಾವಾರು ಮಾಹಿತಿ** | | | | | |
| | **೨೦೧೧** | | | **೨೦೦೧** | | | **೨೦೧೧** | | |
| **ಒಟ್ಟು** | ೩,೫೨,೨೮೬ | ೩,೪೫,೦೭೧ | ೭,೨೧೫ | ೨೩.೮೪ | ೨೭.೨ | ೩.೭೫ | ೨೬.೦೪ | ೩೦.೮ | ೩.೦೮ |
| **ಪುರುಷರು** | ೧,೪೨,೦೭೩ | ೧,೩೭,೯೨೯ | ೪,೧೪೪ | ೧೪.೯೨ | ೧೭.೬೫ | ೨.೫೫ | ೧೬.೯೬ | ೨೦.೭೪ | ೨.೪ |
| **ಮಹಿಳೆಯರು** | ೨,೧೦,೨೧೩ | ೨,೦೭,೧೪೨ | ೩,೦೭೧ | ೩೭.೨೬ | ೪೦.೧೨ | ೭.೫೧ | ೪೦.೬೫ | ೪೫.೫೧ | ೪.೯೬ |

ಮೂಲ: ೨೦೧೧ರ ಭಾರತದ ಜನಗಣತಿ, ಪ್ರೈಮರಿ ಜನಗಣತಿ ಘೋಷ್ವಾರೆ, ಮಾಹಿತಿ ಪ್ರಮುಖಾಂಶ ಕರ್ನಾಟಕ ಸರಣಿ ೩೦(Census of India 2011, Primary Census Abstract, Data Highlights, Karnataka, Series 30)

### ಕೋಷ್ಟಕ ೪.೩: ತುಮಕೂರು ಜಿಲ್ಲೆಯಲ್ಲಿನ ಕೃಷಿ ಸಾಗುವಳಿದಾರರು ಮತ್ತು ಒಟ್ಟು ಕೆಲಸಗಾರರಿಗೆ ಅನುಗುಣವಾಗಿ ಶೇಕಡಾವಾರು ಮಾಹಿತಿ(ªÀÄÄAzÀÄªÀgÉzÀzÀÄÝ)

| **ವಿವರ** | **ಸಂಖ್ಯೆ** | | | | **ವಿಸ್ತೀರ್ಣ (ಹೆಕ್ಟೇರ್)** | | | |
|---|---|---|---|---|---|---|---|---|
| | **ಪುರುಷ** | **ಮಹಿಳೆ** | **ಸಂಘ ಸಂಸ್ಥೆಗಳು** | **ಒಟ್ಟು** | **ಪುರುಷ** | **ಮಹಿಳೆ** | **ಸಂಘ ಸಂಸ್ಥೆಗಳು** | **ಒಟ್ಟು** |
| **ಅತಿ ಸಣ್ಣ ಭೂಹಿಡುವಳಿದಾರರು (ಒಂದು ಹೆಕ್ಟೇರಿಗಿಂತ ಕಡಿಮೆ)** | | | | | | | | |
| **ಪರಿಶಿಷ್ಟಜಾತಿ** | ೨೩,೬೪೬ | ೬,೫೨೧ | ೦ | ೩೦,೧೬೭ | ೧೧,೫೫೩.೫೧ | ೩,೩೧೦.೦೫ | ೦ | ೧೪,೮೬೩.೫೬ |

| | | | | | | | | |
|---|---|---|---|---|---|---|---|---|
| **ಪರಿಶಿಷ್ಟಪಂಗಡ** | ೧೦,೧೨೧ | ೩,೧೫೦ | ೦ | ೧೩,೨೭೧ | ೫,೦೫೬.೮೭ | ೧,೪೧೦.೩೫ | ೦ | ೬,೬೬೭.೨೨ |
| **ಇತರೆ** | ೧,೧೫,೨೦೭ | ೩೮,೪೯೦ | ೦ | ೧,೫೩,೬೯೭ | ೭೦,೦೦೩.೨೩ | ೧೭,೩೯೭.೯೮ | ೦ | ೮೭,೪೦೧.೨೧ |
| **ಒಟ್ಟು** | ೧,೪೮,೯೭೪ | ೪೮,೧೬೧ | ೧೨೮ | ೧,೯೭,೨೬೩ | ೮೬,೬೧೩.೬೧ | ೨೨,೩೧೮.೩೮ | ೫೧.೦೩ | ೧,೦೮,೯೮೩ |
| **ಸಣ್ಣ ಭೂಹಿಡುವಳಿದಾರರು (ಒಂದರಿಂದ ಎರಡು ಹೆಕ್ಟೇರ್‌ವರೆಗೆ)** | | | | | | | | |
| **ಪರಿಶಿಷ್ಟಜಾತಿ** | ೧೧,೭೫೧ | ೨,೯೯೩ | ೦ | ೧೪,೭೮೮ | ೧೬,೫೪೧.೧೫ | ೪,೨೪೯.೯೨ | ೦ | ೨೦,೮೦೧.೦೨ |
| **ಪರಿಶಿಷ್ಟಪಂಗಡ** | ೫,೯೩೫ | ೧,೬೫೬ | ೦ | ೭,೫೯೧ | ೮,೩೬೭.೬೯ | ೨,೩೩೬.೮೧ | ೦ | ೧೦,೭೦೪.೫ |
| **ಇತರೆ** | ೭೪,೦೭೨ | ೧೬,೯೮೬ | ೦ | ೯೧,೦೬೧ | ೧,೦೪,೪೬೨.೨೬ | ೨೩,೯೧೩.೩೩ | ೦ | ೧,೨೮,೩೭೫.೬ |
| **ಒಟ್ಟು** | ೯೧,೭೫೮ | ೨೧,೬೩೮ | ೪೦ | ೧,೧೩,೪೩೬ | ೧,೨೯,೩೭೦.೧ | ೩೩,೫೪೧.೫೨ | ೧೧೭.೪೧ | ೧೯,೨೪೩.೫೪ |
| **ಅರೆ ಮಧ್ಯಮ ಭೂ ಹಿಡುವಳಿದಾರರು(ಎರಡರಿಂದ ನಾಲ್ಕು ಹೆಕ್ಟೇರ್‌ಗಳವರೆಗೆ)** | | | | | | | | |
| **ಪರಿಶಿಷ್ಟಜಾತಿ** | ೫,೨೬೦ | ೧,೨೫೭ | ೦ | ೬,೫೧೭ | ೧೩,೮೫೮.೩೯ | ೩,೩೫೩.೫೩ | ೦ | ೧೭,೨೧೧.೯೨ |
| **ಪರಿಶಿಷ್ಟಪಂಗಡ** | ೩,೫೯೧ | ೯೧೩ | ೦ | ೪,೫೦೪ | ೯,೬೪೧.೫೧ | ೨,೪೭೦.೬೬ | ೦ | ೧೨,೧೧೨.೧೭ |
| **ಇತರೆ** | ೪೯,೭೮೮ | ೧೦,೨೧೯ | ೦ | ೬೦,೦೦೭ | ೧,೩೫,೨೭೩.೭೧ | ೨೭,೭೧೭.೩೩ | ೦ | ೧,೬೨,೯೯೧ |
| **ಒಟ್ಟು** | ೫೮,೬೩೯ | ೧೨,೩೮೯ | ೪೨ | ೭೧,೦೭೦ | ೧,೫೮,೭೭೩.೬೧ | ೩೩,೫೪೧.೫೨ | ೧೧೭.೪೧ | ೧೯,೨೪೩.೫ |
| **ಮಧ್ಯಮ ಭೂ ಹಿಡುವಳಿದಾರರು (ನಾಲ್ಕರಿಂದ ಹತ್ತು ಹೆಕ್ಟೇರ್‌ಗಳಿಗಿಂತ ಹೆಚ್ಚು)** | | | | | | | | |
| **ಪರಿಶಿಷ್ಟಜಾತಿ** | ೧,೩೪೯ | ೩೨೮ | ೦ | ೧,೬೭೭ | ೭,೬೧೫.೮೮ | ೧,೮೧೦.೭೮ | ೦ | ೯,೪೨೬.೬೩ |
| **ಪರಿಶಿಷ್ಟಪಂಗಡ** | ೧,೩೨೮ | ೨೪೬ | ೦ | ೧,೫೭೪ | ೭,೨೨೮.೨೩ | ೧,೩೬೩.೨೪ | ೦ | ೮,೫೯೧.೪೭ |
| **ಇತರೆ** | ೨೧,೭೨೮ | ೪,೧೩೧ | ೦ | ೨೫,೮೫೯ | ೧೨,೨೨೬೮.೬ | ೨೩,೧೦೯.೨೩ | ೦ | ೧,೪೫,೩೭೭.೮ |
| **ಒಟ್ಟು** | ೨೪,೪೦೫ | ೪,೭೦೫ | ೨೨ | ೨೯,೧೩೨ | ೧,೩೭,೧೧೨.೭೧ | ೨೬,೨೮೩.೨೨ | ೧೩೭.೬೪ | ೧,೬೩,೫೩೩.೬ |
| **ದೊಡ್ಡ ಭೂ ಹಿಡುವಳಿದಾರರು (ಹತ್ತು ಹೆಕ್ಟೇರ್‌ಗಳಿಗಿಂತ ಹೆಚ್ಚು)** | | | | | | | | |
| **ಪರಿಶಿಷ್ಟಜಾತಿ** | ೧೪೩ | ೨೦ | ೦ | ೧೬೩ | ೧,೯೯೪.೨೫ | ೨೬೩.೩೬ | ೦ | ೨,೨೫೭.೬೧ |
| **ಪರಿಶಿಷ್ಟಪಂಗಡ** | ೧೯೫ | ೪೧ | ೦ | ೯೩೬ | ೨,೬೩೧.೪೬ | ೫೪೭.೨೯ | ೦ | ೩,೧೭೮.೭೫ |
| **ಇತರೆ** | ೨,೬೬೫ | ೪೪೯ | ೦ | ೨,೧೧೪ | ೩೮,೪೯೮.೨೩ | ೬,೬೦೧.೯೩ | ೦ | ೪೫,೧೦೦.೧೬ |
| **ಒಟ್ಟು** | ೩,೦೦೩ | ೫೧೦ | ೧೪ | ೩,೫೨೭ | ೪೩,೧೨೩.೯೪ | ೭,೪೧೨.೫೮ | ೯೬೨.೩೩ | ೫೧,೪೯೮.೮೫ |
| **ಒಟ್ಟು ಭೂ ಹಿಡುವಳಿದಾರರು** | | | | | | | | |
| **ಪರಿಶಿಷ್ಟಜಾತಿ** | ೪೨,೧೨೮ | ೧೧,೦೩೭ | ೦ | ೫೩,೧೬೫ | ೫೧,೧೭೫.೫೩ | ೧೨,೫೪೯.೭ | ೦ | ೬೩,೭೨೫.೨೩ |
| **ಪರಿಶಿಷ್ಟಪಂಗಡ** | ೨೧,೧೯೧ | ೬,೦೮೮ | ೦ | ೨೭,೨೭೯ | ೩೩,೩೧೩.೪೧ | ೮,೭೭,೫೮೬ | ೦ | ೪೨,೦೮೯.೨೭ |
| **ಇತರೆ** | ೨,೬೩,೪೬೦ | ೭೦,೨೭೮ | ೦ | ೩,೩೩,೭೩೮ | ೪,೭೦,೫೦೬.೦೨ | ೯೮,೭೩೯.೮ | ೦ | ೫,೬೯,೨೪೫.೮ |
| **ಒಟ್ಟು** | ೩,೨೬,೭೭೯ | ೮೭,೪೦೨ | ೨೪೬ | ೪,೧೪,೪೨೮ | ೫,೫೪,೯೯೪.೯೭ | ೧,೨೦,೦೬೫.೮ | ೧,೩೨೭.೬೯ | ೬,೭೬,೩೮೮.೪ |

## ನೀರಾವರಿ ಸಂಪನ್ಮೂಲಗಳು

ತುಮಕೂರು ಜಿಲ್ಲೆಯಲ್ಲಿ ದೊಡ್ಡಜೀವನದಿಗಳಿಲ್ಲ. ಕೆಲವಾರು ಸಣ್ಣನದಿಗಳೂ, ಅನೇಕ ದೊಡ್ಡಹಳ್ಳಗಳು ಬೆಟ್ಟಗುಡ್ಡಗಳಲ್ಲಿ ಹುಟ್ಟಿ ಅನೇಕ ಕೆರೆಕಟ್ಟೆಗಳಿಗೆ ನೀರನ್ನು ಒದಗಿಸುತ್ತವೆ. ಈ ನದೀಹಳ್ಳಗಳು ಬೇಸಗೆ ಮತ್ತು ಅಭಾವ ಕಾಲದಲ್ಲಿ ಬತ್ತಿರುತ್ತವೆ. ಮಳೆಗಾಲದಲ್ಲಿ ಮಾತ್ರ ನೀರುಣಿಸುತ್ತವೆ. ಜಿಲ್ಲೆಯ ಮುಖ್ಯನದಿಗಳಲ್ಲಿ ದೇವರಾಯನದುರ್ಗದಲ್ಲಿ ಹುಟ್ಟಿ ಮಧುಗಿರಿ ಕೊರಟಗೆರೆ ತಾಲೂಕುಗಳಲ್ಲಿ ಹರಿಯುವ ಜಯಮಂಗಲೀ ನದಿ; ದೇವರಾಯನದುರ್ಗಕ್ಕೆ ದಕ್ಷಿಣದಲ್ಲಿ ಹುಟ್ಟಿ ಗುಬ್ಬಿ, ತುರುವೇಕೆರೆ, ಕುಣಿಗಲ್ ತಾಲೂಕುಗಳಲ್ಲಿ ಹರಿದು ಕಾವೇರಿಯನ್ನು ಸೇರುವ ಶಿಂಷಾ ನದಿ ಇವು ಮುಖ್ಯನದಿಗಳು. ದೇವರಾಯನದುರ್ಗದಲ್ಲಿ ಹುಟ್ಟುವ ಗರುಡಾಚಲ ಎಂಬ ಸಣ್ಣ ನದಿಯೂ, ಸಿದ್ದರಬೆಟ್ಟದಲ್ಲಿ ಹುಟ್ಟುವ ಸುವರ್ಣಮುಖಿ ಎಂಬ ಸಣ್ಣ ನದಿಯೂ ಸಹ ಜಯಮಂಗಲೀ ನದಿಯನ್ನು ಸೇರುವ ಉಪನದಿಗಳು. ಇವುಗಳಲ್ಲದೆ ಪಾವಗಡ ತಾಲೂಕಿನ ಈಶಾನ್ಯ ಮೂಲೆಯಲ್ಲಿ ಉತ್ತರ ಪಿನಾಕಿನಿ ನದಿಯು ಹಲವು ಕಿಲೋಮೀಟರ್ ಗಳಷ್ಟು ಹರಿಯುತ್ತದೆ. ನದಿಗಳ ಜೊತೆಗೆ ಜಿಲ್ಲೆಯ ಮುಖ್ಯ ನೀರಾವರಿ ಆಸರೆಗಳೆಂದರೆ ಕೆರೆ–ಅಣೆಕಟ್ಟೆ ಜಲಾಶಯ ಮತ್ತು ತಲಪರಿಗೆಗಳು. ಕೆರೆಗಳಲ್ಲಿ ಮಾವತ್ತೂರು,

ಕುಣಿಗಲ್, ಗುಬ್ಬಿ, ಕಡಬ, ಕಡಗತ್ತೂರು, ನೊಣವಿನಕೆರೆ, ಕಳ್ಳಂಬೆಳ್ಳ, ಮೈದಾಳ ಮತ್ತು ಮಲ್ಲಾಘಟ್ಟದ ಕೆರೆಗಳು ದೊಡ್ಡ ಕೆರೆಗಳಾಗಿವೆ. ಕುಣಿಗಲ್ ತಾಲೂಕಿನಲ್ಲಿರುವ ಮಾರ್ಕೋನಹಳ್ಳಿ ಜಲಾಶಯ ಮತ್ತು ಮಂಗಳಾ ಜಲಾಶಯ, ಕೊರಟಗೆರೆ ತಾಲೂಕಿನ ಇರಕಸಂದ್ರ ಅಣೆಕಟ್ಟೆ, ತೀತಾಜಲಾಶಯ; ಚಿಕ್ಕನಾಯಕನಹಳ್ಳಿ ತಾಲೂಕಿನ ಬೋರನ ಕಣಿವೆ ಅಣೆಕಟ್ಟೆಗಳು ಅತಿಮುಖ್ಯವಾದ ನೀರಿನ ಆಸರೆಗಳಾಗಿವೆ. ಇವುಗಳ ಜೊತೆಗೆ ತಲಪರಿಗೆ ಆಸರೆಗಳೂ ಜಿಲ್ಲೆಯಲ್ಲಿ ಹೇರಳವಾಗಿವೆ.

**ಜಯಮಂಗಲಾ ನದಿ:** ಜಯ ಮತ್ತು ಮಂಗಲಾ ಎಂಬ ಎರಡು ನದಿಗಳು ಸೇರಿ ಜಯಮಂಗಲಾ(ಲಿ) ನದಿಯಾಗಿದೆ. ದೇವರಾಯನದುರ್ಗದ ಇಳಿಜಾರಿನಲ್ಲಿ ಮಂಗಲಾನದಿಯ ಮೂಲವೆನ್ನಲಾದ ಕೊಳವೊಂದಿದೆ. ಅಲ್ಲಿಯೇ ದುರ್ಗದ ಮೇಲ್ಭಾಗದಲ್ಲಿ ಜಯ ನದಿಯ ಮೂಲವೆನಿಸುವ ಜಯತೀರ್ಥವು ಜಲದಗೊಂದಿ ಎಂಬ ಗಿರಿಕಂದರದಲ್ಲಿದೆ. ಈ ಎರಡೂ ನದಿಗಳೂ ಜಯಮಂಗಲಾ ನದಿಯಾಗಿ ದುರ್ಗದ ತಪ್ಪಲಿನ ಇರಕಸಂದ್ರದಲ್ಲಿ ಸೇರಿ ಮುಂದೆ ಹರಿದಿದೆ. ಕೊರಟಗೆರೆ ತಾಲೂಕಿನ ಹೊಳವನಹಳ್ಳಿ ಬಳಿ ಪೂರ್ವಭಾಗದಿಂದ ಹರಿದು ಬಂದ ಗರುಡಾಚಲ ಉಪನದಿಯು ಜಯಮಂಗಲಿಯನ್ನು ಕೂಡುತ್ತದೆ. ಅಲ್ಲಿಂದ ಮುಂದೆ ಕೊರಟಗೆರೆ ತಾಲೂಕಿನ ರಾಂಪುರದ ಬಳಿ ಪಶ್ಚಿಮದ ಕಡೆಯಿಂದ ಹರಿದು ಬಂದ ಸುವರ್ಣಮುಖಿಯು ಜಯಮಂಗಲಿಯನ್ನು ಸೇರುತ್ತದೆ. ಅಲ್ಲಿಂದ ಮುಂದೆ ಮಧುಗಿರಿ ತಾಲೂಕಿನಲ್ಲಿಯೇ ಪೂರ್ವಾಭಿಮುಖವಾಗಿ ಹರಿದು ಮುಂದೆ ಅನಂತಪುರ ಜಿಲ್ಲೆಯ (ಆಂಧ್ರದ) ಪರಿಗಿಯ ಸಮೀಪದಲ್ಲಿ ಜಯಮಂಗಲಿಯು ಉತ್ತರ ಪಿನಾಕಿನಿಯನ್ನು ಕೂಡುತ್ತದೆ. ಜಯಮಂಗಲಿ ನದಿಯ ಉದ್ದಕ್ಕೂ ಎರಡುದಂಡೆಗಳಲ್ಲೂ ಕಪಿಲೆಗಳಿಂದ ನೀರನ್ನು ಉಪಯೋಗಿಸಿಕೊಳ್ಳುತ್ತಾರೆ. ಮತ್ತೆ ಕೆಲವು ಆಯಕಟ್ಟು ಪ್ರದೇಶಗಳಲ್ಲಿ ಕಾಲುವೆಗಳನ್ನು ತೋಡಿ ನೀರನ್ನು ಬಳಸಿಕೊಳ್ಳುತ್ತಾರೆ. ಅಲ್ಲದೆ ಈ ನದಿಯ ಅಕ್ಕಪಕ್ಕಗಳಲ್ಲಿ ಅಲ್ಲಲ್ಲಿ ತಲಪರಿಗೆ ಹಾಗೂ ಊಟೆ ಬಾವಿಗಳಿವೆ.

**ಶಿಂಷಾನದಿ:** ಕಾವೇರಿಯನ್ನು ಕೂಡುವ ಶಿಂಷಾ ನದಿಗೆ ಶಿಂಶುಸಾ, ಕದಂಬ, ಕಡಬಕೊಳ ಎಂಬ ಹೆಸರುಗಳುಂಟು. ಶಿಂಷಾನದಿಯು ದೇವರಾಯನದುರ್ಗದ ದಕ್ಷಿಣ ಸಾಲುಪ್ರದೇಶದಲ್ಲಿ ಹುಟ್ಟಿ ಹರಿದು ಗುಬ್ಬಿ ತಾಲೂಕಿನಲ್ಲಿ ನೈಋತ್ಯಾಭಿಮುಖವಾಗಿ ಹರಿದು ಕಡಬದ ಬಳಿ ದೊಡ್ಡ ಜಲಾಶಯವಾಗಿ ರೂಪುಗೊಳ್ಳುತ್ತದೆ. ಇದೇ ಕಡಬದ ಕೆರೆ. ನಂತರ ಶಿಂಷಾ ನದಿಯು ದಕ್ಷಿಣಾಭಿಮುಖವಾಗಿ ಹರಿದು ಕಲ್ಲೂರಿನ ಬಳಿ ನಾಗ ಹೊಳೆಯನ್ನು ಒಳಗೊಳ್ಳುತ್ತದೆ. ಈ ನಾಗ ಹೊಳೆಯು ತುರುವೇಕೆರೆ ತಾಲೂಕಿಗೆ ನೀರುಣಿಸುವ ದೊಡ್ಡ ಹೊಳೆ. ಅಲ್ಲಿಂದ ಮುಂದೆ ಕುಣಿಗಲ್ ತಾಲೂಕಿನಲ್ಲಿ ತನ್ನ ಪಾತ್ರವನ್ನು ವಿಸ್ತರಿಸುವ ಶಿಂಷಾ ನದಿಯು, ಕುಣಿಗಲ್ ದೊಡ್ಡಕೆರೆಯಿಂದ ಆವಿರ್ಭವಿಸುವ ನಾಗಿನೀ ನದಿಯನ್ನು ಕೂಡಿಕೊಂಡು ಹರಿದು ಹುಲಿಯೂರುದುರ್ಗದ ಅಂಚಿನಲ್ಲಿ ಮುಂದುವರಿದು ಮಂಡ್ಯ ಜಿಲ್ಲೆಯಲ್ಲಿ ಕಾವೇರಿಯನ್ನು ಸೇರುವುದು. ಈ ಶಿಂಷಾನದಿಗೆ ಅಡ್ಡಲಾಗಿ ಮಾರ್ಕೋನಹಳ್ಳಿಯ ಬಳಿ ೧೯೩೯ರಲ್ಲಿ ಅಣೆಕಟ್ಟನ್ನು ಕಟ್ಟಲಾಯಿತು. ಈ ಅಣೆಕಟ್ಟೆಯ ನೀರು ೪೪೫೫ ಹೆಕ್ಟೇರ್ ಅಚ್ಚುಕಟ್ಟು ಪ್ರದೇಶಕ್ಕೆ ಒದಗಿ ಕುಣಿಗಲ್ ತಾಲೂಕಿನ ಬಹುಭಾಗವು ಸಸ್ಯಶ್ಯಾಮಲವಾಗಿದೆ.

**ಸುವರ್ಣಮುಖಿ:** ಕೊರಟಗೆರೆ ತಾಲೂಕಿನ ಚನ್ನರಾಯನದುರ್ಗ ಪರ್ವತಶ್ರೇಣಿಯ ಸಿದ್ಧರಬೆಟ್ಟದಲ್ಲಿ ಹುಟ್ಟಿ ಸುವರ್ಣಮುಖಿಯು ಕೊರಟಗೆರೆ ತಾಲೂಕಿನಲ್ಲಿ ಸುಮಾರು ೨೪೧.೫ ಕಿ.ಮೀ ದೂರಕ್ರಮಿಸಿ ರಾಂಪುರದ ಬಳಿ ಪಶ್ಚಿಮದ ಕಡೆಯಿಂದ ಜಯಮಂಗಲಿಯನ್ನು ಕೂಡುತ್ತದೆ. ಈ ನದಿಗೆ ಅಡ್ಡಲಾಗಿ ೧೮೮೮ರಿಂದ ೧೮೯೨ರವರೆಗೆ ಕ್ಷಾಮ ಪರಿಹಾರ ಕಾಮಗಾರಿ ಯೋಜನೆ ಅನ್ವಯ ಬೋರನಕಣಿವೆ ಜಲಾಶಯವನ್ನು ನಿರ್ಮಿಸಲಾಗಿದೆ. ಈ ಜಲಾಶಯದಿಂದ ೫೬೭ ಹೆಕ್ಟೇರ್ ಅಚ್ಚುಕಟ್ಟಿಗೆ ನೀರು ಸರಬರಾಜಾಗುತ್ತದೆ.

**ಗರುಡಾಚಲ:** ಗರುಡಾಚಲವು ದೇವರಾಯನ ದುರ್ಗದ ಬೆಟ್ಟಸರಣಿಯ ಆಗ್ನೇಯಮೂಲೆಯಲ್ಲಿ ಹುಟ್ಟಿ ಉತ್ತರಾಭಿಮುಖವಾಗಿ ಕೊರಟಗೆರೆ ತಾಲೂಕಿನಲ್ಲಿ ಹರಿದು, ಹೊಳವನಹಳ್ಳಿಯ ಬಳಿ ಜಯಮಂಗಲಿ ನದಿಯನ್ನು ಸೇರುತ್ತದೆ. ಈ ನದಿಗೆ ಅಡ್ಡಲಾಗಿ ಅಣೆಕಟ್ಟೆಯೊಂದನ್ನು ತೀತದ ಸಮೀಪದಲ್ಲಿ ನಾಲ್ಕು ಕೋಟಿ ವೆಚ್ಚದಲ್ಲಿ ಜಲಾಶಯವನ್ನು ನಿರ್ಮಿಸಲಾಗಿದೆ. ಉತ್ತರ ಪಿನಾಕಿನಿ: ಉತ್ತರ ಪಿನಾಕಿನಿಗೆ ಪೆನ್ನಾರ್ (ಪೆನ್ನೇರು) ಎಂದೂ ಹೆಸರಿದೆ. ಇದು ಪಾವಗಡ ತಾಲೂಕಿನಲ್ಲಿ ಕೆಲವು ಮೈಲಿಗಳಷ್ಟು ಹರಿಯುತ್ತದೆ. ತಾಲೂಕಿನ ಮುಕ್ಕಾಲು ಭಾಗವು ಈ ನದಿ ಆಸರೆಗೆ ಒಳಪಟ್ಟಿದೆ. ಇದು ತಾಲೂಕಿನ ಅಂಚಿನಲ್ಲಿ ೪.೮೩ ಕಿ.ಮೀ ಹರಿದ ನಂತರ ಪೆನುಗೊಂಡ ತಾಲೂಕಿನಲ್ಲಿ ನುಗ್ಗಿ ೧೪೫ ಕಿ.ಮೀ ಹರಿದು ನಂತರ ಪಾವಗಡ ತಾಲೂಕಿನ ಪೆಂಡ್ಲಿಜೀವಿ ಬಳಿ ಪ್ರವಹಿಸಿ ನಂತರ ಅನಂತಪುರ ಜಿಲ್ಲೆಯಲ್ಲಿ ಮುಂದುವರಿಯುತ್ತದೆ.

**ಕುಮುದ್ವತಿ (ಕುಂದೇರು):** ಬೆಂಗಳೂರು ಜಿಲ್ಲೆಯ ದೊಡ್ಡಬಳ್ಳಾಪುರ ತಾಲೂಕಿನ ಮಾಕಳಿದುರ್ಗದ ಬಳಿ ಹುಟ್ಟಿ ಹರಿಯುವ ಕುಮುದ್ವತಿ ನದಿಯು ಗೌರಿಬಿದನೂರು, ಮಧುಗಿರಿ ತಾಲೂಕುಗಳಲ್ಲಿ ಪ್ರವಹಿಸಿ ಉತ್ತರ ಪಿನಾಕಿನಿಯನ್ನು ಸ್ವಲ್ಪದೂರದಲ್ಲಿ ಸೇರುತ್ತದೆ. ನದಿಯು ಅತಿ ಸಣ್ಣ ಪಾತ್ರವುಳ್ಳದಾಗಿ ಶರವೇಗದಿಂದ ಧಾವಿಸುವುದರಿಂದ ಮಳೆಗಾಲದಲ್ಲಿ ಇದನ್ನು ದಾಟಲು ಜನರು ಅಂಜುತ್ತಾರೆ. ನಾಗಿನಿ:ನಾಗಿನಿ(ಣಿ) ನದಿಯು ಕುಣಿಗಲ್ ದೊಡ್ಡ ಕೆರೆಯಿಂದ ಆವಿರ್ಭವಿಸುತ್ತದೆ. ಇದು ಕುಣಿಗಲ್ ತಾಲೂಕಿನಲ್ಲಿ ಎಂಟು ಕಿ.ಮೀ ದೂರ ಹರಿದು ಹನುಮನಪುರದ ಬಳಿ ಶಿಂಷಾ ನದಿಯನ್ನು ಸೇರುತ್ತದೆ. ಕುಣಿಗಲ್ ತಾಲೂಕಿನ ಸಂಕನಪುರದ ಬಳಿ ೧೯೦೧ ರಲ್ಲಿ ನಾಗಿನಿ ನದಿಗೆ ಅಡ್ಡಲಾಗಿ ಅಣೆಕಟ್ಟೆಯೊಂದನ್ನು ನಿರ್ಮಿಸಲಾಯಿತು. ಈ ಜಲಾಶಯದ ನೀರು ೨೪೩ ಹೆಕ್ಟೇರ್ ಗಳಿಗೆ ನೀರಾವರಿ ಆಸರೆಯಾಗಿದೆ. ಇದೇ ನದಿಗೆ ಇತ್ತೀಚೆಗೆ ಕುಣಿಗಲ್ ತಾಲೂಕಿನ ಮಂಗಳ ಬಳಿ ಅಣೆಕಟ್ಟೆಯೊಂದನ್ನು ಕಟ್ಟಿ ಮಂಗಳಾ ಜಲಾಶಯವನ್ನು ನಿರ್ಮಿಸಿದ್ದಾರೆ. ಈ ನಾಗಿನಿ ನದಿಯು ಪುರಾಣ ಪ್ರಸಿದ್ದವಾದುದು. ಈ ನದಿಯಲ್ಲಿ ಸ್ನಾನಮಾಡಿ ನೃಗಮಹಾರಾಜನು ತನಗೆ ಅಂಟಿಕೊಂಡಿದ್ದ ಕುಷ್ಠರೋಗವನ್ನು ಹೋಗಲಾಡಿಸಿಕೊಂಡನೆಂದು ಒಂದು ಪ್ರತೀತಿಯು ಜನಜನಿತವಾಗಿದೆ. ಈ ನದಿಯ ತೀರದಲ್ಲಿರುವ ಎಡಿಯೂರು ಸಿದ್ದಲಿಂಗೇಶ್ವರರು ಬಯಲಾದುದು.

**ತಲಪರಿಗೆ ಮತ್ತು ಊಟೆಗಳು:** ತುಮಕೂರು ಜಿಲ್ಲೆಯ ಈಶಾನ್ಯದಲ್ಲಿ ನೀರಿನ ಊಟೆಗಳಿಂದ ತೊಯ್ದು ತಂಪಾದ ಪ್ರದೇಶಗಳಿವೆ. ಈ ಊಟೆಗಳನ್ನು ತಲಪರಿಗೆಗಳು ಎನ್ನುತ್ತಾರೆ. ಇವು ಭೂಗರ್ಭದಿಂದ ಬುಗ್ಗೆಯಾಗಿ ಉಕ್ಕಿ ಚಿಲುಮೆಯಾಗಿ ಚಿಮ್ಮಿ ಝುರಿಯಂತೆ ಹರಿಯುತ್ತವೆ. ಇಂತಹ ತಲಪರಿಗೆಗಳು ಮಧುಗಿರಿ, ಕೊರಟಗೆರೆ ಮತ್ತು ಪಾವಗಡ ತಾಲೂಕುಗಳಲ್ಲಿ ಅಲ್ಲಲ್ಲಿವೆ. ಇಂತಹ ತಲಪರಿಗೆ ಕಣ್ಣುಗಳು ಕಂಡು ಬರುವೆಡೆಗಳಲ್ಲಿ ಆಳವಾಗಿ ಅಗೆದು ನದೀ ಮೂಲದ ಕೊಳಗಳಂತೆ ನಿರ್ಮಿಸಿ ಅವುಗಳಿಂದ ಕಾಲುವೆಗಳನ್ನು ತೆಗೆದು ನೀರನ್ನು ಹಾಯಿಸಿಕೊಳ್ಳುತ್ತಾರೆ. ಇಂತಹ ತಲಪರಿಗೆ ನಾಲೆಗಳು ಅನೇಕ ದೊಡ್ಡ ದೊಡ್ಡ ಕೆರೆಗಳ ಹಿಂಭಾಗದಲ್ಲೂ ನದೀ ಮೂಲಗಳ ಸಮೀಪಗಳಲ್ಲೂ ಇವೆ. ಮಧುಗಿರಿ ತಾಲೂಕಿನಲ್ಲಿ ತಲಪರಿಗೆಗಳು ಮುಖ್ಯವಾಗಿ ಬಿಜವರ, ಸಿದ್ಧಾಪುರ, ಚೀಲನಹಳ್ಳಿ, ಹಂಪಾಪುರ, ಮಿಡಿಗೇಶಿ ಮತ್ತು ರೆಡ್ಡಿಹಳ್ಳಿಗಳ ಬಳಿ ಇವೆ. ತಲಪರಿಗೆ ಬಾವಿಗಳಿಗೆ ಕಪಿಲೆಗಳನ್ನು ಹಾಕಿ ನೀರನ್ನು ಹಾಯಿಸುತ್ತಾರೆ. ನಾಲೆಗಳನ್ನು ತೋಡಿಯೂ ಸಹ ನೀರನ್ನು ಬಳಸಿಕೊಳ್ಳುತ್ತಾರೆ. ಮಧುಗಿರಿ ತಾಲೂಕಿನ ಬಳಿ ಇರುವ ಹರಿಹರೇಶ್ವರನ ಬೆಟ್ಟದ ಕಣಿವೆ ಪ್ರದೇಶದಲ್ಲಿ ಇಂತಹ ತಲಪರಿಗೆಗಳು ಹೇರಳವಾಗಿವೆ. ಆದರೆ ಮಳೆಗಾಲದಲ್ಲಿ ಮಾತ್ರ ಈ ತಲಪರಿಗೆ ಬಾವಿಗಳು ಸದಾ ಜೀವಂತವಾಗಿರುತ್ತವೆ. ಆಗಾಗ್ಗೆ ಮಳೆ ಬರದಿದ್ದರೂ ಸಹ ಬತ್ತದೆ ನೀರನ್ನು ಒದಗಿಸಿ ವ್ಯವಸಾಯಕ್ಕೆ ಉಪಯೋಗವಾಗುತ್ತವೆ. ಮಳೆ ಅಭಾವ ಒದಗಿದಾಗ ಈ ತಲಪರಿಗೆಗಳು ಸುಪ್ತವಾಗಿರುತ್ತವೆ. ನೋಡಿದ ತಕ್ಷಣ ಒಂದು ಸಾಧಾರಣ ನೀರಿನ ಗುಂಡಿ ಎನಿಸುತ್ತದೆ. ಕಲ್ಯಾಣಿ, ಪುಷ್ಕರಣಿಗಳಂತೆ ಕಲಾತ್ಮಕ ಕಲ್ಲು ಕಟ್ಟಣೆ ಇರುವುದಿಲ್ಲ, ತೆರೆದ ಬಾವಿಗಳಿಗಿರುವ ಉದ್ದ–ಅಗಲ, ಆಳವೂ ಇರುವುದಿಲ್ಲ. ಆದರೆ ಆ ಪುಟ್ಟ–ಪುಟ್ಟ ಜಲ ಸಂಗ್ರಹಾಗಾರಗಳು ಒಂದೊಂದು ನೂರಾರು ಎಕರೆಗೆ ನೀರುಣಿಸುವ ಸಾಮರ್ಥ್ಯವುಳ್ಳವು. ಬೇಸಿಗೆ ಬೆಳೆಗೆ ಮತ್ತು ಇತರೆ ಉಪಯೋಗಗಳಿಗೆ ಅವೇ ಆಧಾರ. ತುಮಕೂರು ಜಿಲ್ಲೆಯ ಪಾವಗಡ, ಮಧುಗಿರಿ, ಕೊರಟಗೆರೆ ಹಾಗು ಶಿರಾ ಭಾಗದ ಹಳೆ ತಲೆಮಾರಿನ ರೈತರಿಗೆ ತಲಪರಿಗೆ ಅತ್ಯಂತ ಪರಿಚಿತ ಪದ. ಶತಮಾನಗಳ ಕಾಲ ಅವರ ಬದುಕಿಗೆ ಆಸರೆಯಾಗಿದ್ದವು ತಲಪರಿಗೆಗಳು. ·ತಲಪರಿಗೆ ನೀರಾವರಿ ಎಂಬ ಪದವೇ ಈ ಭಾಗದಲ್ಲಿ ಚಾಲ್ತಿಯಲ್ಲಿದೆ. ಆಂಧ್ರದ ಅನಂತಪುರ, ಕಡಪಗಳಲ್ಲಿಯೂ ಸಹ ತಲಪರಿಗೆಗಳಿರುವ ಮಾಹಿತಿ ಇದೆ. ತಲಪುರಿಗೆ, ತಲಪರಿಕೆ ಎಂಬುದಾಗಿಯೂ ಉಚ್ಚರಿಸುವುದೂ ಉಂಟು. ಜೌಗು ಪ್ರದೇಶದಿಂದ ಬಸಿಯುವ ನೀರು ಸಂಗ್ರಹಗೊಂಡಿರುವ ತಗ್ಗು ಪ್ರದೇಶವನ್ನು 'ತಲಪರಿಗೆ' ಎಂದು ಕರೆಯುತ್ತಾರೆ. ತಲ–ಎಂದರೆ ಮುಖ್ಯವಾದ ಭಾಗ, ಪರಿಗೆ–ಎಂದರೆ ಸದಾ ನೀರು ನಿಂತಿರುವ ಜೌಗು ಪ್ರದೇಶ ಎಂದು ಸಾಮಾನ್ಯವಾಗಿ ಅರ್ಥೈಸಬಹುದು. ಇವು ನೈಸರ್ಗಿಕವಾಗಿ ರೂಪುಗೊಂಡಿರುವಂತಹವು. ಸಾಮಾನ್ಯವಾಗಿ ಬೆಟ್ಟ–ಗುಡ್ಡಗಳ ಬುಡಗಳಲ್ಲಿ ಅರಣ್ಯಪ್ರದೇಶಗಳ ಇಳಿಜಾರು ಭಾಗದಲ್ಲಿ, ಕೆರೆಗಳಿಗೆ ನೀರು ಬರುವ ವಿಶಾಲವಾದ ಜಲಾನಯನ ಪ್ರದೇಶಗಳ ತಗ್ಗು ಭಾಗದಲ್ಲಿ, ಕೆರೆ–ಕಟ್ಟೆಗಳ ಅಂಗಳ ಅಥವಾ ಹಿಂಭಾಗ, ಅಚ್ಚುಕಟ್ಟು ಪ್ರದೇಶಗಳಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಕಂಡುಬರುತ್ತವೆ. ತುಮಕೂರು ಜಿಲ್ಲೆಯ ಪಾವಗಡ, ಮಧುಗಿರಿ, ಕೊರಟಗೆರೆ ತಾಲೂಕುಗಳಲ್ಲಿ ಬೆಟ್ಟ–ಗುಡ್ಡಗಳು, ಕುರುಚಲು ಕಾಡುಗಳು ಹೇರಳವಾಗಿರುವುದರಿಂದ ಈ ಭಾಗವು ತಲಪರಿಗೆಗಳ ಕೇಂದ್ರಸ್ಥಾನವಾಗಿದೆ.

**ತಲಪರಿಗೆಗಳ ರಚನೆ:** ಹಿರಿಯರು ಹೇಳುವ ಪ್ರಕಾರ, ನಿರ್ದಿಷ್ಟ ಸ್ಥಳದಲ್ಲಿ ಸದಾ ನೀರು ಉಕ್ಕುವುದನ್ನು ಗಮನಿಸಿ, ಅಥವಾ ಇಂತಹ ಕಡೆ ಗುಂಡಿ ತೆಗೆದರೆ ನೀರು ಉಕ್ಕಬಹುದೆಂದು ಅಂದಾಜಿಸಿ ನಮ್ಮ ಪೂರ್ವಿಕರು ಅಲ್ಲಿ ಗುಂಡಿ

ತೋಡಿ ತಲಪರಿಗೆ ನಿರ್ಮಿಸಿದ್ದಾರೆ. ಬಂಡೆ-ಕಲ್ಲುಗಳಿಂದ ಕೂಡಿದ ಬೆಟ್ಟದ ತಪ್ಪಲುಗಳಲ್ಲಿ ಮತ್ತು ಮಳೆಗಾಲದಲ್ಲಿ ಹರಿದು ಬೇಸಿಗೆಯಲ್ಲಿ ಒಣಗುವ ಅಥವಾ ನೀರು ಕಡಿಮೆಯಾಗುವ ನದಿ, ತೊರೆ, ಹಳ್ಳಗಳ ಇಕ್ಕೆಲಗಳಲ್ಲಿ ಹೆಚ್ಚಾಗಿ ತಲಪರಿಗೆಗಳನ್ನು ಕಾಣಬಹುದು. ಬೆಟ್ಟದ ತಪ್ಪಲುಗಳಲ್ಲಿ ತಲಪರಿಗೆಗಳಿರಲು ಕಾರಣವನ್ನು ಈ ರೀತಿ ನೀಡಬಹುದು. ಮಳೆ ಬಿದ್ದಾಗ ಬೆಟ್ಟದ ಬಂಡೆ-ಕಲ್ಲುಗಳ ಬಿರುಕುಗಳಲ್ಲಿ ಸೇರಿ ಇಂಗುವ ನೀರು ಭೂಗರ್ಭದಲ್ಲಿ ಅಂತರ್ಗತವಾಗಿ ಹರಿಯುತ್ತಿದ್ದು, ಮರಳು ನೆಲ ಸಿಕ್ಕ ಕಡೆ ಉಕ್ಕಿ ಮೇಲೆ ಬರುತ್ತದೆ. ಈ ರೀತಿ ನೀರು ಊರುವ, ಜಿನುಗುವ, ಒಸರುವ ಸ್ಥಳವೇ ತಲಪರಿಗೆ. ಇನ್ನು ನದಿ, ತೊರೆ, ಹಳ್ಳಗಳ ಇಕ್ಕೆಲಗಳಲ್ಲಿ ತಲಪರಿಗೆಗಳು ಇರಲು ಕಾರಣವೆಂದರೆ, ಪದರ-ಪದರವಾಗಿ ಶೇಖರಣೆಗೊಂಡ ಮರಳಿನಲ್ಲಿ ಇಂಗಿದ ಮಳೆಗಾಲದ ನೀರು ದಡದಲ್ಲಿ ಎಲ್ಲೋ ಒಂದು ಕಡೆ ಮರಳಿನ ಪಾತ್ರ (ಪಾಯಿಂಟ್) ಸಿಕ್ಕ ಕಡೆ ಉಕ್ಕಿ ಹೊರಬರುತ್ತದೆ. ತಲಪರಿಗೆಗಳಿಗೆ ನಿರ್ದಿಷ್ಟ ಆಕಾರವೆಂಬುದಿಲ್ಲ. ನೀರೂರುವ ಕಡೆ ಒಂದು ಗುಂಡಿ ಮಾಡಲಾಗುತ್ತದೆ. ಅತಿ ಹೆಚ್ಚೆಂದರೆ ೧೫ ಅಡಿ ಆಳವಿರಬಹುದು. ಸಾಮಾನ್ಯ ಆಳ ಐದು ಅಡಿಗಳಷ್ಟೇ. ಉದ್ದ-ಅಗಲ ೧೫ರಿಂದ ೨೦ ಅಡಿಗಳು. ತಲಪರಿಗೆಗಳಿಂದ ನೀರು ಹರಿಯುವಂತೆ ಮಾಡಲು ತೋಡುವ ಕಾಲುವೆಗಳು ತಲಪರಿಗೆಗಳ ಸಮಕ್ಕೆ ಇರುವುದರಿಂದ ಎರಡೂ ಒಂದೇ ಆಗಿ ಉದ್ದನೆಯ ರಚನೆಯಂತೆ ಕಾಣುವುದೂ ಉಂಟು. ಕೆರೆಯಲ್ಲಿರುವ ತಲಪರಿಗೆಗಳಿಗೆ ಕಲ್ಲು ಕಟ್ಟಣೆ ಮಾಡಿರುತ್ತಾರೆ. ಏಕೆಂದರೆ ಕೆರೆಯಲ್ಲಿ ನೀರು ತುಂಬಿದಾಗ ತಲಪರಿಗೆಗಳು ಸಂಪೂರ್ಣ ಮುಚ್ಚಿ ಹೋಗುವುದನ್ನು ತಪ್ಪಿಸಲು ಈ ಕ್ರಮ. ಕೆರೆಯ ಹೊರತಾಗಿಯೂ ಕೆಲವು ಕಡೆ ಈ ರೀತಿ ಮಾಡಿರುವುದುಂಟು. ಮೂರು ಭಾಗ ಮಾತ್ರ ಕಲ್ಲು ಕಟ್ಟಿ ಒಂದು ಭಾಗದಲ್ಲಿ ನೀರು ಹರಿಯಲು ಮತ್ತು ದನ-ಕರುಗಳು ಇಳಿದು ನೀರು ಕುಡಿಯಲು ಅನುಕೂಲವಾಗುವಂತೆ ಹಾಗೇ ಬಿಟ್ಟಿರುತ್ತಾರೆ.

**ಬಳಸಿದರಷ್ಟೇ ಊರುವ ನೀರು:** ತಲಪರಿಗೆಗಳ ಬಹುಮುಖ್ಯ ಗುಣವೆಂದರೆ ನೀರನ್ನು ಬಳಸಿದರೆ ಮಾತ್ರ ಅದರಿಂದ ನೀರು ಹರಿದು ಬರುತ್ತದೆ. ಬಳಸದಿದ್ದರೆ ನಿಂತು ಹೋಗುತ್ತದೆ. ಏಕೆಂದರೆ ನೀರು ಹರಿಯದೆ ನಿಂತರೆ ತಲಪರಿಗೆಯಲ್ಲಿನ ಜಲದ ಕಣ್ಣು ಮುಚ್ಚಿಹೋಗುತ್ತದೆ. ತಲಪರಿಗೆಯ ಒಂದು ಭಾಗ ಅಥವಾ ಮೂಲೆಯಲ್ಲಿ ನೀರು ಜಿನುಗುವ ಜಾಗಕ್ಕೆ ಜಲದ ಕಣ್ಣು ಎನ್ನುತ್ತಾರೆ. ಕಾಲುವೆ ರಿಪೇರಿ ಮಾಡುವವರು ಪ್ರತಿನಿತ್ಯ ಈ ನೀರು ಜಿನುಗುವ ಜಾಗವನ್ನು ಗಮನಿಸುತ್ತಾರೆ. ಏಕೆಂದರೆ ಸದಾ ನೀರು ಜಿನುಗಿ ಮೇಲ್ಭಾಗದ ಮಣ್ಣು ಕುಸಿದು ಅದು ಮುಚ್ಚಿ ಹೋಗುವ ಸಾಧ್ಯತೆ ಇರುತ್ತದೆ. ಕೊರಟಗೆರೆ ತಾಲೂಕು ಅಕ್ಕಿರಾಂಪುರದಲ್ಲಿರುವ ತಲಪರಿಗೆಯೊಂದರಲ್ಲಿ ಬಹಳ ವರ್ಷಗಳಿಂದ ಹೀಗೆ ನೀರು ಬಳಸದೆ ಜಲದ ಕಣ್ಣು ಮುಚ್ಚಿ ಹೋಗಿ ಪಾಚಿ ಕಟ್ಟಿದೆ.

**ಸರಣಿ ತಲಪರಿಗೆಗಳು:** ಒಂದು ಸೀಮಿತ ಪ್ರದೇಶದಲ್ಲಿ ಹಲವಾರು ತಲಪರಿಗೆಗಳಿರುತ್ತವೆ. ಇವು ಭೂಮಿಯ ಇಳಿಜಾರಿಗೆ ಹೊಂದಿಕೊಂಡಂತೆ ಸರಣಿ ರೂಪದಲ್ಲಿರುವುದೇ ಸಾಮಾನ್ಯ. ಪ್ರತಿಯೊಂದಕ್ಕೆ ಅರ್ಧ ಕಿ.ಮೀ ನಿಂದ ಎರಡು ಕಿ.ಮೀ ವರೆಗೆ ಅಂತರವಿರುತ್ತದೆ. ಆದರೆ ಕಾಲುವೆಗಳು ಒಂದಕ್ಕೊಂದು ತಾಕುವುದಿಲ್ಲ. ಮಧುಗಿರಿ ತಾಲೂಕು ಹೊಸಕೆರೆ ಗ್ರಾಮ ಸರಣಿ ತಲಪರಿಗೆಗಳಿಗೆ ಉತ್ತಮ ಸಾಕ್ಷಿ. ಇಲ್ಲಿನ ಹತ್ತು ಕಿ.ಮೀ. ವ್ಯಾಪ್ತಿಯಲ್ಲಿ ಒಂದರ ಹಿಂದೆ ಒಂದರಂತೆ ನಾಲ್ಕು ತಲಪರಿಗೆಗಳಿವೆ. ಹೊಸಕೆರೆ ದೊಡ್ಡಕೆರೆಯಲ್ಲಿರುವ ತಲಪರಿಗೆಯು ಕೆರೆ ಹಿಂದಿನ ಅಚ್ಚುಕಟ್ಟಿಗೆ ನೀರುಣಿಸಿದರೆ, ಕೆರೆ ಹಿಂದಿರುವ ಮಲ್ಲಣ್ಣನ ತಲಪರಿಗೆ ಮೂರು ಕಿ.ಮೀ ಹರಿದು ಬಸವನಹಳ್ಳಿ ಅಚ್ಚುಕಟ್ಟಿಗೆ ನೀರುಣಿಸುತ್ತದೆ. ಹಾಗೆಯೇ ಬಸವನಹಳ್ಳಿ ಗದ್ದೆ ಬಯಲಿನಲ್ಲಿರುವ ತಲಪರಿಗೆಯು ಅದರ ಕೆಳಭಾಗದ ಹಳೇಯೂರು ಹೊಲಗಳಿಗೆ ಆಸರೆ. ಹೀಗೆ ಈ ನಾಲ್ಕು ತಲಪರಿಗೆಗಳು ನಾಲ್ಕೈದು ಹಳ್ಳಿಗಳಿಗೆ ಜೀವಸೆಲೆ. ತಲಪರಿಗೆಗಳನ್ನು ಮನುಷ್ಯರ ಹಾಗೂ ದನಕರುಗಳ ಕುಡಿಯುವ ನೀರು ಮತ್ತು ವ್ಯವಸಾಯಕ್ಕಾಗಿ ಬಳಸಲಾಗುತ್ತದೆ. ಕೇವಲ ಒಂದು ಚಾಪೆಯಷ್ಟಗಲದ ತಲಪರಿಗೆಯೊಂದು ನೂರಾರು ಎಕರೆ ಭೂಮಿಗೆ ನೀರುಣಿಸುತ್ತದೆ. ಸಣ್ಣ ಕೆರೆಯೊಂದಕ್ಕೆ ಇದು ಸಮ ಎಂದರೆ ಉತ್ಪ್ರೇಕ್ಷೆಯಲ್ಲ. ಗಮನಿಸಬೇಕಾದ ಅಂಶವೆಂದರೆ ಕೆರೆಯಲ್ಲಿ ನೀರು ಬತ್ತಿದಾಗಲೇ ತಲಪರಿಗೆಗಳು ಜೀವತಾಳುತ್ತವೆ.

**ಕಾಲುವೆ ನೀರಿನ ಹಂಚಿಕೆಗೆ ತೆಂಗಿನ ಮಟ್ಟೆ :** ತಲಪರಿಗೆಯಿಂದ ಬರುವ ಮುಖ್ಯ ಕಾಲುವೆ ನೀರು ಬತ್ತದ ಜಮೀನುಗಳ ಹತ್ತಿರ ಮೂರು ನಾಲ್ಕು ಉಪಕಾಲುವೆಗಳಾಗಿ ವಿಭಜನೆಯಾಗುತ್ತದೆ. ಹೀಗೆ ಆಗುವಾಗ ಎಲ್ಲ ಉಪಕಾಲುವೆಗಳಿಗೆ ಸಮಪ್ರಮಾಣದಲ್ಲಿ ನೀರು ಹೋಗುವಂತೆ ಮಾಡುವುದು ಮುಖ್ಯ. ಅದಕ್ಕಾಗಿ ತೆಂಗಿನ ಮಟ್ಟೆಯ ಉಪಾಯ ಬಳಸುತ್ತಾರೆ. ಕಮಾನಿನಂತಿರುವ ತೆಂಗಿನ ಮಟ್ಟೆಯನ್ನು ಕಾಲುವೆಗಳ ಮಡಬಾಯಿ (ಬಾಯಿಯ) ಅಂತರಕ್ಕೆ ಸರಿಯಾಗಿ ಅಳತೆ ಮಾಡಿಕೊಂಡು ಕತ್ತರಿಸುತ್ತಾರೆ. ಮುಖ್ಯ ಕಾಲುವೆಗೆ ಅಡ್ಡಲಾಗಿ ಇದನ್ನು ಇಟ್ಟಾಗ ಆ ಕತ್ತರಿಸಿದ ಭಾಗದಿಂದ ಒಂದೇ

ಪ್ರಮಾಣದ ನೀರು ಹರಿಯುತ್ತದೆ. ಕಾಲುವೆ ಉಸ್ತುವಾರಿಗೆ ಒಬ್ಬ ವ್ಯಕ್ತಿಯನ್ನು ನೇಮಿಸುತ್ತಿದ್ದರು. ಅವರಿಗೆ ಗೊಂಚಕಾರ ಅಥವಾ ಗಮಕಾರ ಎಂಬ ಹೆಸರಿತ್ತು. ತಲಪರಿಗೆ ಕೃಷಿಗೆ ನೀರುಣಿಸುವ ಅತಿ ಮುಖ್ಯ ಸಂಪನ್ಮೂಲವಷ್ಟೇ ಅಲ್ಲದೆ, ಜೀವ ವೈವಿಧ್ಯವನ್ನು ಪೊರೆಯುವ ತಾಣವೂ ಹೌದು. ಕೆರೆ ಅಂಗಳವನ್ನು ಹೊರತುಪಡಿಸಿ ಬೇರೆ ಕಡೆ ಇರುವ ಪ್ರತಿಯೊಂದು ತಲಪರಿಗೆಗಳ ಸುತ್ತ-ಮುತ್ತ ಅಪಾರ ಜೀವ ವೈವಿಧ್ಯವಿರುತ್ತದೆ. ತಲಪರಿಗೆ ಮತ್ತು ತಲಪರಿಗೆ ಕಾಲುವೆಗಳ ಅಂಚಿನಲ್ಲಿ ಸದಾ ತೇವಾಂಶವಿರುವುದರಿಂದ ಹೊಂಗೆ, ನೇರಳೆ, ಹುಣಸೆ, ತಂಗಟೆ, ಬಂದರೆ, ಈಚಲು ಮುಂತಾದ ಗಿಡ-ಮರಗಳು ಬೆಳೆದಿರುತ್ತವೆ. ಜೊತೆಗೆ ತೇವವಿರುವ ಸ್ಥಳವಾದ್ದರಿಂದ ಕುರಿ, ದನಗಳು ಮೇಯಲು ಹುಲ್ಲು ಚಿಗುರುತ್ತದೆ. ಪಕ್ಷಿಗಳು, ವನ್ಯ ಪ್ರಾಣಿಗಳು ನೀರು ಕುಡಿಯಲು ಬರುತ್ತಿರುತ್ತವೆ. ತಲಪರಿಗೆಯಲ್ಲಿನ ನೀರು ಮಣ್ಣು ಮತ್ತು ಮರಳಿನ ಮೂಲಕ ಹಾದು ಬರುವುದರಿಂದ ಶೋಧಿಸಲ್ಪಟ್ಟು ಶುದ್ಧವಾಗಿರುತ್ತದಲ್ಲದೆ ಸಿಹಿಯಾಗಿಯೂ ಇದ್ದು ಕುಡಿಯಲು ಸೂಕ್ತವಾದುದಾಗಿರುತ್ತದೆ.

**ಇಂದಿನ ಸ್ಥಿತಿ:** ಸಿಹಿಯಾದ, ಶುದ್ದನೀರಿನ ಮೂಲಗಳಾಗಿದ್ದ ಹಾಗೂ ಹೆಸರಿನಲ್ಲಿಯೇ ತನ್ನೆಲ್ಲಾ ವಿಶಿಷ್ಟತೆಯನ್ನು ಅಡಗಿಸಿಟ್ಟುಕೊಂಡಿರುವ ತಲಪರಿಗೆಗಳ ದುರಸ್ತಿ ಮತ್ತು ಪುನಶ್ಚೇತನದ ಅವಶ್ಯಕತೆ ಇದೆ. ಈ ನಿಟ್ಟಿನಲ್ಲಿ ಕರ್ನಾಟಕ ಸರ್ಕಾರದ ಜಲಸಂವರ್ಧನೆ ಯೋಜನೆ ಸಂಘವು ತನ್ನ ಕೆರೆ ಅಭಿವೃದ್ಧಿ ಯೋಜನೆಯಡಿಯಲ್ಲಿ ತುಮಕೂರು ಜಿಲ್ಲೆಯ ಹಲವಾರು ತಲಪರಿಗೆಗಳನ್ನು ಪುನಶ್ಚೇತನಗೊಳಿಸಿದೆ. ಪಾವಗಡದ ಕರೆಕ್ಯಾತನಹಳ್ಳಿ, ತುಮಕುಂಟೆ, ಕೊತ್ತೂರು, ಮಧುಗಿರಿ ತಾಲೂಕಿನ ಬಸವನಹಳ್ಳಿ ಮುಂತಾದ ಕಡೆ ೧೫ ತಲಪರಿಗೆಗಳು ದುರಸ್ತಿಯಾಗಿವೆ. ಬಸವನಹಳ್ಳಿ ಕೆರೆಯಲ್ಲಿದ್ದ ಎರಡು ತಲಪರಿಗೆಗಳು ಸಂಪೂರ್ಣ ಮುಚ್ಚಿ ಹೋಗಿದ್ದು ಗ್ರಾಮದ ಹಿರಿಯರ ಸಹಕಾರದಿಂದ ಅವುಗಳ ಸ್ಥಳವನ್ನು ಪತ್ತೆಹಚ್ಚಿ ಹೂಳು ತೆಗೆಯಲಾಗಿದೆ. ಈ ಎರಡೂ ತಲಪರಿಗೆಗಳಲ್ಲಿ ಉತ್ತಮ ನೀರಿದ್ದು ಜನ ಬಳಕೆಗೆ ಲಭ್ಯವಾಗಿದೆ. ಇದೇ ರೀತಿ ತುಮಕೂರಿನ ಧಾನ್ಯ ಫೌಂಡೇಷನ್ ತಲಪರಿಗೆಗಳ ಸಮೀಕ್ಷೆ ಜಾಗೃತಿ ಕಾರ್ಯಾಗಾರ, ಪುಸ್ತಕ ಪ್ರಕಟಣೆ ಹಾಗೂ ಪುನಶ್ಚೇತನಗೊಳಿಸುವ ನಿಟ್ಟಿನಲ್ಲಿ ಕಾರ್ಯಪ್ರವೃತ್ತವಾಗಿದೆ.

**ಅಂತರ್ಜಲ ಸಂಪತ್ತು**

ಶಿಲಾವರಣದ ಶಿಥಿಲವಲಯ ಮತ್ತು ಬಿರುಕುಗಳಲ್ಲಿ ಅಂತರ್ಜಲವು ನಿಕ್ಷೇಪಗೊಂಡಿರುತ್ತದೆ. ತುಮಕೂರು ಜಿಲ್ಲೆಯ ಅಂತರ್ಜಲ ವಾರ್ಷಿಕ ಪುನರಾರ್ಜನೆಯು ೪೦೨.೭೬ ದಶಲಕ್ಷ ಘನ ಮೀಟರುಗಳಾಗಿದ್ದು ೧೩,೨೪೨ ಹೊಸಬಾವಿಗಳನ್ನು ನಿರ್ಮಿಸಬಹುದು ಎಂದು ಅಂದಾಜು ಮಾಡಲಾಗಿದೆ. ಹೊಸಬಾವಿಗಳ ನಿವೇಶನವನ್ನು ನಿರ್ಧರಿಸಲು ಮತ್ತು ಕೊಳವೆ ಬಾವಿಗಳನ್ನು ನಿರ್ಮಿಸಲು ಮತ್ತು ವಾರ್ಷಿಕ ಪುನರ್ಭರ್ತಿಯನ್ನು ಆಗಿಂದಾಗ್ಗೆ ಅಂದಾಜು ಮಾಡಲು ತುಮಕೂರಿನಲ್ಲಿ ಇಲಾಖೆಯ ಕಛೇರಿಯೊಂದನ್ನು ತೆರೆಯಲಾಗಿದೆ. ಜಿಲ್ಲೆಯಲ್ಲಿ ವಿವಿಧ ಮೂಲಗಳಿಂದ ನೀರಾವರಿಯಾಗುತ್ತಿರುವ ಒಟ್ಟು ಪ್ರದೇಶವೂ ೧,೮೯,೪೮೮ ಹೆ.ಗಳಾಗಿವೆ. ನೀರಾವರಿ ಕ್ಷೇತ್ರದಲ್ಲಿ ಗುಬ್ಬಿ ತಾಲೂಕು ಮೊದಲ ಸ್ಥಾನದಲ್ಲಿದ್ದು, ಕೊರಟಗೆರೆ ತಾಲೂಕು ಅತ್ಯಂತ ಕಡಿಮೆ ನೀರಾವರಿ ಪ್ರದೇಶವನ್ನು ಹೊಂದಿರುತ್ತದೆ. ಎರಡನೇ ಮತ್ತು ಮೂರನೇ ಸ್ಥಾನದಲ್ಲಿ ಕ್ರಮವಾಗಿ ತುಮಕೂರು ಮತ್ತು ತಿಪಟೂರು ತಾಲೂಕುಗಳು ಬರುತ್ತವೆ. ನೀರಾವರಿ ಪ್ರದೇಶದಲ್ಲಿ ಪ್ರಮುಖವಾಗಿ ಕಾಣುವ ಬೆಳೆಗಳೆಂದರೆ ಬತ್ತ, ಕಬ್ಬು, ಮೆಣಸಿನಕಾಯಿ, ಅಡಿಕೆ ಮತ್ತು ನೀರಾವರಿ ಆಶ್ರಿತ ರಾಗಿ ಹಾಗೂ ನೆಲಗಡಲೆ ಸಾಮಾನ್ಯವಾಗಿ ವಾರ್ಷಿಕ ಮಳೆ ಅನುಸಾರ ಮತ್ತು ಕೆರೆಗಳಿಗೆ ಹರಿದುಬರುವ ಮಳೆ ನೀರಿನ ಪ್ರಮಾಣದ ಅನ್ವಯ ನೀರಾವರಿ ಕ್ಷೇತ್ರದ ವಿಸ್ತೀರ್ಣದಲ್ಲಿ ಹೆಚ್ಚು-ಕಡಿಮೆಯನ್ನು ಗುರುತಿಸಬಹುದು.

ನೀರಾವರಿ ಮೂಲಗಳನ್ನು (ಅ) ಕಾಲುವೆಗಳು (ಆ) ಕೆರೆಗಳು (ಇ) ಬಾವಿಗಳು (ಈ) ಕೊಳವೆಬಾವಿಗಳು ಮತ್ತು (ಉ) ಏತನೀರಾವರಿ ಮತ್ತು (ಊ) ಇತರೆ ಮೂಲಗಳು ಎಂದು ವಿಭಾಗಿಸಬಹುದು. ತಾಲೂಕುವಾರು ನೀರಾವರಿ ಪ್ರದೇಶದ ವಿಸ್ತೀರ್ಣ (ಹೆಕ್ಟೇರ್) ವನ್ನು ಮುಂದಿನ ಕೋಷ್ಟಕದಲ್ಲಿ ನೀಡಲಾಗಿದೆ.

## ಕೋಷ್ಟಕ ೪.೪: ನೀರಾವರಿಯಾದ ನಿವ್ವಳ ಪ್ರದೇಶ (ಹೆಕ್ಟೇರುಗಳಲ್ಲಿ ೨೦೧೨–೧೩)

| ತಾಲೂಕುಗಳು | ಕಾಲುವೆಗಳಿಂದ | | | ಕೆರೆಗಳಿಂದ | | |
|---|---|---|---|---|---|---|
| | ಉದ್ದ (ಕಿ.ಮೀ.) | ಒಟ್ಟು ನೀರಾವರಿ ಯಾದ ವಿಸ್ತೀರ್ಣ | ನಿವ್ವಳ ನೀರಾವರಿ ವಿಸ್ತೀರ್ಣ | ಸಂಖ್ಯೆ | ಒಟ್ಟು ನೀರಾವರಿ ಯಾದ ವಿಸ್ತೀರ್ಣ | ನಿವ್ವಳ ನೀರಾವರಿ ವಿಸ್ತೀರ್ಣ |
| ಚಿಕ್ಕನಾಯಕನಹಳ್ಳಿ | ೧೯.೨ | – | – | ೧೫೦ | ೭೬ | ೭೬ |
| ಗುಬ್ಬಿ | – | – | – | ೧೬೨ | ೩,೩೩೩ | ೩,೨೯೩ |
| ಕೊರಟಗೆರೆ | – | – | – | ೧೪೨ | ೮೫ | ೮೫ |
| ಕುಣಿಗಲ್ | ೬೧.೧ | ೪,೧೯೯ | ೪,೧೯೯ | ೨೨೯ | ೩೩೩ | ೩೧೫ |
| ಮಧುಗಿರಿ | – | – | – | ೧೮೬ | ೪೨೦ | ೪೨೦ |
| ಪಾವಗಡ | – | – | – | ೧೨೫ | ೨೨೨ | ೨೨೨ |
| ಶಿರಾ | ೬.೪ | – | – | ೨೦೭ | ೪೯೦ | ೩೯೧ |
| ತಿಪಟೂರು | – | – | – | ೧೫೪ | ೧,೪೨೦ | ೧,೩೯೭ |
| ತುಮಕೂರು | – | – | – | ೧೯೨ | ೩೯೦ | ೩೯೦ |
| ತುರುವೇಕೆರೆ | – | – | – | ೯೫ | ೩,೯೯೯ | ೩,೯೩೭ |
| ಜಿಲ್ಲಾ ಮೊತ್ತ | ೮೬.೭ | ೪,೧೯೯ | ೪,೧೯೯ | ೧,೬೪೨ | ೧೦,೭೭೭ | ೧೦,೫೩೫ |

| ತಾಲೂಕುಗಳು | ಬಾವಿಗಳಿಂದ | | |
|---|---|---|---|
| | ಸಂಖ್ಯೆ | ಒಟ್ಟು ನೀರಾವರಿ ಯಾದ ವಿಸ್ತೀರ್ಣ | ನಿವ್ವಳ ನೀರಾವರಿ ವಿಸ್ತೀರ್ಣ |
| ಚಿಕ್ಕನಾಯಕನ ಹಳ್ಳಿ | ೨೩೫೨ | ೧೧ | ೧೧ |
| ಗುಬ್ಬಿ | ೬,೫೪೩ | ೩೦೯ | ೩೦೯ |
| ಕೊರಟಗೆರೆ | ೬೧೩ | ೦ | ೦ |
| ಕುಣಿಗಲ್ | ೨,೬೨೪ | ೭೦ | ೭೦ |
| ಮಧುಗಿರಿ | ೯,೩೧೩ | ೨೧೮ | ೨೧೮ |
| ಪಾವಗಡ | ೪,೮೦೬ | ೧೧ | ೧೧ |
| ಶಿರಾ | ೬,೧೩೫ | ೧೧೧ | ೧೧೧ |
| ತಿಪಟೂರು | ೭೭೬ | ೩೩ | ೩೩ |
| ತುಮಕೂರು | ೪,೮೯೬ | ೭೭ | ೭೭ |
| ತುರುವೇಕೆರೆ | ೧,೯೯೮ | ೧೯೯ | ೧೯೯ |
| ಜಿಲ್ಲಾ ಮೊತ್ತ | ೪೦,೦೫೬ | ೧,೦೩೯ | ೧,೦೩೯ |

## ಕೋಷ್ಟಕ ೪.೪: ನೀರಾವರಿಯಾದ ನಿವ್ವಳ ಪ್ರದೇಶ (ಹೆಕ್ಟೇರುಗಳಲ್ಲಿ ೨೦೧೨–೧೩) ಮುಂದುವರೆದಿದೆ.

| ತಾಲೂಕುಗಳು | ಕೊಳವೆ ಬಾವಿಗಳು | | |
|---|---|---|---|
| | ಸಂಖ್ಯೆಗಳು | ನಿವ್ವಳ ನೀರಾವರಿ ವಿಸ್ತೀರ್ಣ | ಒಟ್ಟು ನೀರಾವರಿಯಾದ ವಿಸ್ತೀರ್ಣ |
| ಚಿಕ್ಕನಾಯಕನಹಳ್ಳಿ | ೧೪,೦೮೯ | ೧೫,೧೮೬ | ೧೩,೯೬೫ |
| ಗುಬ್ಬಿ | ೨೧,೭೪೯ | ೨೮,೦೨೨ | ೨೩,೬೩೦ |
| ಕೊರಟಗೆರೆ | ೬,೨೪೭ | ೮,೧೯೯ | ೭,೩೭೧ |

| | | | |
|---|---|---|---|
| ಕುಣಿಗಲ್ | ೯,೯೪೦ | ೯,೭೭೮ | ೭,೫೭೨ |
| ಮಧುಗಿರಿ | ೮,೨೧೫ | ೧೨,೮೮೫ | ೧೦,೭೨೩ |
| ಪಾವಗಡ | ೪,೧೨೫ | ೧೩,೨೮೯ | ೧೧,೨೨೦ |
| ಶಿರಾ | ೮,೮೪೬ | ೧೮,೧೭೬ | ೧೫,೮೩೪ |
| ತಿಪಟೂರು | ೧೭,೨೦೩ | ೨೦,೨೮೭ | ೧೭,೯೧೯ |
| ತುಮಕೂರು | ೧೭,೭೭೮ | ೨೩,೧೮೨ | ೨೦,೮೧೭ |
| ತುರುವೇಕೆರೆ | ೧೩,೦೫೩ | ೧೧,೪೦೫ | ೯,೪೩೯ |
| ಜಿಲ್ಲಾ ಮೊತ್ತ | ೧,೨೧,೨೪೫ | ೧,೬೦,೪೮೯ | ೧,೩೮,೪೯೦ |

| **ತಾಲೂಕುಗಳು** | **ಏತ ನೀರಾವರಿಯಿಂದ** | | | **ಒಟ್ಟು** | |
|---|---|---|---|---|---|
| | **ಸಂಖ್ಯೆ** | **ಒಟ್ಟು ನೀರಾವರಿ ಯಾದ ವಿಸ್ತೀರ್ಣ** | **ನಿವ್ವಳ ನೀರಾವರಿ ವಿಸ್ತೀರ್ಣ** | **ಒಟ್ಟು ನೀರಾವರಿ ಯಾದ ವಿಸ್ತೀರ್ಣ** | **ನಿವ್ವಳ ನೀರಾವರಿ ವಿಸ್ತೀರ್ಣ** |
| ಚಿಕ್ಕನಾಯಕನ ಹಳ್ಳಿ | – | – | – | ೧೫,೨೭೩ | ೧೪,೦೫೨ |
| ಗುಬ್ಬಿ | – | – | – | ೩೧,೬೬೪ | ೨೭,೨೩೨ |
| ಕೊರಟಗೆರೆ | – | – | – | ೮,೨೮೪ | ೭,೪೫೬ |
| ಕುಣಿಗಲ್ | ೬ | – | – | ೧೪,೩೮೦ | ೧೨,೧೫೬ |
| ಮಧುಗಿರಿ | – | – | – | ೧೩,೫೨೩ | ೧೧,೩೬೧ |
| ಪಾವಗಡ | ೧ | – | – | ೧೩,೫೨೨ | ೧೧,೪೫೩ |
| ಶಿರಾ | – | – | – | ೧೮,೭೭೭ | ೧೬,೩೩೬ |
| ತಿಪಟೂರು | – | – | – | ೨೧,೭೪೦ | ೧೯,೩೪೯ |
| ತುಮಕೂರು | – | – | – | ೨೩,೬೫೮ | ೨೧,೨೯೩ |
| ತುರುವೇಕೆರೆ | ೨ | – | – | ೧೫,೬೦೩ | ೧೩,೫೭೫ |
| ಜಿಲ್ಲಾ ಮೊತ್ತ | ೯ | – | – | ೧,೭೬,೪೨೪ | ೧,೫೪,೨೬೩ |

**(ಮೂಲ: ತುಮಕೂರು ಜಿಲ್ಲೆಯ ಅಂಕಿ-ಅಂಶಗಳ ನೋಟ, ೨೦೧೩-೧೪)**

ನಾಲಾ ನೀರಾವರಿ ಕುರಿತಂತೆ ನಾಲಾ ಕಾಮಗಾರಿಗಳನ್ನು ಅನುಷ್ಠಾನಗೊಳಿಸುವ ಸಲುವಾಗಿ ತುಮಕೂರು ಕೇಂದ್ರದಲ್ಲಿ ದಿನಾಂಕ ೨೩-೦೪-೮೭ರಿಂದ ನಾಲಾ ವಲಯ ಕಛೇರಿಯು ಕೆಲಸ ನಿರ್ವಹಿಸುತ್ತಿದೆ. ಹಾಸನ ಜಿಲ್ಲೆಯಲ್ಲಿ ನಿರ್ಮಿಸಲಾಗಿರುವ ಹೇಮಾವತಿ ಜಲಾಶಯದಿಂದ ಎಡದಂಡೆ ಕಾಲುವೆ ಮುಖಾಂತರ ತಿಪಟೂರು, ತುರುವೇಕೆರೆ, ಗುಬ್ಬಿ, ತುಮಕೂರು ಮತ್ತು ಕುಣಿಗಲ್ ತಾಲೂಕುಗಳಿಗೆ ನೀರಾವರಿ ಸೌಲಭ್ಯ ಒದಗಿಸುವ ಕಾರ್ಯ ಪ್ರಗತಿಯಲ್ಲಿದೆ.

## ಪ್ರಮುಖ ಬೆಳೆಗಳು

ಜಿಲ್ಲೆಯಲ್ಲಿ ಪ್ರಮುಖವಾಗಿ ರಾಗಿ, ಬತ್ತ, ಜೋಳ, ನೆಲಗಡಲೆ, ಕಬ್ಬು, ಹೈಬ್ರಿಡ್ ಮುಸುಕಿನಜೋಳ, ತೆಂಗು, ಅಡಿಕೆ, ತೊಗರಿ, ಹುರಳಿ, ಹೆಸರುಕಾಳು, ಅವರೆ ಮತ್ತು ಕಡಲೆ ಬೆಳೆಗಳನ್ನು ಬೆಳೆಯಲಾಗುತ್ತಿದೆ.

## ಕೋಷ್ಟಕ ೪.೫: ಪ್ರಮುಖ ಬೆಳೆಗಳ ವಿಸ್ತೀರ್ಣ, ಉತ್ಪಾದನೆ ಮತ್ತು ಇಳುವರಿ ೨೦೦೯–೧೦

| ಕ್ರಮ ಸಂಖ್ಯೆ | ವಿವರಗಳು | ವಿಸ್ತೀರ್ಣ (ಹೆ) | ಉತ್ಪಾದನೆ (ಟನ್) | ಇಳುವರಿ (ಕೆ.ಜಿ/ಹೆ) |
|---|---|---|---|---|
| ೧ | ಏಕದಳ ಧಾನ್ಯಗಳು ಮತ್ತು ತೃಣ ಧಾನ್ಯಗಳು | ೨,೪೭,೧೯೧ | ೩,೯೨,೮೦೩ | ೧೬೭೩ |
| ೨ | ದ್ವಿದಳ ಧಾನ್ಯಗಳು | ೬೫,೦೪೦ | ೩೬,೧೩೬ | ೫೮೫ |
| ೩ | ಒಟ್ಟು ಆಹಾರ ಬೆಳೆಗಳು | ೩,೧೨,೨೩೧ | ೪,೨೮,೯೩೯ | ೧೪೪೬ |
| ೪ | ಎಣ್ಣೆ ಕಾಳುಗಳು | ೧,೧೪,೫೩೨ | ೪೫,೩೩೯ | ೪೧೮ |
| ೫ | ವಾಣಿಜ್ಯ ಬೆಳೆಗಳು | ೩೯೫೩ | ೧,೮೯,೦೨೩ | – |

ಮೂಲ: ಆರ್ಥಿಕ ಮತ್ತು ಸಾಂಖ್ಯಿಕ ನಿರ್ದೇಶನಾಲಯ, ಬೆಂಗಳೂರು

## ಕೋಷ್ಟಕ ೪.೬: ತಾಲೂಕುವಾರು ಪ್ರಮುಖ ಬೆಳೆಗಳ ವಿಸ್ತೀರ್ಣ ೨೦೧೨–೧೩

| ತಾಲೂಕು | ಪ್ರಮುಖ ಬೆಳೆಗಳ ವಿಸ್ತೀರ್ಣ ೨೦೧೨–೧೩ ಹೆಕ್ಟೇರುಗಳಲ್ಲಿ – ಏಕದಳ ಮತ್ತು ಉಪತೃಣ ಧಾನ್ಯಗಳು | | | | |
|---|---|---|---|---|---|
| | ಬತ್ತ | ಜೋಳ | ಮುಸುಕಿನ ಜೋಳ | ರಾಗಿ | ಇತರೆ ಏಕದಳ ಮತ್ತು ಉಪತೃಣ ಧಾನ್ಯಗಳು | ಒಟ್ಟು ಏಕದಳ ಮತ್ತು ಉಪತೃಣ ಧಾನ್ಯಗಳು |
| ಚಿಕ್ಕನಾಯಕನಹಳ್ಳಿ | ೪೭೯ | ೩,೦೯೫ | – | ೨೨,೭೩೦ | ೧,೭೬೧ | ೨೮,೦೬೫ |
| ಗುಬ್ಬಿ | ೧,೦೯೩ | ೧ | ೮೩ | ೧೪,೦೮೫ | – | ೧೫,೨೬೨ |
| ಕೊರಟಗೆರೆ | ೮೨೮ | ೩೦ | ೧೧,೮೪೮ | ೭,೨೮೫ | – | ೧೯,೯೯೧ |
| ಕುಣಿಗಲ್ | ೨,೮೬೫ | ೮೫ | ೧೧೧ | ೨೫,೩೭೮ | ೧ | ೨೮,೪೪೦ |
| ಮಧುಗಿರಿ | ೧,೦೭೫ | ೧೫ | ೧೦,೯೨೨ | ೪,೩೭೬ | – | ೧೬,೩೮೮ |
| ಪಾವಗಡ | ೩,೦೨೧ | – | ೯೮೮ | ೧,೮೮೧ | ೪೩ | ೫,೯೩೩ |
| ಶಿರಾ | ೯೦೧ | ೧೦೪ | ೩೪೦ | ೭,೪೨೬ | ೪೩೨ | ೯,೨೦೩ |
| ತಿಪಟೂರು | ೮೪೧ | – | ೮೨ | ೧೬,೪೫೪ | ೧೪೬ | ೧೭,೫೨೩ |
| ತುಮಕೂರು | ೨,೫೦೨ | ೪ | ೮೧೭ | ೨೦,೦೫೦ | – | ೨೩,೩೭೩ |
| ತುರುವೇಕೆರೆ | ೧,೨೬೩ | – | – | ೧೮,೦೬೫ | – | ೧೯,೩೨೮ |
| ಜಿಲ್ಲಾ ಮೊತ್ತ | ೧೪,೮೬೮ | ೩,೩೩೪ | ೨೫,೧೯೧ | ೧,೩೭,೭೩೦ | ೨,೩೮೩ | ೧,೮೩,೫೦೬ |

ಆಧಾರ: ತುಮಕೂರು ಜಿಲ್ಲೆಯ ಅಂಕಿ ಅಂಶಗಳ ನೋಟ ೨೦೧೩–೧೪

## ಕೋಷ್ಟಕ ೪.೬: ತಾಲೂಕುವಾರು ಪ್ರಮುಖ ಬೆಳೆಗಳ ವಿಸ್ತೀರ್ಣ ೨೦೧೨–೧೩

| ತಾಲೂಕು | ಪ್ರಮುಖ ಬೆಳೆಗಳ ವಿಸ್ತೀರ್ಣ ೨೦೧೨–೧೩ ಹೆಕ್ಟೇರುಗಳಲ್ಲಿ – ದ್ವಿದಳ ಧಾನ್ಯಗಳು | | | | | |
|---|---|---|---|---|---|---|
| | ತೊಗರಿ | ಹುರುಳಿ | ಉದ್ದು | ಹೆಸರು | ಅವರೆ | ಅಲಸಂದೆ |
| ಚಿಕ್ಕನಾಯಕನಹಳ್ಳಿ | ೯೩೨ | ೫,೨೧೬ | ೭೭ | ೪,೫೦೧ | ೫೯೮ | ೩೧೭ |
| ಗುಬ್ಬಿ | ೪೨೬ | ೧,೦೪೦ | ೨ | ೧,೧೫೧ | ೧,೩೮೫ | ೧,೦೧೭ |
| ಕೊರಟಗೆರೆ | ೫೭೫ | ೧,೧೪೮ | – | – | ೨೧೪ | ೨೭೫ |
| ಕುಣಿಗಲ್ | ೬೫೭ | ೨,೨೧೦ | ೫ | ೧,೪೮೯ | ೧,೭೨೫ | ೨೦೪ |
| ಮಧುಗಿರಿ | ೧,೦೨೬ | ೨,೮೮೫ | – | – | ೩೩೪ | ೪೬೩ |

| | | | | | | |
|---|---|---|---|---|---|---|
| ಪಾವಗಡ | ೨,೧೨೧ | ೧,೨೧೦ | – | ೬೦ | ೯೮ | ೩೧೧ |
| ಶಿರಾ | ೨,೫೯೮ | ೩,೮೧೭ | – | ೧೭ | ೧೫೬ | ೨೩೮ |
| ತಿಪಟೂರು | ೬೯೯ | ೧,೮೨೩ | ೪೫ | ೧,೪೨೪ | ೭೦೬ | ೨೨೪ |
| ತುಮಕೂರು | ೮೬೩ | ೨,೪೮೬ | ೨೬ | ೫೫ | ೮೭೩ | ೨೫೯ |
| ತುರುವೇಕೆರೆ | ೫೭೨ | ೧,೭೬೩ | – | ೧,೦೫೯ | ೧,೯೯೪ | ೨೬೧ |
| ಜಿಲ್ಲಾ ಮೊತ್ತ | ೧೦,೪೬೯ | ೨೩,೫೯೮ | ೧೫೫ | ೯,೬೭೬ | ೮,೦೮೩ | ೩,೫೬೯ |

ಆಧಾರ: ತುಮಕೂರು ಜಿಲ್ಲೆಯ ಅಂಕಿ ಅಂಶಗಳ ನೋಟ ೨೦೧೩–೧೪

## ಕೋಷ್ಟಕ ೪.೬: ತಾಲೂಕುವಾರು ಪ್ರಮುಖ ಬೆಳೆಗಳ ವಿಸ್ತೀರ್ಣ ೨೦೧೨–೧೩

| ತಾಲೂಕು | ಪ್ರಮುಖ ಬೆಳೆಗಳ ವಿಸ್ತೀರ್ಣ ೨೦೧೨–೧೩ ಹೆಕ್ಟೇರುಗಳಲ್ಲಿ – ದ್ವಿದಳ ಮತ್ತು ಆಹಾರ ಧಾನ್ಯಗಳು, ವಾಣಿಜ್ಯ ಬೆಳೆಗಳು | | | | | | |
|---|---|---|---|---|---|---|---|
| | ಕಡಲೆ | ಒಟ್ಟು ದ್ವಿದಳ ಧಾನ್ಯಗಳು | ಒಟ್ಟು ಆಹಾರ ಧಾನ್ಯಗಳು | ಒಟ್ಟು ಹಣ್ಣುಗಳ ಬೆಳೆಯ ವಿಸ್ತೀರ್ಣ | ಒಟ್ಟು ತರಕಾರಿ ಬೆಳೆಗಳ ವಿಸ್ತೀರ್ಣ | ಹತ್ತಿ | ಕಬ್ಬು |
| ಚಿಕ್ಕನಾಯಕನಹಳ್ಳಿ | ೪೭ | ೧೧,೬೮೮ | ೩೯,೭೫೩ | ೭೮೬ | ೧೦೭ | ೧೩೯ | ೨೨೧ |
| ಗುಬ್ಬಿ | – | ೫,೦೨೧ | ೨೦,೨೮೩ | ೬,೪೯೧ | ೧೬೧ | – | – |
| ಕೊರಟಗೆರೆ | – | ೨,೨೧೨ | ೨೨,೨೦೩ | ೧,೪೭೧ | ೨೧೩ | – | – |
| ಕುಣಿಗಲ್ | ೧೪ | ೬,೨೨೪ | ೩೪,೬೬೪ | ೨,೩೨೫ | ೩೪೦ | – | ೩೭ |
| ಮಧುಗಿರಿ | ೪೧ | ೪,೭೪೯ | ೨೧,೧೩೭ | ೭೮೪ | ೧೨೯ | ೨೩ | ೨,೫೭೬ |
| ಪಾವಗಡ | ೯೬ | ೩,೮೯೬ | ೯,೮೨೯ | ೧,೪೫೭ | ೭೬ | ೬೮ | ೧೮ |
| ಶಿರಾ | ೮೩ | ೬,೯೦೯ | ೧೬,೧೧೨ | ೨,೦೪೮ | ೬೯೭ | ೧,೧೫೫ | ೧ |
| ತಿಪಟೂರು | – | ೪,೯೨೧ | ೨೨,೪೪೪ | ೧,೦೭೦ | ೧೪೮ | – | – |
| ತುಮಕೂರು | ೧ | ೪,೫೬೩ | ೨೭,೯೩೬ | ೪,೮೯೬ | ೪೬೦ | – | ೨೧ |
| ತುರುವೇಕೆರೆ | ೧ | ೫,೬೫೦ | ೨೪,೯೭೮ | ೧,೦೦೭ | ೧೨೫ | – | – |
| ಜಿಲ್ಲಾ ಮೊತ್ತ | ೨೮೩ | ೫೫,೮೩೩ | ೨,೩೯,೩೩೯ | ೨೨,೩೩೫ | ೨,೪೫೬ | ೧,೩೮೫ | ೨,೬೫೩ |

ಆಧಾರ: ತುಮಕೂರು ಜಿಲ್ಲೆಯ ಅಂಕಿ ಅಂಶಗಳ ನೋಟ ೨೦೧೩–೧೪

## ಕೋಷ್ಟಕ ೪.೬: ತಾಲೂಕುವಾರು ಪ್ರಮುಖ ಬೆಳೆಗಳ ವಿಸ್ತೀರ್ಣ ೨೦೧೨–೧೩

| ತಾಲೂಕು | ಪ್ರಮುಖ ಬೆಳೆಗಳ ವಿಸ್ತೀರ್ಣ ೨೦೧೨–೧೩ – ಎಣ್ಣೆ ಕಾಳುಗಳು – ಹೆಕ್ಟೇರುಗಳಲ್ಲಿ | | | | | | |
|---|---|---|---|---|---|---|---|
| | ನೆಲಗಡಲೆ | ಸೂರ್ಯಕಾಂತಿ | ಹರಳು | ಎಳ್ಳು | ಹುಚ್ಚೆಳ್ಳು | ಇತರೆ ಎಣ್ಣೆಕಾಳುಗಳು | ಒಟ್ಟು ಎಣ್ಣೆಕಾಳುಗಳು |
| ಚಿಕ್ಕನಾಯಕನಹಳ್ಳಿ | ೧ | – | ೫೦೧ | ೧೦೧ | ೨೧೦ | ೮ | ೮೨೧ |
| ಗುಬ್ಬಿ | – | – | ೩೧ | – | ೪೩೦ | ೮೫ | ೫೪೬ |
| ಕೊರಟಗೆರೆ | ೪,೯೫೭ | ೧೧೭ | ೭೮ | – | ೫ | ೪ | ೫,೧೬೧ |
| ಕುಣಿಗಲ್ | ೧೩೯ | – | ೩೫ | ೨೯ | ೬೧ | ೪೦ | ೩೦೪ |
| ಮಧುಗಿರಿ | ೧೪,೮೩೯ | ೫೩ | ೬೯ | – | – | ೩೭ | ೧೪,೯೯೮ |
| ಪಾವಗಡ | ೪೭,೨೪೬ | ೪೬೭ | ೮೦೬ | – | – | – | ೪೮,೫೧೯ |

| | | | | | | | |
|---|---|---|---|---|---|---|---|
| ಶಿರಾ | ೧೬,೪೧೭ | ೧,೧೩೧ | ೮೮ | – | – | – | ೧೭,೬೩೬ |
| ತಿಪಟೂರು | – | ೯ | ೬೬೮ | ೧೫೬ | ೧೪೦ | ೧೦ | ೯೮೩ |
| ತುಮಕೂರು | ೩೮೪ | ೨ | ೧೫೬ | – | ೧೫೦ | ೭೧ | ೭೬೩ |
| ತುರುವೇಕೆರೆ | – | – | ೧೮೯ | ೯೨ | ೭೨ | ೧೩ | ೩೬೬ |
| ಜಿಲ್ಲಾ ಮೊತ್ತ | ೮೩,೯೮೩ | ೧,೭೭೯ | ೨,೬೨೧ | ೩೭೮ | ೧,೦೬೮ | ೨೬೮ | ೯೦,೦೯೭ |

**ಆಧಾರ: ತುಮಕೂರು ಜಿಲ್ಲೆಯ ಅಂಕಿ ಅಂಶಗಳ ನೋಟ ೨೦೧೩-೧೪**

**ರಾಗಿ:** ಜಿಲ್ಲೆಯಲ್ಲಿ ರಾಗಿ ಬೆಳೆಯು ಪ್ರಮುಖ ಮತ್ತು ಹೆಚ್ಚಿನ ಪ್ರದೇಶದಲ್ಲಿ ಬೆಳೆಯುವ ಬೆಳೆಯಾಗಿದೆ. ಮಳೆಯಾಶ್ರಿತ ಬೇಸಾಯ ಕ್ರಮ ಪದ್ಧತಿಗೆ ಬಹಳವಾಗಿ ಹೊಂದಿಕೊಂಡಿದೆ. ಇತರೆ ಆಹಾರ ಬೆಳೆಗಳಿಗಿಂತ ವಿಭಿನ್ನವಾಗಿರುವ ಗುಣಲಕ್ಷಣಗಳನ್ನು ಹೊಂದಿರುವ ಬೆಳೆ. ಬರಗಾಲವನ್ನು ತಡೆದುಕೊಳ್ಳುವ ಮತ್ತು ಮಳೆಯಾದಲ್ಲಿ ಮತ್ತೆ ಚೆನ್ನಾಗಿ ಬೆಳೆಯುವ ಶಕ್ತಿಯನ್ನು ಹೊಂದಿದೆ. ದೈಹಿಕ ಶ್ರಮದೊಂದಿಗೆ ಚಟುವಟಿಕೆಯಿಂದಿರುವ ಜನರಿಗೆ ಸುಸ್ಥಿರ ಆಹಾರ ಬೆಳೆಯಾಗಿದೆ. ಹೆಚ್ಚಿನ ತೇವಾಂಶವಿಲ್ಲದ ಒಣ ಜಾಗದಲ್ಲಿ ರಾಗಿಯನ್ನು ಸಂಗ್ರಹಿಸಿದಲ್ಲಿ ಹೆಚ್ಚಿನ ಕಾಲ ಕೀಟ-ಭಾದೆ ಇಲ್ಲದಂತೆ ಮತ್ತು ಧಾನ್ಯ ಕೆಡದಂತೆ ಸಂಗ್ರಹಿಸಬಹುದು. ಹಾಲು ಕರೆಯುವ ಮತ್ತು ಕೃಷಿ ಚಟುವಟಿಕೆಗಳಿಗೆ ಬಳಸುವ ಜಾನುವಾರುಗಳಿಗೆ ರಾಗಿ ಹುಲ್ಲು ಉತ್ತಮ ಮೇವು. ವಾರ್ಷಿಕ ೨೦ ರಿಂದ ೩೫ ಇಂಚು ಮಳೆ ಬೀಳುವ ಪ್ರದೇಶಗಳಲ್ಲಿ ರಾಗಿಯನ್ನು ಮಳೆಯಾಶ್ರಿತ ಬೆಳೆಯಾಗಿ ಬೆಳೆಯಬಹುದು. ಜುಲೈನಿಂದ ನವೆಂಬರ್ ತಿಂಗಳವರೆಗೆ ಬೀಳುವ ಒಟ್ಟು ಮಳೆ ಪ್ರಮಾಣಕ್ಕೆ ಅನುಗುಣವಾಗಿ ರಾಗಿಯ ಇಳುವರಿಯನ್ನು ನಿರೀಕ್ಷಿಸಬಹುದು. ಕೆಂಪು ಮತ್ತು ಮರಳು ಮಿಶ್ರಿತ ಗೋಡುಮಣ್ಣು ರಾಗಿ ಬೆಳೆಯ ಬೇಸಾಯಕ್ಕೆ ಹೆಚ್ಚು ಸೂಕ್ತವಾಗಿರುತ್ತದೆ. ಜುಲೈ ಮೊದಲವಾರ ಅಥವಾ ಮಧ್ಯ ಭಾಗದಲ್ಲಿ ಬಿತ್ತನೆ ಮಾಡಬಹುದು. ಈ ಅವಧಿಯಲ್ಲಿ ಬೆಳೆದ ಬೆಳೆಯು ಕಟಾವಿಗೆ ದೀರ್ಘಾವಧಿಯನ್ನು ತೆಗೆದುಕೊಳ್ಳುತ್ತದೆ ಮತ್ತು ಸಾಮಾನ್ಯವಾಗಿ ಹೆಚ್ಚಿನ ಇಳುವರಿಯನ್ನು ನೀಡುತ್ತದೆ. ಬೆಳೆ ನಷ್ಟವನ್ನು ತಡೆಯಲು ಅನುಸರಿಸುವ ಮಳೆಯಾಶ್ರಿತ ಬೇಸಾಯ ಕ್ರಮಗಳು ಹಾಗೂ ಮಣ್ಣು ಮತ್ತು ನೀರಿನ ಸಂರಕ್ಷಣೆಯನ್ನು ಮಾಡಲು ಅನುಕೂಲವಾಗುತ್ತದೆ. ಬೆಳೆ ಕಟಾವಿನ ನಂತರ ಮಳೆಯಾದಲ್ಲಿ ಕೂಡಲೇ ನೇಗಿಲಿನಿಂದ ಉಳುಮೆ ಮಾಡುವುದರಿಂದ ಮಣ್ಣಿನ ತೇವಾಂಶವನ್ನು ಹೆಚ್ಚಿಸಬಹುದು ಮತ್ತು ನೀರು ಕೊಚ್ಚಿಹೋಗುವುದನ್ನು ತಡೆಯಬಹುದು. ಪ್ರತಿ ಮಳೆಯ ನಂತರ ಮಣ್ಣಿನ ತೇವಾಂಶವನ್ನು ಹೆಚ್ಚಿಸಲು ಹಾಗೂ ಕಳೆ ಬೆಳೆಯುವುದನ್ನು ತಡೆಯಲು ಮತ್ತು ಬಿತ್ತನೆ ಮಾಡಲು ಉತ್ತಮ ಮಣ್ಣಿನ ರಚನೆಯನ್ನು ಪಡೆಯಲು ಉಳುಮೆ ಕಾರ್ಯವನ್ನು ಎರಡು ಅಥವಾ ಮೂರು ಬಾರಿ ಪುನರಾವರ್ತಿಸಲಾಗುತ್ತದೆ. ಬೆಳೆಯಲ್ಲಿ ಅಂತರ ಬೇಸಾಯ ಮಾಡಲು ಹಾಗೂ ಪರಿಣಾಮಕಾರಿಯಾಗಿ ಕಳೆ ನಿಯಂತ್ರಿಸಲು ಅನುಕೂಲವಾಗುವಂತೆ ಬೀಜಗಳನ್ನು ಸಾಲಿನಲ್ಲಿ ಬಿತ್ತಲಾಗುತ್ತದೆ. ಸಾಮಾನ್ಯವಾಗಿ ರಾಗಿಯಲ್ಲಿ ಮಿಶ್ರ ಬೆಳೆ ಪದ್ಧತಿಯನ್ನು ಅನುಸರಿಸಲಾಗುತ್ತದೆ ಹಾಗೂ ಮಿಶ್ರ ಬೆಳೆಯಾಗಿ ತೊಗರಿ ಅಥವಾ ಅವರೆಯನ್ನು ಬಿತ್ತಲಾಗುತ್ತದೆ. ಮಳೆ ಕಡಿಮೆಯಾದಾಗ ಅಥವಾ ಕಾಲಕ್ಕೆ ಸರಿಯಾಗಿ ಮಳೆಯಾಗದಿದ್ದಾಗ ಎರಡು ಬೆಳೆಯಲ್ಲಿ ಯಾವುದಾದರೂ ಒಂದು ಬೆಳೆಯ ಫಸಲಿನಿಂದಾಗಿ ಒಟ್ಟಾರೆ ಬೆಳೆ ನಷ್ಟವನ್ನು ಕಡಿಮೆಗೊಳಿಸಬಹುದು. ಇತ್ತೀಚಿನ ದಿನಗಳಲ್ಲಿ ನೆಲಗಡಲೆಯನ್ನು ರಾಗಿಯ ನಂತರ ಬೆಳೆಯುವ ಪದ್ಧತಿ ರೂಢಿಯಲ್ಲಿದೆ. ಸಾಮಾನ್ಯವಾಗಿ ಮಳೆ ತಡವಾದಲ್ಲಿ 'ಹುರಳಿ' ಅಥವಾ ತೃಣ ಧಾನ್ಯವಾದ 'ಬರಗು' ಬೆಳೆಯನ್ನು ಬೆಳೆಯಲಾಗುತ್ತದೆ. ಮುಂದಿನ ಋತುವಿನಲ್ಲಿ ರಾಗಿಯನ್ನು ಬಿತ್ತಲಾಗುವುದು.

ರಾಗಿಯು ಮುಖ್ಯ ಬೆಳೆಯಾದ್ದರಿಂದ ಸಸ್ಯ ಪೋಷಕಾಂಶಗಳಿಂದ ಗೊಬ್ಬರ, ಗೋಡುಮಣ್ಣು, ಕುರಿ ಗೊಬ್ಬರ ಇತ್ಯಾದಿಗಳನ್ನು ಬಿತ್ತನೆ ಮಾಡುವ ಮುಂಚೆ ಜಮೀನಿಗೆ ಹಾಕಲಾಗುತ್ತದೆ. ವಿಶೇಷ ಸಂದರ್ಭಗಳಲ್ಲಿ ಗೊಬ್ಬರವನ್ನು ಬೀಜದೊಂದಿಗೆ ಬೆರಸಿ ಸಾಲುಗಳಲ್ಲಿ ಬಿತ್ತನೆ ಮಾಡಲಾಗುವುದು. ಗೊಬ್ಬರವನ್ನು ಜಮೀನಿನಲ್ಲಿ ಹರಡಿ ನಂತರ ಕಲ್ಟಿವೇಟರ್ ಉಪಕರಣದ ಮೂಲಕ ಮಣ್ಣಿನೊಂದಿಗೆ ಬೆರೆಯುವಂತೆ ಮಾಡಲಾಗುತ್ತದೆ. ರಾಗಿಯನ್ನು ಜುಲೈ ಅಂತ್ಯದವರೆಗೆ ಅಥವಾ ಆಗಸ್ಟ್ ಮೊದಲ ವಾರದವರೆಗೂ ಬಿತ್ತುವ ರೂಢಿ ಇರುವುದರಿಂದ ಹಸಿರೆಲೆ ಗೊಬ್ಬರದ ರೂಪದಲ್ಲಿ ಸನ್‌ಹೆಂಪ್/ ಗ್ಲೈರಿಸಿಡಿಯಾ ಬೆಳೆಯನ್ನು ಬೆಳೆಸಿ ನಂತರ ಮಣ್ಣಿನೊಂದಿಗೆ ಉಳುಮೆ ಮಾಡಬಹುದು. ಹಸಿರೆಲೆ ಗೊಬ್ಬರದಲ್ಲಿನ ಸಸ್ಯ ಪೋಶಕಾಂಶಗಳು ರಾಗಿ ಬೆಳೆಗೆ ದೊರಕಿ ಇಳುವರಿ ಹೆಚ್ಚಿಸುವಲ್ಲಿ ಸಹಾಯವಾಗುತ್ತದೆ.

ರಾಗಿಯನ್ನು ಚೆಲ್ಲುವ ಮೂಲಕ ಅಥವಾ ಸಾಲುಗಳಲ್ಲಿ ಬಿತ್ತುವ ಪದ್ಧತಿಯನ್ನು ಕಾಣಬಹುದು. ಬೀಜ ಮತ್ತು ಗೊಬ್ಬರವನ್ನು ಏಕಕಾಲದಲ್ಲಿ ಜಮೀನಿಗೆ ಬಿತ್ತಲು ಅನುಕೂಲವಾಗುವ ಉಪಕರಣವಾಗಿ 'ಕೂರಿಗೆ' ಯನ್ನು ಬಳಸಿ ರಾಗಿ ಬಿತ್ತನೆ ಮಾಡಲಾಗುತ್ತದೆ. ಎಕರೆಗೆ ಐದರಿಂದ ಎಂಟು ಕೆ.ಜಿ ಬಿತ್ತನೆ ಬೀಜವನ್ನು ಬಳಸಲಾಗುತ್ತದೆ. ಬಿತ್ತಿದ ನಂತರ ಕುಂಟೆ ಹೊಡೆದು ಬೀಜವನ್ನು ಮಣ್ಣಿನಿಂದ ಮುಚ್ಚಲಾಗುತ್ತದೆ. ಮಣ್ಣಿನಲ್ಲಿ ತೇವಾಂಶ ಕಡಿಮೆ ಇದ್ದಲ್ಲಿ ಅಥವಾ ಬಿತ್ತನೆ ಬೀಜದ ಗುಣಮಟ್ಟವು ಕಡಿಮೆ ಇದ್ದಲ್ಲಿ ಬೀಜ ಮೊಳಕೆಯ ಪ್ರಮಾಣವನ್ನು ಸರಿದೂಗಿಸಲು ಹೆಚ್ಚಿನ ಪ್ರಮಾಣದ ಬಿತ್ತನೆ ಬೀಜವನ್ನು ಬಳಸಲಾಗುತ್ತದೆ. ರಾಗಿ ಬೀಜಕ್ಕೆ ಮೊಳಕೆ ಒಡೆಯಲು ನಿಗದಿತ ಅವಧಿ ಇರುವುದಿಲ್ಲ. ರಾಗಿ ಧಾನ್ಯ ಸಂಗ್ರಹಣಾ ಕ್ರಮ ಮತ್ತು ರಾಗಿ ಹಳೆಯದಾದಲ್ಲಿ ಬೀಜ ಮೊಳಕೆ ಪ್ರಮಾಣವು ಕಡಿಮೆಯಾಗುವ ಸಾಧ್ಯತೆ ಇರುತ್ತದೆ. ಮಳೆಯಾಶ್ರಿತ ಪ್ರದೇಶದಲ್ಲಿ ರಾಗಿಯನ್ನು ನಾಟಿ ಮಾಡುವ ಕ್ರಮವನ್ನು ಸಹಾ ಅನುಸರಿಸಲಾಗುತ್ತದೆ. ನಾಟಿ ಮಾಡುವ ಪದ್ಧತಿಯಲ್ಲಿ ಎಕರೆಗೆ ಎರಡರಿಂದ ಮೂರು ಕೆ.ಜಿ. ಬೀಜವನ್ನು ಬಳಸಿ ನರ್ಸರಿಯನ್ನು ತಯಾರಿಸಿ ೧೫-೧೮ ದಿನಗಳ ಸಸಿಗಳನ್ನು ನಾಟಿ ಮಾಡಿ ಬೇಸಾಯ ಮಾಡುವ ಕ್ರಮವನ್ನು ಸಹಾ ಕಾಣಬಹುದು.

ಮುಂಗಾರು ರಾಗಿಯು ನವೆಂಬರ್-ಡಿಸೆಂಬರ್ ಅಂತ್ಯಕ್ಕೆ ಕಟಾವಿಗೆ ಬರುತ್ತದೆ. ಸಾಮಾನ್ಯವಾಗಿ ಬೆಳೆ ಕಟಾವಿಗೆ ಬರಲು ಐದರಿಂದ ಐದೂವರೆ ತಿಂಗಳು ತೆಗೆದುಕೊಳ್ಳುತ್ತದೆ. ಬಿತ್ತನೆ ಮಾಡಿದ ಕಾಲ ಮತ್ತು ಉಪಯೋಗಿಸಿದ ತಳಿಗೆ ಅನುಗುಣವಾಗಿ ಬೆಳೆಯು ಕಟಾವಿಗೆ ಬರುತ್ತದೆ. ಪ್ರತಿ ಹೆಕ್ಟೇರ್‌ಗೆ ೧೫ ರಿಂದ ೨೦ ಕ್ವಿಂಟಾಲ್ ಇಳುವರಿಯನ್ನು ಪಡೆಯಬಹುದು. ಹಿಂದಿನ ಕಾಲದಲ್ಲಿ ಭೂಮಿಯಲ್ಲಿ ಗುಂಡಿತೋಡಿ ರಾಗಿಯನ್ನು ಶೇಖರಿಸಲಾಗುತ್ತಿತ್ತು. ನಂತರ ಗೋಣಿ ಚೀಲಗಳಲ್ಲಿ ಶೇಖರಿಸಿ, ತ್ವರಿತವಾಗಿ ಬಳಸುವ ಪದ್ಧತಿ ರೂಢಿಯಲ್ಲಿದ್ದು, ಹೆಚ್ಚಿನ ಪ್ರಮಾಣದಲ್ಲಿ ಶೇಖರಿಸಬೇಕಾದಲ್ಲಿ ಧಾನ್ಯ ಸಂಗ್ರಹಣಾ ಕಣಜಗಳಲ್ಲಿ ಸಂಗ್ರಹಿಸಲಾಗುತ್ತದೆ.

ಈ ಜಿಲ್ಲೆಯಲ್ಲಿ ಆರಂಭದಿಂದಲೂ ಸಾಂಪ್ರದಾಯಕವಾಗಿ ವಿವಿಧ ರೀತಿಯ ದೇಸಿ ರಾಗಿ ತಳಿಗಳನ್ನು ಜನಪ್ರಿಯವಾಗಿ ಬೆಳೆಯಲಾಗುತ್ತಿತ್ತು. ಅವುಗಳೆಂದರೆ ಹುಲ್ಲುಬ್ಬಿ ರಾಗಿ, ಗುಡ್ಡುಬ್ಬಿ ರಾಗಿ, ಕರಿಗಿಡ್ಡರಾಗಿ, ಜೇನು ಮುದ್ದೆ ರಾಗಿ, ಮಾದಯ್ಯನಗಿರಿ ರಾಗಿ, ಹಸಿರು ಕಂಬಿ ರಾಗಿ, ದೊಡ್ಡರಾಗಿ, ಬಿಳಿರಾಗಿ, ಬಾಳೆ ಪಟ್ಟೆ ರಾಗಿ, ಕರಿಮುರುಕಲು ರಾಗಿ, ಮಜ್ಜಿಗೆ ರಾಗಿ, ರುದ್ರಜಡೆ ರಾಗಿ, ಜಡೆ ಶಂಕರ ರಾಗಿ ಇತ್ಯಾದಿ ರಾಗಿ ತಳಿಗಳು ಅಂದು ಬಹು ಜನಪ್ರಿಯವಾಗಿದ್ದವು. ಆನಂತರದಲ್ಲಿ ರಾಗಿ ಅಭಿವೃದ್ಧಿಯಲ್ಲಿ ವಿವಿಧ ನಾಡ ತಳಿಗಳ ಸಂಕರ ಕಾರ್ಯವನ್ನು ಕೈಗೊಳ್ಳಲಾಯಿತು. ಇದರಿಂದಾಗಿ ಮಳೆ ಆಶ್ರಿತ ಮತ್ತು ನೀರಾವರಿ ರಾಗಿಯ ಇಳುವರಿಯು ಅಧಿಕವಾಯಿತು. ಬೆಂಗಳೂರು ಕೃಷಿ ವಿಶ್ವವಿದ್ಯಾನಿಲಯವು ಆರಂಭದಿಂದ ಇದುವರೆವಿಗೂ ರಾಗಿ ತಳಿ ಅಭಿವೃದ್ಧಿಯಲ್ಲಿ ಪ್ರಮುಖ ಪಾತ್ರ ವಹಿಸುತ್ತಾ ಬಂದಿದೆ. ಈ ಹಂತದಲ್ಲಿ ತಳಿ ಅಭಿವೃದ್ಧಿ ಕಾರ್ಯದಲ್ಲಿ ಆಫ್ರಿಕಾ ದೇಶದ ಸೀಮೆ ರಾಗಿ ತಳಿಗಳ ಬಳಕೆ ಮತ್ತು ಸಂಪರ್ಕ ವಿಧಾನದ ಮೂಲಕ ಸಂಕರ ಕಾರ್ಯದಿಂದ ರಾಗಿ ತಳಿ ಅಭಿವೃದ್ದಿಗೊಳಿಸಲಾಯಿತು. ಇದರಿಂದ ರಾಗಿ ಬೆಳೆಯಲ್ಲಿ ಅಧಿಕ ಉತ್ಪಾದನೆಗೆ ವಿಶಿಷ್ಟ ಆಯಾಮ ದೊರೆಯಿತು. ಈ ಶ್ರಮದಾಯಕ ಸಂಶೋಧನೆಯಿಂದ ಮಳೆ ಆಶ್ರಯದಲ್ಲೂ ಹಾಗೂ ನೀರಾವರಿಯಲ್ಲೂ ವಿವಿಧ ಕೃಷಿ ವಲಯಗಳಿಗೆ ಸೂಕ್ತವಾದ, ವಿವಿಧ ಕಾಲಮಾನದಲ್ಲಿ ಬೆಳೆಯಲಾಗುವ ಕೀಟ ಹಾಗೂ ರೋಗ ಬಾಧೆಯನ್ನು ತಡೆದುಕೊಳ್ಳುವ ರಾಗಿ ತಳಿಗಳನ್ನು ಅಭಿವೃದ್ಧಿಪಡಿಸಲಾಯಿತು.ಈ ತಳಿಗಳು ಭಾರತ ಮತ್ತು ಆಫ್ರಿಕಾ ರಾಗಿ ತಳಿಗಳ ಸಂಕರಣದಿಂದಾದುದರಿಂದ ಇವುಗಳಿಗೆ ಇಂಡಾಫ್ ತಳಿಗಳೆಂದು ಹೆಸರಿಡಲಾಯಿತು. ಈ ತಳಿಗಳಲ್ಲಿ ಇಂಡಾಫ್ ೧, ಇಂಡಾಫ್ ೩, ಇಂಡಾಫ್ ೫, ಇಂಡಾಫ್ ೭, ಇಂಡಾಫ್ ೮ ಮತ್ತು ಇಂಡಾಫ್ ೯ ತಳಿಗಳ ಬಿಡುಗಡೆಯಾಗಿದ್ದು, ಇದು ಕೃಷಿ ವಿಶ್ವವಿದ್ಯಾನಿಲಯದ ಮಹತ್ವದ ಸಾಧನೆಯಾಗಿದೆ. ರಾಗಿತಳಿ ಅಭಿವೃದ್ಧಿಯಲ್ಲಿ ಪ್ರಮುಖವಾದ ಹೆಸರು ರಾಗಿ ಲಕ್ಷ್ಮಣಯ್ಯ ಅವರದು. ಇವರು ಅರುಣ, ಅನ್ನಪೂರ್ಣ, ಉದಯ, ಪೂರ್ಣ, ಕಾವೇರಿ, ಶಕ್ತಿ ಹಾಗೂ ಇಂಡಾಫ್ ತಳಿಗಳನ್ನು ಅಭಿವೃದ್ಧಿಪಡಿಸುವಲ್ಲಿ ಮುಖ್ಯಪಾತ್ರವಹಿಸಿದ್ದಾರೆ.

ಇಂಡಾಫ್ ತಳಿಗಳ ಬಿಡುಗಡೆಯಿಂದ ಗರಿಷ್ಠ ಪ್ರಮಾಣದ ಉತ್ಪಾದನೆ ಪಡೆಯುವುದರೊಂದಿಗೆ ಸಾಕಷ್ಟು ಸ್ವಾವಲಂಬನೆ ಸಾಧಿಸಲಾಯಿತು. ಈ ತಳಿಗಳು ಅಧಿಕ ಇಳುವರಿ ಕೊಡಬಲ್ಲವಾಗಿದ್ದು, ಉತ್ಪಾದನಾ ಘಟಕಗಳಿಗೆ ಚೆನ್ನಾಗಿ ಸ್ಪಂದಿಸುತ್ತಿದ್ದು ವಿವಿಧ ಕೃಷಿ ವಲಯಗಳಿಗೆ ಸೂಕ್ತವಾಗಿವೆ. ಈ ತಳಿಗಳ ಉಪಯೋಗದಿಂದ ಇದುವರೆಗೆ ಕಾರ್ ಮತ್ತು ಹೈನ್ ಬೆಳೆಯಾಗಿ ಬೆಳೆಯುವ ರಾಗಿಯನ್ನು ಕೊನೆ ಮುಂಗಾರು, ಹಿಂಗಾರು ಹಾಗೂ ನೀರಾವರಿ ಹೀಗೆ ಮೂರು ಬೆಳೆಯಾಗಿ ಬೆಳೆಯಲು

ಸಾಧ್ಯವಾಗಿವೆ. ಇತ್ತೀಚಿನ ಸಂಶೋಧನೆಗಳಿಂದ ಹೊಸ ರಾಗಿ ತಳಿಗಳಾದ ಇಂಡಾಫ್ ೬, ಇಂಡಾಫ್ ೧೦, ಇಂಡಾಫ್ ೧೫, ಎಂ.ಆರ್ ೧, ಎಂ.ಆರ್.೨ ಮತ್ತು ಇಂಡಾಫ್ ೧೧ ಬಿಳಿ ರಾಗಿ ತಳಿಗಳನ್ನು ಅಭಿವೃದ್ಧಿಪಡಿಸಲಾಗಿದೆ. ಇವು ರೊಟ್ಟಿ, ಮುದ್ದೆ, ಮಾಲ್ಟ್ ಹಾಗೂ ಮಕ್ಕಳ ಪೌಷ್ಟಿಕ ಆಹಾರ ಮುಂತಾದವುಗಳಿಗೆ ಉಪಯುಕ್ತವಾಗಿವೆ. ವಿವಿಧ ರಾಗಿ ತಳಿಗಳ ಅವಧಿ ಮತ್ತು ಇಳುವರಿ ವಿವರಗಳನ್ನು ಮುಂದಿನ ಕೋಷ್ಟಕದಲ್ಲಿ ನೀಡಲಾಗಿದೆ.

**ಕೋಷ್ಟಕ ೪.೭: ವಿವಿಧ ರಾಗಿ ತಳಿಗಳ ಅವಧಿ ಮತ್ತು ಇಳುವರಿ**

| ಕ್ರ.ಸಂ. | ತಳಿಯ ಹೆಸರು | ಅವಧಿ (ದಿನಗಳಲ್ಲಿ) | ಇಳುವರಿ(ಟನ್/ಹೆಕ್ಟೇರ್) |
|---|---|---|---|
| ೧. | ಸಿ.ಒ.೧ | ೧೨೦ | ೨.೪–೨.೭ |
| ೨. | ಇ.ಎಸ್. ೧೩ | ೧೨೦ | ೧.೬–೧.೭ |
| ೩. | ಹೆಚ್.೧ | ೧೧೫–೧೨೦ | ೨.೨ |
| ೪. | ಅರುಣ | ೬೫ | ೨.೫ |
| ೫. | ಪೂರ್ಣ | ೧೦೫ | ೪.೦ |
| ೬. | ಉದಯ | ೯೦ | ೩.೦ |
| ೭. | ಅನ್ನಪೂರ್ಣ | ೧೧೦ | ೪.೦ |
| ೮. | ಹೆಚ್.೨೨ | ೧೫೦ | ೧.೩–೧.೬ |
| ೯. | ಕೆ.೧ | ೧೨೦–೧೨೫ | ೧.೧–೧.೩ ೧.೬–೨.೨(ನೀರಾವರಿ) |
| ೧೦. | ಆರ್ ೦೮೭೦ | ೧೩೦–೧೫೫ | ೧.೧–೧.೩ |
| ೧೧. | ಇ.ಎಸ್ ೧೧ | ೧೧೦–೧೨೦ | ೦.೯–೧.೬ ೧.೧–೧.೬(ನೀ) ೨.೪–೨.೭ |
| ೧೨. | ಕಾವೇರಿ | ೧೨೦ | ೪.೦ |
| ೧೩. | ಶಕ್ತಿ | ೧೨೦ | ೩.೦–೪.೫ |
| ೧೪. | ೫–೬ | ೯೨ | ೩.೦ |
| ೧೫. | ಇಂಡಾಫ್–೧ | ೧೨೦–೧೨೫ | ೩.೬–೩.೮ |
| ೧೬. | ಇಂಡಾಫ್–೩ | ೧೩೦–೧೩೫ | ೩.೬–೪.೦ |
| ೧೭. | ಇಂಡಾಫ್–೫ | ೧೦೫–೧೧೫ | ೪.೫–೫.೦ |
| ೧೮. | ಇಂಡಾಫ್–೭ | ೧೧೫–೧೨೫ | ೫.೦–೬.೦ |
| ೧೯. | ಇಂಡಾಫ್–೮ | ೧೨೦–೧೨೫ | ೩.೦–೪.೦ |
| ೨೦. | ಇಂಡಾಫ್–೯ | ೯೫–೧೨೫ | ೩.೦–೪.೦ |
| ೨೧. | ಇಂಡಾಫ್–೬ | ೧೧೫–೧೨೦ | ೩.೫–೪.೦ |
| ೨೨. | ಇಂಡಾಫ್–೧೦ | ೧೨೦–೧೨೫ | ೪.೦–೫.೦ |
| ೨೩. | ಇಂಡಾಫ್–೧೧ | ೧೧೫–೧೨೦ | ೩.೫–೪.೦ ೪.೦–೪.೫(ನೀರಾವರಿ) |
| ೨೪. | ಇಂಡಾಫ್–೧೫ | ೧೨೫–೧೩೫ | ೪.೦–೪.೫ |
| ೨೫. | ಹೆಚ್.ಆರ್. ೯೧೧ | ೧೧೫–೧೨೫ | ೩.೦–೩.೫ ೨.೦–೩.೦(ನೀರಾವರಿ) |
| ೨೬. | ಜಿ.ಪಿ.ಯು.೨೮ | ೧೦೫–೧೧೫ | ೨.೦–೪.೦ ೨.೫–೩.೦(ನೀರಾವರಿ) |
| ೨೭. | ಜಿ.ಪಿ.ಯು–೨೬ | ೯೫–೧೦೫ | ೩.೦–೩.೫ ೨.೫–೩.೦ |
| ೨೮. | ಎಲ್.೫ | ೧೨೦–೧೨೫ | ೨.೫–೩.೦ |

| | | | |
|---|---|---|---|
| ೨೯. | ಎಂ.ಆರ್,–೧ | ೧೨೦–೧೨೫ | ೩.೫–೪.೫ ೨.೫–೩.೦(ನೀರಾವರಿ) |
| ೩೦. | ಎಂ.ಆರ್,–೨ | ೧೨೦–೧೨೫ | ೩.೦–೩.೫ ೨.೦–೨.೫ |
| ೩೧. | ಎಂ.ಆರ್,–೩ | ೧೨೫–೧೩೦ | ೪.೫–೫.೦ ೫.೫–೬.೦(ನೀರಾವರಿ) |
| ೩೨. | ಪಿ.ಆರ್–೨೦೨ | ೧೧೫–೧೨೫ | ೨.೦–೨.೫ |

**ಬತ್ತ:** ಜಿಲ್ಲೆಯಲ್ಲಿ ರಾಗಿಯ ನಂತರ ಪ್ರಮುಖವಾಗಿ ಬೆಳೆಯುತ್ತಿರುವ ಬೆಳೆಯೆಂದರೆ ಬತ್ತದ ಬೆಳೆಯಾಗಿದೆ. ಎಲ್ಲಾ ತಾಲೂಕುಗಳಲ್ಲಿ ಬತ್ತದ ಬೆಳೆಯ ಕೃಷಿಯನ್ನು ಕಾಣಬಹುದು. ಕುಣಿಗಲ್, ತುಮಕೂರು, ಶಿರಾ, ಗುಬ್ಬಿ ತಾಲೂಕಿನಲ್ಲಿ ಬತ್ತದ ವಿಸ್ತೀರ್ಣ ಹೆಚ್ಚಿದೆ. ಚಿಕ್ಕನಾಯಕನಹಳ್ಳಿ ತಾಲೂಕಿನಲ್ಲಿ ಬತ್ತದ ವಿಸ್ತೀರ್ಣ ಅತ್ಯಂತ ಕಡಿಮೆ ಇರುವುದನ್ನು ಕಾಣಬಹುದು. ಜಿಲ್ಲೆಯಲ್ಲಿ ಸುಮಾರು ೩೪,೦೦೦ ಹೆಕ್ಟೇರ್ ಪ್ರದೇಶದಲ್ಲಿ ಬೆಳೆಯಲಾಗುತ್ತಿದೆ. ಬತ್ತವನ್ನು ಕೆರೆಗಳಲ್ಲಿನ ನೀರಿನ ಪ್ರಮಾಣ–ಕ್ಕನುಗುಣವಾಗಿ ಬೇಸಿಗೆಯಲ್ಲಿ ಪ್ರಮುಖವಾಗಿ ಬೆಳೆಯಲಾಗುತ್ತಿದೆ. ಚಾಲ್ತಿಯಲ್ಲಿರುವ ಬತ್ತದ ತಳಿಗಳೆಂದರೆ ಬಿ.ಸಿ.ಟಿ–೫೨೦೪, ಜಯ ಐ.ಆರ್–೬೪, ತೆಲ್ಲಹಂಸ ಮತ್ತು ಕೆ.ಆರ್.ಎಚ್–೨ (ಕರ್ನಾಟಕ ರೈಸ್ ಹೈಬ್ರಿಡ್ ೨) ಶಿಫಾರಸ್ಸು ಮಾಡಿರುವ ತಳಿಗಳ ಗುಣವಿಶೇಷತೆಯನ್ನು ಮುಂದಿನ ಕೋಷ್ಟಕದಲ್ಲಿ (ಕೋಷ್ಟಕ ೪.೯) ಮತ್ತು ಎಕರೆಗೆ ಬೇಕಾಗುವ ಪರಿಕರಗಳ ವಿವರಗಳನ್ನು ಕೋಷ್ಟಕ ೪.೧೦ರಲ್ಲಿ ನೀಡಲಾಗಿದೆ.

**ಕೋಷ್ಟಕ ೪.೮: ಬತ್ತದ ತಳಿಗಳ ಗುಣವಿಶೇಷತೆಗಳು**

| ಕ್ರ.ಸಂ. | ತಳಿಯ ಹೆಸರು | ಅವಧಿ (ದಿನಗಳಲ್ಲಿ) | ಬಿತ್ತನೆ ಕಾಲ | ನಾಟಿ ಕಾಲ |
|---|---|---|---|---|
| ೧. | ಬಿ.ಪಿ.ಟಿ –೫೨೦೪ | ೧೪೦–೧೪೫ | ಜುಲೈ ೩ನೇ ವಾರದೊಳಗೆ | ಆಗಸ್ಟ್ ಮೊದಲ ವಾರದೊಳಗೆ |
| ೨. | ಜಯ | ೧೪೦–೧೪೫ | ಜೂನ್ ಕೊನೆಯೊಳಗೆ | ಜುಲೈ ೨ನೇ ವಾರದೊಳಗೆ |
| ೩. | ಐ.ಆರ್.–೬೪ | ೧೩೦–೧೩೫ | ಜುಲೈ ೨ನೇ ವಾರದೊಳಗೆ | ಆಗಸ್ಟ್ ಮೊದಲ ವಾರದೊಳಗೆ |
| ೪. | ತೆಲ್ಲಹಂಸ | ೧೨೦–೧೨೫ | ಜುಲೈ ಕೊನೆಯೊಳಗೆ | ಆಗಸ್ಟ್ ೩ನೇ ವಾರದೊಳಗೆ |
| ೫. | ಕೆ.ಆರ್.ಹೆಚ್–೨ | ೧೩೦–೧೩೫ | ಜುಲೈ ೨ನೇ ವಾರದೊಳಗೆ | ಆಗಸ್ಟ್ ೧ನೇ ವಾರದೊಳಗೆ |

**ಮೂಲ: ಜಿಲ್ಲಾ ಕೃಷಿ ನಿಗಮ, ತುಮಕೂರು**

**ಕೋಷ್ಟಕ ೪.೯: ಬತ್ತದ ಬೆಳೆಯ ಪರಿಕರಗಳ ವಿವರಗಳು**

| ಕ್ರ.ಸಂ. | ತಳಿಯ ಹೆಸರು | ವಿವರಗಳು | | |
|---|---|---|---|---|
| | | ನಾಟಿ ಬೆಳೆಗೆ | ಕೂರಿಗೆ ಬಿತ್ತನೆಗೆ | ಹೈಬ್ರಿಡ್ ಬತ್ತಕ್ಕೆ |
| ೧ | ಬಿತ್ತನೆ ಬೀಜ (ಕೆ.ಜಿ) | ೨೫ | ೨೦ | ೮ |
| ೨ | ಕೊಟ್ಟಿಗೆ ಗೊಬ್ಬರ (ಟನ್) | ೪ | ೪ | ೪ |
| | ಹಸಿರೆಲೆ ಗೊಬ್ಬರ (ಟನ್) | ೨ | – | ೨ |
| ೩ | ರಸಗೊಬ್ಬರ (ಕೆ.ಜಿ) | ಮುಂಗಾರು | ಹಿಂಗಾರು | ಕೂರಿಗೆ ಬಿತ್ತನೆ |
| | ಸಾರಜನಕ | ೪೦ | ೫೦ | ೪೦ |
| | ರಂಜಕ | ೨೦ | ೨೫ | ೨೦ |
| | ಪೊಟ್ಯಾಷ್ | ೨೦ | ೨೫ | ೨೦ |

**ಇಳುವರಿ ೪೫ರಿಂದ ೫೦ ಕ್ವಿಂಟಾಲ್ /ಹೆ ; ಮೂಲ: ಜಿಲ್ಲಾ ಕೃಷಿ ನಿಗಮ, ತುಮಕೂರು**

**ಹೈಬ್ರಿಡ್ ಬತ್ತ:** ಕರ್ನಾಟಕದಲ್ಲಿ ಹೈಬ್ರಿಡ್ ಬತ್ತದ ಸಂಶೋಧನೆಯು ೮೦ರ ದಶಕದಲ್ಲಿ ಆರಂಭವಾಯಿತು. ಈ ಬತ್ತದ ಸಂಶೋಧನೆಗಾಗಿ ಭಾರತ ಸರ್ಕಾರ ಹಾಗೂ ರಾಜ್ಯ ಸರ್ಕಾರಗಳು ಬಹು ಆಸ್ಥೆವಹಿಸಿ ಆ ಕ್ಷೇತ್ರದಲ್ಲಿ ಮಹತ್ತರ ಸಾಧನೆಗೆ ಮುಂದಾಯಿತು. ಆರಂಭದಲ್ಲಿ ಚೀನಾ ರಾಷ್ಟ್ರದ ಹೈಬ್ರಿಡ್ ತಳಿಗಳನ್ನು ಆಮದುಮಾಡಿಕೊಂಡು ಪರೀಕ್ಷಿಸಿದಾಗ

ಆ ತಳಿಗಳು ಇಲ್ಲಿನ ಸ್ಥಳೀಯ ಪ್ರದೇಶಕ್ಕೆ ಹೊಂದಿಕೊಳ್ಳಲಿಲ್ಲ. ಅವುಗಳಲ್ಲಿ ಯಾವುದೇ ರೀತಿಯ ಕೀಟ ಮತ್ತು ರೋಗ ನಿರೋಧಕ ಶಕ್ತಿ ಇರಲಿಲ್ಲ. ಎರಡನೇ ಹಂತದಲ್ಲಿ ಚೀನಾ ರಾಷ್ಟ್ರದ ತಳಿಗಳ ತಾಯಿ ಬೀಜಗಳನ್ನು ಉಪಯೋಗಿಸಿದ ಹೈಬ್ರಿಡ್ ತಳಿಗಳಿಗೂ ಇದೇ ದುರವಸ್ಥೆ ಕಂಡು ಬಂದಿತು. ಆದ್ದರಿಂದ ಮೂರನೇ ಹಂತದಲ್ಲಿ ಫಿಲಿಫೈನ್ಸ್‌ನ ಅಂತಾರಾಷ್ಟ್ರೀಯ ಬತ್ತ ಸಂಶೋಧನಾ ಸಂಸ್ಥೆಯು ಕೆಲವು ಹೈಬ್ರಿಡ್ ತಳಿಗಳ ತಾಯಿಬೀಜಗಳನ್ನು ಸ್ಥಳೀಯ ತಳಿಗಳೊಡನೆ ಸಂಕರ ಮಾಡಿ ಅಭಿವೃದ್ಧಿಪಡಿಸಿದಾಗ ಉತ್ತಮ ಫಲಿತಾಂಶ ದೊರಕಿತು.ಇದರ ಫಲವಾಗಿ ಪ್ರಪಂಚದಲ್ಲಿ ಹೈಬ್ರಿಡ್‌ತಳಿಗಳನ್ನು ಬೆಳೆಯುವ ಸಾಲಿಗೆ ಕರ್ನಾಟಕವೂ ಒಳಗೊಂಡಿತು.

ಬತ್ತದ ಬೆಳೆಯನ್ನು ಬೆಳೆಯುವಲ್ಲಿ ಹೈಬ್ರಿಡ್ ತಳಿಗಳ ಬೀಜವನ್ನು ಹೊಸದಾಗಿ ಪ್ರತಿ ಬಾರಿಯೂ ಖರೀದಿಸಬೇಕಾಗುತ್ತದೆ. ಇದನ್ನು ಪ್ರತಿ ಸಲ ಗಂಡು ಹಾಗೂ ಹೆಣ್ಣು ತಳಿಗಳ ಸಂಕರದಿಂದ ಉತ್ಪಾದಿಸಲಾಗುತ್ತದೆ. ಇದರಿಂದ ಉತ್ಪಾದಿಸಿದ ಹೈಬ್ರಿಡ್ ಬೀಜದಲ್ಲಿ ಮಿಶ್ರಗುಣಗಳು ಇರುವುದರಿಂದ ಅವು ಹೆಚ್ಚಿನ ಚೈತನ್ಯದಿಂದ ಉತ್ತಮ ಬೆಳೆ ಮತ್ತು ಇಳುವರಿ ಕೊಡುತ್ತವೆ. ಒಮ್ಮೆ ಬೆಳೆದ ಹೈಬ್ರಿಡ್ ಬೆಳೆಯ ಕಾಳನ್ನು ಬೀಜವಾಗಿ ಉಪಯೋಗಿಸಿದರೆ ಅದರಲ್ಲಿರುವ ಮಿಶ್ರಗುಣಗಳು ಬೇರೆಬೇರೆಯಾಗಿ, ಗಿಡದ ಎತ್ತರದಲ್ಲಿ, ಕಾಳಿನ ಗಾತ್ರದಲ್ಲಿ, ಕಟಾವಿನ ಅವಧಿಯಲ್ಲಿ ಹಾಗೂ ಇತರ ಗುಣಗಳಲ್ಲಿ ಗಿಡದಿಂದ ಗಿಡಕ್ಕೆ ವ್ಯತ್ಯಾಸವುಂಟಾಗಿ ಇಳುವರಿ ತುಂಬಾ ಕಡಿಮೆಯಾಗುತ್ತದೆ. ದುಬಾರಿಯಾದ ಹೈಬ್ರಿಡ್ ತಳಿಯ ಬೀಜೋತ್ಪಾದನೆಗೂ ಸಾಕಷ್ಟು ಪ್ರದೇಶ ಬೇಕಾಗುವುದರಿಂದ ಇದನ್ನೂ ಕೂಡ ತರಬೇತಿ ಹೊಂದಿದ ರೈತರ ಮೂಲಕವೇ ಮಾಡಲಾಗುತ್ತದೆ.

ಕರ್ನಾಟಕದಲ್ಲಿ ಮೊಟ್ಟ ಮೊದಲ ಬಾರಿಗೆ ಮಂಡ್ಯದ ವಿಶ್ವೇಶ್ವರಯ್ಯ ನಾಲಾ ಕ್ಷೇತ್ರ (ವಿ.ಸಿ.ಫಾರಂ), ಬತ್ತದ ತಳಿಗಳ ಸಂಶೋಧನಾ ಕೇಂದ್ರದಲ್ಲಿ ಸಂಶೋಧನೆಯನ್ನು ಕೈಗೊಳ್ಳಲಾಯಿತು. ಈ ಕೇಂದ್ರದ ಸಂಶೋಧನೆಯ ಫಲವಾಗಿ ಕರ್ನಾಟಕ ಹೈಬ್ರಿಡ್ ಬತ್ತ ೧(ಕೆ.ಆರ್.ಹೆಚ್೧) ತಯಾರು ಮಾಡಲಾಗಿದೆ. ಇದೊಂದು ಮಧ್ಯಮ ಎತ್ತರದ ತಳಿಯಾಗಿದ್ದು ೮೫ರಿಂದ ೯೦ ಸೆಂ.ಮೀ.ನಷ್ಟು ಎತ್ತರ ಬೆಳೆಯುತ್ತದೆ. ಈ ತಳಿಯು ೧೨೦ ರಿಂದ ೧೨೫ ದಿವಸಗಳಲ್ಲಿ ಕೊಯಿಲಿಗೆ ಬರುತ್ತದೆ. ಇದರ ರೋಗ ನಿರೋಧಕತೆ ಜಯ ಬತ್ತದ ತಳಿಯಷ್ಟೆ ಇರುತ್ತದೆ. ಈ ಹೈಬ್ರಿಡ್ ತಳಿ ಸರಾಸರಿ ಹೆಕ್ಟೇರ್‌ಗೆ ೬.೧೫ ಟನ್ ಇಳುವರಿಕೊಟ್ಟರೆ ಮಂಗಳ ರಾಶಿ ತಳಿಗಳು ಹೆಕ್ಟೇರಿಗೆ ೪.೩೬ ಟನ್ ಇಳುವರಿ ಮಾತ್ರ ಕೊಟ್ಟಿವೆ ಎಂದು ಸಂಶೋಧನೆ ತಿಳಿಸುತ್ತದೆ. ಕರ್ನಾಟಕ ಹೈಬ್ರಿಡ್ ಬತ್ತ ೨(ಕೆಆರ್‌ಹೆಚ್.೨) ಎಂಬ ಇನ್ನೊಂದು ತಳಿಯನ್ನು ಕರ್ನಾಟಕದ ನೀರಾವರಿ ಪ್ರದೇಶಕ್ಕೆ ೧೯೯೬ ರಲ್ಲಿ ಬಿಡುಗಡೆ ಮಾಡಲಾಯಿತು.ಈ ತಳಿಯು ೧೩೦ ರಿಂದ ೧೩೫ ದಿವಸಗಳಲ್ಲಿ ಕೊಯ್ಲಿಗೆ ಬರುತ್ತದೆ. ಈ ತಳಿಯ ಪೈರು ಎತ್ತರವಾಗಿದ್ದು, ೧೦೦ ರಿಂದ ೧೦೫ ಸೆಂ.ಮೀ. ಎತ್ತರಕ್ಕೆ ಬೆಳೆಯುತ್ತದೆ. ಈ ತಳಿ ತಕ್ಕಮಟ್ಟಿಗೆ ಬೆಂಕಿ ರೋಗ ನಿರೋಧಕತೆಯನ್ನೂ ಹೊಂದಿದೆ.ಇದರ ಕಾಳು ಉದ್ದ ಹಾಗೂ ಗಾತ್ರದಲ್ಲಿ ಸಣ್ಣದಾಗಿರುತ್ತದೆ.

**ಜೋಳ:** ಮಳೆಯಾಶ್ರಿತ ಕೃಷಿಯ ಆಹಾರಧಾನ್ಯಗಳಲ್ಲಿ ಒಂದಾದ ಜೋಳವನ್ನು ಜಿಲ್ಲೆಯ ಕೆಲವು ತಾಲೂಕುಗಳಲ್ಲಿ ಬೆಳೆಯಲಾಗುತ್ತಿದೆ. ಜೋಳಕ್ಕೆ ಬರಗಾಲವನ್ನು ತಡೆದುಕೊಳ್ಳುವ ಸಾಮರ್ಥ್ಯವಿರುವುದರಿಂದ ಮಳೆಯಾಶ್ರಿತ ಮತ್ತು ಕಡಿಮೆ ಮಳೆಯಾಗುವ ಪ್ರದೇಶದಲ್ಲಿ ಬೆಳೆಯುವುದು ಬಹಳ ಸೂಕ್ತ. ಬೇರೆ ಬೆಳೆಗಳಿಗೆ ಹೋಲಿಸಿದಲ್ಲಿ ಜೋಳವು ತ್ವರಿತವಾಗಿ ಬೆಳೆಯುತ್ತದೆ ಮತ್ತು ಹೆಚ್ಚಿನ ಮೇವನ್ನು ನೀಡುವ ಬೆಳೆಯಾಗಿದೆ. ವಾರ್ಷಿಕ ಮಳೆ ೧೦ ರಿಂದ ೧೫ ಇಂಚುಗಳಿದ್ದಲ್ಲಿ ಜೋಳವನ್ನು ಬೆಳೆಯಬಹುದು. ಕೆಂಪು, ಗೋಡು ಮಿಶ್ರಿತ ಕೆಂಪು ಮಣ್ಣು ಹಾಗೂ ತೆಳು ಕೆಂಪು ಮಣ್ಣಿನಲ್ಲಿ ಜೋಳವನ್ನು ಬೆಳೆಯಬಹುದು. ಕಪ್ಪು ಅಥವಾ ಜಿಗುಟು ಗೋಡು ಮಣ್ಣಿನಲ್ಲಿ ಹೆಚ್ಚು ಇಳುವರಿಯನ್ನು ನೀಡುತ್ತದೆ. ತುಮಕೂರು ಜಿಲ್ಲೆಯಲ್ಲಿ ಮುಂಗಾರು ಬೆಳೆಯಾಗಿ ಜೋಳವನ್ನು ಬೆಳೆಯಲಾಗುತ್ತದೆ. ಮೇ, ಜೂನ್ ಅಥವಾ ಜುಲೈನಲ್ಲಿ ಬಿತ್ತನೆ ಮಾಡಿ ಸೆಪ್ಟೆಂಬರ್, ಅಕ್ಟೋಬರ್ ಅಥವಾ ನವೆಂಬರ್ ತಿಂಗಳಲ್ಲಿ ಕೊಯ್ಲು ಮಾಡಲಾಗುತ್ತದೆ. ಬೀಜ ಮತ್ತು ಗೊಬ್ಬರ ಬಿತ್ತುವ ಕೂರಿಗೆಯನ್ನು ಬಳಸಿ ಸಾಲುಗಳಲ್ಲಿ ಬೀಜ ಮತ್ತು ಗೊಬ್ಬರವನ್ನು ಬಿತ್ತಲಾಗುತ್ತದೆ. ಒಂದು ಎಕರೆಗೆ ನಾಲ್ಕರಿಂದ ಐದು ಕೆ.ಜಿ ಜೋಳವನ್ನು ಬಿತ್ತನೆಗೆ ಬಳಸಲಾಗುತ್ತದೆ. ೨೦೧೦–೧೧ನೇ ಸಾಲಿನಲ್ಲಿ ಒಟ್ಟು ಬಿತ್ತನೆಯಾದ ೪೦೦ ಹೆ. ಪ್ರದೇಶದಲ್ಲಿ ತುರುವೇಕೆರೆ, ಪಾವಗಡ ಮತ್ತು ತಿಪಟೂರು ತಾಲೂಕುಗಳಲ್ಲಿ ಹೆಚ್ಚಿನ ಪ್ರದೇಶದಲ್ಲಿ ಬಿತ್ತನೆ ಮಾಡಲಾಗಿತ್ತು (೨೪೦ ಹೆ). ಹೈಬ್ರಿಡ್ ಜೋಳವನ್ನು ನೀರಾವರಿ ಪ್ರದೇಶದಲ್ಲಿ ಬೆಳೆಯುವ ವಾಡಿಕೆ ಇದೆ. ಸಿ.ಎಸ್.ಹೆಚ್–೧ ಎಂಬ ತಳಿಯನ್ನು ಹೆಚ್ಚಾಗಿ ಬೆಳೆಯಲಾಗುತ್ತದೆ. ಮುಂಗಾರು ಮತ್ತು ಬೇಸಿಗೆಯಲ್ಲಿ ಈ ಬೆಳೆಯನ್ನು ಬೆಳೆಯಲಾಗುತ್ತದೆ. ರಾಸಾಯನಿಕ ಗೊಬ್ಬರವನ್ನು ಬಳಸಿ ಹೆಚ್ಚಿನ ಇಳುವರಿಯನ್ನು ಪಡೆಯಬಹುದು. ನೀರಾವರಿ ಆಶ್ರಯದಲ್ಲಿ ಜೋಳವನ್ನು ಸಾಲುಬಿತ್ತನೆ ಮಾಡಿ ಅಂತರ್ಬೇಸಾಯ ಮಾಡಿದಲ್ಲಿ ಎಕರೆಗೆ ೨೫–೩೦ ಕ್ವಿಂಟಾಲ್ ಇಳುವರಿಯನ್ನು ಪಡೆಯಬಹುದು.

**ಹೈಬ್ರಿಡ್ ಮುಸುಕಿನ ಜೋಳ:** ಜಿಲ್ಲೆಯಲ್ಲಿ ಬತ್ತದ ನಂತರ ಮುಸುಕಿನ ಜೋಳವನ್ನು ಹೆಚ್ಚಾಗಿ ಬೆಳೆಯಲಾಗುತ್ತಿದೆ. ವಿಸ್ತೀರ್ಣದಲ್ಲಿ (೨೦೧೦-೧೧) ಮಧುಗಿರಿ ಮತ್ತು ಕೊರಟಗೆರೆ ತಾಲೂಕುಗಳು ಕ್ರಮವಾಗಿ ಮೊದಲ ಮತ್ತು ಎರಡನೆಯ ಸ್ಥಾನದಲ್ಲಿವೆ. ಮರಳು ಮಿಶ್ರಿತ ಕೆಂಪು ಮಣ್ಣು ಮತ್ತು ಮರಳುಮಿಶ್ರಿತ ಕಪ್ಪು ಮಣ್ಣು ಈ ಬೆಳೆಗೆ ಸೂಕ್ತ. ಕಾಂಪೋಸಿಟ್ ಎನ್.ಎ.ಸಿ-೬೦೦೪, ಕಾಂಪೋಸಿಟ್ ಎನ್.ಎ.ಸಿ-೬೦೦೨ ಮತ್ತು ಹೈಬ್ರಿಡ್-ನಿತ್ಯಶ್ರೀ, ಎಸ್.ಎ.ಹೆಚ್-೨೦೪೯ ತಳಿಗಳನ್ನು ಬೆಳೆಯಲಾಗುತ್ತಿದೆ. ಈ ತಳಿಗಳ ಗುಣಲಕ್ಷಣಗಳು ಒಂದು ಹೆಕ್ಟೇರ್ ಪ್ರದೇಶದಲ್ಲಿ ಬೆಳೆಯಲು ಬೇಕಾಗುವ ವಿವಿಧ ಪರಿಕರಗಳು, ಇಳುವರಿ ಇತ್ಯಾದಿ ಮಾಹಿತಿಯನ್ನು ಮುಂದಿನ ಕೋಷ್ಟಕದಲ್ಲಿ ನೀಡಲಾಗಿದೆ.

**ಕೋಷ್ಟಕ ೪.೧೦: ತಳಿಗಳ ವಿವರಗಳು**

| ತಳಿಯ ಹೆಸರು | ಅವಧಿ (ದಿನಗಳು) | ಬಿತ್ತನೆ ಕಾಲ | ಪರಿಕರಗಳು | | | ಇಳುವರಿ (ಕ್ವಿ/ಹೆ) |
|---|---|---|---|---|---|---|
| | | | ಬಿತ್ತನೆ ಬೀಜ | ರಸಗೊಬ್ಬರ (ಕೆ.ಜಿ) | ಕೊಟ್ಟಿಗೆ ಗೊಬ್ಬರ | |
| ಕಾಂಪೋಸಿಟ್ ಎನ್.ಎ.ಸಿ. ೬೦೦೪ | ೧೨೦ | ಮೇ-ಜುಲೈ ಕೊನೆಯವರೆಗೆ | ೧೫ | ೧೦೦:೫೦:೨೫ ೧೦ | ೩ | ೩೦-೩೭ |
| ಕಾಂಪೋಸಿಟ್ ಎನ್.ಎ.ಸಿ. ೬೦೦೨ | ೯೦ | ಮೇ-ಜುಲೈ ಕೊನೆಯವರೆಗೆ | ೧೫ | ೧೦೦:೫೦:೨೫ ೧೦ | ೩ | ೩೦-೩೭ |
| ಹೈಬ್ರಿಡ್-ನಿತ್ಯಶ್ರೀ,ಎಸ್.ಎ.ಹೆಚ್-೨೦೪೯ | ೧೧೦-೧೨೦ | ಮೇ-ಜುಲೈ ಕೊನೆಯವರೆಗೆ | ೧೫ | ೧೦೦:೫೦:೨೫ ೧೦ | ೩ | ೮೦-೮೫ |

**ಮೂಲ: ಜಿಲ್ಲಾ ಕೃಷಿ ನಿಗಮ, ತುಮಕೂರು**

**ತೊಗರಿ:** ತೊಗರಿ ಪ್ರೋಟೀನ್ ಮೂಲದ ದ್ವಿದಳ ಧಾನ್ಯವಾಗಿದೆ. ಜಿಲ್ಲೆಯ ಪ್ರತಿ ತಾಲೂಕಿನಲ್ಲಿ ಈ ಬೆಳೆಯನ್ನು ಬೆಳೆಯಲಾಗುತ್ತಿದೆ. ಶಿರಾ ಮತ್ತು ಪಾವಗಡ ಪ್ರದೇಶಗಳಲ್ಲಿ ಹೆಚ್ಚಿನ ವಿಸ್ತೀರ್ಣದಲ್ಲಿ ಹಾಗೂ ಕುಣಿಗಲ್‌ನಲ್ಲಿ ಕಡಿಮೆ ಪ್ರದೇಶದಲ್ಲಿ ಬೆಳೆಯುವುದನ್ನು ಕಾಣಬಹುದು. ತೊಗರಿ ಬೆಳೆಯನ್ನು ಮಿಶ್ರ ಬೆಳೆಯಾಗಿ ರಾಗಿ, ಜೋಳ ಅಥವಾ ಸಜ್ಜೆಯ ಸಾಲುಗಳಲ್ಲಿ ಬಿತ್ತನೆ ಮಾಡುವ ಪದ್ಧತಿ ಇದೆ. ಕೆಲವು ಬಾರಿ ಪೂರ್ಣ ಬೆಳೆಯಾಗಿ ಬೆಳೆಯುವುದನ್ನು ಕಾಣಬಹುದು. ಈ ಬೆಳೆಯ ತಳಿಗಳು, ತಳಿಗಳ ಗುಣ-ಲಕ್ಷಣಗಳು, ಒಂದು ಹೆಕ್ಟೇರ್ ಪ್ರದೇಶದ ಬೇಸಾಯಕ್ಕೆ ಬೇಕಾಗುವ ಪರಿಕರಗಳು ಇತ್ಯಾದಿ ಮಾಹಿತಿಯನ್ನು ಮುಂದಿನ ಕೋಷ್ಟಕದಲ್ಲಿ ನೀಡಲಾಗಿದೆ.

**ಕೋಷ್ಟಕ ೪.೧೧: ತೊಗರಿ ಬೆಳೆಯ ತಳಿಗಳ ಗುಣಲಕ್ಷಣಗಳು**

| ಕ್ರ.ಸಂ. | ತಳಿಯ ಹೆಸರು | ಅವಧಿ (ದಿನಗಳು) | ಬಿತ್ತನೆ ಕಾಲ | ಇಳುವರಿ |
|---|---|---|---|---|
| ೧ | ಟಿ.ಟಿ.ಬಿ.-೭ | ೧೫೦-೨೦೦ | ಮೇ-ಜುಲೈ ಕೊನೆಯವರೆಗೆ | ಮಿಶ್ರಬೆಳೆ-೫-೭ಕ್ವಿಂಟಾಲ್/ಹೆ<br>ಪೂರ್ಣಬೆಳೆ-೧೨೪-೧೫ ಕ್ವಿಂಟಾಲ್/ಹೆ |
| ೨ | ಬಿ.ಆರ್.ಜಿ-೧ | ೧೭೦-೧೯೦ | ಮೇ-ಜುಲೈ ಕೊನೆಯವರೆಗೆ | |
| ೩ | ಬಿ.ಆರ್.ಜಿ-೨ | ೧೫೦-೧೭೦ | ಮೇ-ಜುಲೈ ಕೊನೆಯವರೆಗೆ | |

**ಮೂಲ: ಜಿಲ್ಲಾ ಕೃಷಿ ನಿಗಮ, ತುಮಕೂರು**

**ಹೆಕ್ಟೇರ್‌ಗೆ ಬೇಕಾಗುವ ಪರಿಕರಗಳು:** ಅ) ಬಿತ್ತನೆ ಬೀಜ -ಮಿಶ್ರ ಬೆಳೆಯಾದಲ್ಲಿ-೭.೫೦ (ಕೆ.ಜಿ); ಪೂರ್ಣ ಬೆಳೆಯಾದಲ್ಲಿ-೧೫.೦೦(ಕೆ.ಜಿ); ಆ) ರಸಗೊಬ್ಬರ-ಸಾರಜನಕ:ರಂಜಕ:ಪೊಟ್ಯಾಷ್ (ಕೆ.ಜಿ), ೨೫ : ೫೦: ೨೫ ; ಗಂಧಕ-೨೦,ಸತುವಿನ ಸಲ್ಫೇಟ್-೧೫; ಇ) ಕೊಟ್ಟಿಗೆ ಗೊಬ್ಬರ - ೭.೫೦ ಟನ್ ; ಈ) ಜೀವಾಣು ಗೊಬ್ಬರ-ರೈಜೋಬಿಯಂ ಜೀವಾಣು ೫೦೦ಗ್ರಾಂ ; ರಂಜಕ ಕರಗಿರುವ ಜೀವಾಣು -೫೦೦ ಗ್ರಾಂ

**ಸೂರ್ಯಕಾಂತಿ:** ಸೂರ್ಯಕಾಂತಿ ಬೆಳೆಯು ಎಣ್ಣೆಕಾಳು ಬೆಳೆಯಾಗಿದ್ದು, ತುರುವೇಕೆರೆ ಮತ್ತು ಕುಣಿಗಲ್ ತಾಲೂಕುಗಳನ್ನು ಹೊರತುಪಡಿಸಿ ಉಳಿದ ತಾಲೂಕುಗಳಲ್ಲಿ ಈ ಬೆಳೆಯನ್ನು ಬೆಳೆಯಲಾಗುತ್ತಿದೆ. ಶಿರಾ ಮತ್ತು ಪಾವಗಡ

ತಾಲೂಕುಗಳಲ್ಲಿ ಇದನ್ನು ಹೆಚ್ಚಾಗಿ ಬೆಳೆಯುತ್ತಾರೆ. ಮೂರೂ ಋತುಗಳಲ್ಲಿ ಇದನ್ನು ಬೆಳೆಯಬಹುದು. ಕೆ.ಬಿ.ಎಸ್.ಹೆಚ್–೧ ಮತ್ತು ಕೆ.ಬಿ.ಎಸ್.ಹೆಚ್–೪೪ ಎಂಬ ತಳಿಗಳ ಕೃಷಿಯನ್ನು ಕಾಣಬಹುದು. ತಳಿಗಳ ಗುಣ–ಲಕ್ಷಣಗಳು, ಬೇಸಾಯಕ್ಕೆ ಬೇಕಾಗುವ ಪರಿಕರಗಳು, ಇಳುವರಿ ಇತ್ಯಾದಿ ಮಾಹಿತಿಯನ್ನು ಮುಂದಿನ ಕೋಷ್ಟಕದಲ್ಲಿ ನೀಡಲಾಗಿದೆ.

**ಕೋಷ್ಟಕ: ೪.೧೨: ಸೂರ್ಯಕಾಂತಿ ಬೆಳೆಯ ತಳಿಗಳ ವಿವರಗಳು**

| ಕ್ರ.ಸಂ. | ತಳಿಯ ಹೆಸರು | ಅವಧಿ (ದಿನಗಳು) | ಬಿತ್ತನೆ ಕಾಲ | | |
|---|---|---|---|---|---|
| | | | ಮುಂಗಾರು | ಹಿಂಗಾರು | ಬೇಸಿಗೆ |
| ೧ | ಕೆ.ಬಿ.ಎಸ್.ಹೆಚ್–೧ | ೯೦–೯೫ | ಜೂನ್–ಜುಲೈ | ಸೆಪ್ಟೆಂಬರ್–ಅಕ್ಟೋಬರ್ | ಡಿಸೆಂಬರ್–ಜನವರಿ |
| ೧ | ಕೆ.ಬಿ.ಎಸ್.ಹೆಚ್–೧ | ೯೦–೯೫ | ಜೂನ್–ಜುಲೈ | ಸೆಪ್ಟೆಂಬರ್–ಅಕ್ಟೋಬರ್ | ಡಿಸೆಂಬರ್–ಜನವರಿ |
| ೨ | ಕೆ.ಬಿ.ಎಸ್.ಹೆಚ್–೪೪ | ೯೦–೯೫ | ಜೂನ್–ಜುಲೈ | ಸೆಪ್ಟೆಂಬರ್–ಅಕ್ಟೋಬರ್ | ಡಿಸೆಂಬರ್–ಜನವರಿ |
| ೨ | ಕೆ.ಬಿ.ಎಸ್.ಹೆಚ್–೪೪ | ೯೦–೯೫ | ಜೂನ್–ಜುಲೈ | ಸೆಪ್ಟೆಂಬರ್–ಅಕ್ಟೋಬರ್ | ಡಿಸೆಂಬರ್–ಜನವರಿ |

**ಹೆಕ್ಟೇರ್‌ಗೆ ಬೇಕಾಗುವ ಪರಿಕರಗಳು:** ಅ) ಬಿತ್ತನೆ ಬೀಜ ಐದು ಕೆ.ಜಿ; ಆ) ರಸಗೊಬ್ಬರ (ಕೆ.ಜಿ); ನೀರಾವರಿ–ಖುಷ್ಕಿ ; ಸಾರಜನಕ: ೬೨.೫– ೩೭.೫; ರಂಜಕ: ೭೫–೫; ಪೊಟ್ಯಾಷ್: ೬೨.೫–೩೭.೫; ಸತುವಿನ ಸಲ್ಫೇಟ್: ೧೦; ಇ) ಇಳುವರಿ (ಕ್ವಿಂ/ಹೆ): ೨೫–೩೦–೧೫.

**ನೆಲಗಡಲೆ (ಶೇಂಗಾ):** ಜಿಲ್ಲೆಯ ಎಲ್ಲಾ ತಾಲೂಕುಗಳಲ್ಲಿ ಶೇಂಗಾ ಬೆಳೆಯಲಾಗುತ್ತದೆ. ಶಿರಾ, ಪಾವಗಡ ಮತ್ತು ಮಧುಗಿರಿಯಲ್ಲಿ ಹೆಚ್ಚಾಗಿ ಕಾಣಬಹುದು. ೨೦೧೦–೧೧ನೇ ಸಾಲಿನಲ್ಲಿ ಒಟ್ಟು ಬಿತ್ತನೆಯಾದ ೧,೨೯,೧೧೭ ಹೆ. ಜಮೀನಿನಲ್ಲಿ ಶಿರಾ, ಪಾವಗಡ ಮತ್ತು ಮಧುಗಿರಿಯಲ್ಲಿ ಒಟ್ಟು ೧,೨೦,೧೫೬ ಹೆ. ಜಮೀನಿನಲ್ಲಿ ಶೇಂಗಾ ಬೆಳೆಯಲಾಗಿದೆ. ಮಳೆಯಾಶ್ರಿತ ಬೆಳೆಯಾಗಿ ಶೇಂಗಾ ಬೆಳೆಯನ್ನು ಬೆಳೆಯಲಾಗುತ್ತಿದೆ. ಉತ್ತಮ ಪೋಷಕಾಂಶವುಳ್ಳ ಮಣ್ಣಿನಲ್ಲಿ ಹೆಚ್ಚಿನ ಇಳುವರಿಯನ್ನು ನಿರೀಕ್ಷಿಸಬಹುದು. ಬಿತ್ತನೆ ಕಾಲವು ಸಾಮಾನ್ಯವಾಗಿ ಮೇ ತಿಂಗಳಲ್ಲಿ ಪ್ರಾರಂಭವಾಗಿ ಜೂನ್ ಅಥವಾ ಜುಲೈ ತಿಂಗಳವರೆಗೆ ಮುಂದುವರೆಯುವುದು. ಬಿತ್ತನೆ ಕಾಲಕ್ಕೆ ಅನುಗುಣವಾಗಿ ಆಗಸ್ಟ್, ಸೆಪ್ಟೆಂಬರ್ ಅಥವಾ ಅಕ್ಟೋಬರ್ ತಿಂಗಳಲ್ಲಿ ಬೆಳೆಯನ್ನು ಕಟಾವು ಮಾಡಬಹುದು. ಗಿಡವು ಹೂಬಿಡುವ ಮುನ್ನ ಮೂರು ಅಥವಾ ನಾಲ್ಕು ಬಾರಿ ರೈತರು ಅಂತರ ಬೇಸಾಯ ಕೈಗೊಳ್ಳುತ್ತಾರೆ. ಮೂರರಿಂದ ಮೂರೂವರೆ ತಿಂಗಳಲ್ಲಿ ಬೆಳೆಯು ಕಟಾವಿಗೆ ಬರುತ್ತದೆ. ಎಲೆಗಳು ಹಳದಿ ಬಣ್ಣಕ್ಕೆ ತಿರುಗಿ ಉದುರಲು ಪ್ರಾರಂಭವಾದಾಗ ಬೆಳೆಯು ಕಟಾವಿಗೆ ಬಂದಿರುತ್ತದೆ. ಮಳೆಯಾಶ್ರಿತ ಪ್ರದೇಶದಲ್ಲಿ ಹೆಕ್ಟೇರ್‌ಗೆ ಐದರಿಂದ ಆರು ಕ್ವಿಂಟಾಲ್ ಮತ್ತು ನೀರಾವರಿ ಸಂದರ್ಭದಲ್ಲಿ ಒಂಬತ್ತರಿಂದ ಹತ್ತು ಕ್ವಿಂಟಾಲ್ ಉತ್ಪನ್ನವನ್ನು ನಿರೀಕ್ಷಿಸಬಹುದು. ಟಿ.ಎಂ.ವಿ–೨, ಜೆ.ಎಲ್–೨೪ ಮತ್ತು ಕೆ–೧೩೪ ಮುಂತಾದ ತಳಿಗಳನ್ನು ಬೆಳೆಯುತ್ತಾರೆ.

ಇತರೆ ತೃಣ ಧಾನ್ಯಗಳಾದ ಸಜ್ಜೆ, ನವಣೆ, ಹಾರಕ ಇತ್ಯಾದಿ ಬೆಳೆಗಳನ್ನು ಅಲ್ಪಪ್ರಮಾಣದಲ್ಲಿ ಬೆಳೆಯುವುದು ಪ್ರಚಲಿತದಲ್ಲಿದೆ. ದ್ವಿದಳ ಧಾನ್ಯಗಳಲ್ಲಿ ಹುರುಳಿ, ಉದ್ದು,ಹೆಸರು, ಅವರೆ, ಅಲಸಂದೆ, ಕಡಲೆ ಇತ್ಯಾದಿ ಬೆಳೆಗಳನ್ನು ಸಹಾ ಬೆಳೆಯಲಾಗುತ್ತದೆ. ಎಣ್ಣೆ ಕಾಳು ಬೆಳೆಗಳ ಪೈಕಿ ಹರಳು, ಎಳ್ಳು ಮತ್ತು ಹುಚ್ಚೆಳ್ಳು ಬೆಳೆಗಳನ್ನು ಅವಶ್ಯಕತೆ, ಮಳೆ ಪ್ರಮಾಣ, ಮಣ್ಣಿನ ಸತ್ವ ಇತ್ಯಾದಿಗಳ ಅನುಸಾರ ಬೆಳೆಯಲಾಗುವುದು. ವಾಣಿಜ್ಯ ಬೆಳೆಗಳ ವಿಭಾಗದಲ್ಲಿ ಹತ್ತಿ ಮತ್ತು ಕಬ್ಬನ್ನು ನೀರಾವರಿ ಹಾಗೂ ಪರಿಕರಗಳ ಲಭ್ಯತೆಗೆ ಅನುಗುಣವಾಗಿ ಜಿಲ್ಲೆಯಲ್ಲಿ ಬೆಳೆಯುವುದನ್ನು ಕಾಣಬಹುದು.

## ಸಾವಯವ ಕೃಷಿ

ಸಾವಯವ ಕೃಷಿಯು ಒಂದು ಸಮಗ್ರ ಕೃಷಿ ಉತ್ಪಾದನೆಯ ನಿರ್ವಹಣಾ ಪದ್ಧತಿಯಾಗಿದ್ದು ಸ್ಥಳೀಯವಾಗಿ ಲಭ್ಯವಿರುವ ನೈಸರ್ಗಿಕ ಸಂಪನ್ಮೂಲಗಳನ್ನು ಬಳಸಿ ಮಣ್ಣಿನ ಫಲವತ್ತತೆಯನ್ನು ಕಾಪಾಡಿಕೊಂಡು ಬರುವುದು ಹಾಗೂ ಪರಿಸರ ಸ್ನೇಹಿ ಜೈವಿಕ ವಿಧಾನಗಳಿಂದ ಕೀಟ ಮತ್ತು ರೋಗಗಳ ನಿರ್ವಹಣೆ ಕೈಗೊಂಡು ಗುಣಮಟ್ಟದ ಆಹಾರ ಉತ್ಪಾದನೆ ಕೈಗೊಳ್ಳುವ ಸುಸ್ಥಿರ ಪದ್ಧತಿಯಾಗಿದೆ. ಸಾವಯವ ಕೃಷಿ ತತ್ವಗಳು: ೧) ನೈಸರ್ಗಿಕ ಮತ್ತು ಜೈವಿಕ ವಿಧಾನಗಳಿಂದ ಪ್ರಕೃತಿದತ್ತವಾದ ಭೂಮಿ, ನೀರು, ಬೆಳಕು, ಗಾಳಿ ಹಾಗೂ ಸಸ್ಯ ಸಂಪತ್ತನ್ನು ಸಂರಕ್ಷಿಸುವುದು, ಅಭಿವೃದ್ಧಿಪಡಿಸುವುದು

ಹಾಗೂ ಸಮರ್ಪಕ ರೀತಿಯಿಂದ ಬಳಸುವುದು. ೨) ನೈಸರ್ಗಿಕ ಸಂಪನ್ಮೂಲಗಳಿಂದ ಆಗುವ ಹಾನಿಯನ್ನು ಕೂಡ ಪೂರಕ ಕ್ರಿಯೆಗಳ ಮೂಲಕ ನಿಯಂತ್ರಿಸುವುದು, ೩) ಕೃಷಿ ಪರಿಸರದಲ್ಲಿ ಸಾವಯವ ಪದಾರ್ಥಗಳ ಬಳಕೆಯಿಂದ ಮಣ್ಣಿನ ಫಲವತ್ತತೆ ಹಾಗೂ ಉತ್ಪಾದಕತೆ ಹೆಚ್ಚಿಸುವುದು, ತನ್ಮೂಲಕ ಸ್ವಾಭಾವಿಕ ಕ್ರಿಯೆಗಳನ್ನು ತ್ವರಿತಗೊಳಿಸುವುದು, ೪) ನೈಸರ್ಗಿಕ ಹಾಗೂ ಜೈವಿಕ ವಿಧಾನಗಳಿಂದ ಕೀಟ ಹಾಗೂ ರೋಗಗಳ ನಿರ್ವಹಣೆ ಮಾಡಿ ಪರಿಸರದ ಪ್ರಯೋಜನ ಪಡೆಯುವುದು,೫) ಜೈವಿಕ ಕ್ರಿಯೆಯನ್ನು ಹೆಚ್ಚಿಸುವುದು ಮತ್ತು ೬) ಸ್ವಾವಲಂಬಿ ಸುಸ್ಥಿರ ಕೃಷಿ, ಸುಸ್ಥಿರ ಹಾಗೂ ಸಂರಕ್ಷಿತ ಪರಿಸರ, ಆರೋಗ್ಯಕರ ಹಾಗೂ ಪೌಷ್ಟಿಕ ಆಹಾರ, ಪ್ರಾಣಿಗಳ ಕ್ಷೇಮ ಮತ್ತು ಸಾಮಾಜಿಕ ನ್ಯಾಯ ಸಾಧಿಸುವುದು ಆಗಿದೆ.

**ಸಾವಯವ ಕೃಷಿಯ ಮೂಲಗಳು:** ಸತತವಾಗಿ ಕೃಷಿ ವ್ಯವಸ್ಥೆಯಲ್ಲಿ ಉತ್ಪಾದಿಸಲಾಗುತ್ತಿರುವ ಸಸ್ಯಾವಶೇಷಗಳನ್ನು ಭೂಮಿಗೆ ಮರಳಿಸುವುದರಿಂದ ಅಥವಾ ಹೊದಿಕೆ ಮಾಡುವುದರಿಂದ ಮಣ್ಣಿನ ಫಲವತ್ತತೆ ಹಾಗೂ ಉತ್ಪಾದಕತೆಯನ್ನು ಕಾಪಾಡಿಕೊಂಡು ಬರುವುದು. ಸೆಣಬು, ಡಯಂಚ, ಚೊಗಚೆ, ಸೂಬಾಬುಲ್, ಗ್ಲಿರಿಸಿಡಿಯಾ, ಅಲಸಂದೆ, ಹೆಸರು, ಸೋಯಾ, ಅವರೆ, ಉದ್ದು, ಲೂಸರ್ನ್ ಇತ್ಯಾದಿ ಬೆಳೆಗಳನ್ನು ಕೃಷಿ ಬೆಳೆ ಪದ್ಧತಿಯಲ್ಲಿ ಅಳವಡಿಸಿ ಸಾವಯವ ಸಂಪನ್ಮೂಲಗಳ ಉತ್ಪಾದನೆ ಹೆಚ್ಚಿಸಿ ತನ್ಮೂಲಕ ಮಣ್ಣಿನ ಫಲವತ್ತತೆ ಹೆಚ್ಚಿಸುವುದು. ದ್ವಿದಳ ಬೆಳೆ ಆಧಾರಿತ ಹಾಗೂ ಇತರೆ ಲಾಭದಾಯಕ ಬೆಳೆ ಪದ್ಧತಿಗಳನ್ನು ಅನುಸರಿಸುವುದರಿಂದ ಭೂಮಿಯ ಫಲವತ್ತತೆಯನ್ನು ಕಾಪಾಡಿಕೊಂಡು ಬರುವುದು. ದ್ವಿದಳ ಜಾತಿಗೆ ಸೇರಿದ ಬೆಳೆಗಳಲ್ಲಿ ರೈಜೋಬಿಯಮ್, ಇತರೆ ಬೆಳೆಗಳಲ್ಲಿ ಅಜೋಸ್ಪೈರಿಲಂ, ಅಜಟೋಬ್ಯಾಕ್ಟರ್, ಸಾರಜನಕ ಸ್ಥಿರೀಕರಿಸಲು ಅಜೋಲಾ, ನೀಲಿ ಹಸಿರು ಪಾಚಿ, ಬತ್ತದಲ್ಲಿ ರಂಜಕ ಕರಗಿಸುವ ಮತ್ತು ಸಾವಯವ ಪದಾರ್ಥಗಳನ್ನು ಕಳುಹಿಸುವ ಸೂಕ್ಷ್ಮಾಣು ಜೀವಿಗಳನ್ನು ರಂಜಕ ಒದಗಿಸುವ ಮೈಕೋರೈಜಾ ಶಿಲೀಂದ್ರಗಳನ್ನು ಬಳಸುವುದರಿಂದ ಬೆಳೆ ಉತ್ಪಾದನೆ ಹಾಗೂ ಮಣ್ಣಿನ ಫಲವತ್ತತೆಯನ್ನು ಕಾಪಾಡಿಕೊಂಡು ಬರುವುದು. ಸಾವಯವ ಕೃಷಿಯಲ್ಲಿ ವಿವಿಧ ಬೆಳೆಗಳನ್ನು ಸಾವಯವ ಗೊಬ್ಬರಗಳಾದ ಕೊಟ್ಟಿಗೆ ಗೊಬ್ಬರ, ಕಾಂಪೋಸ್ಟ್, ಎರೆಹುಳು ಗೊಬ್ಬರ, ಹಸಿರು ಗೊಬ್ಬರಗಳು ಇತ್ಯಾದಿ ಪೋಷಕಾಂಶಗಳ ಪೂರೈಕೆ ಹಾಗೂ ಬೆಳವಣಿಗೆ ಹಂತಗಳಲ್ಲಿ ಉತ್ತಮ ಬೆಳವಣಿಗೆಗೆ ದ್ರವ ರೂಪದ ಗೊಬ್ಬರಗಳಾದ ಗಂಜಲ, ಎರೆಜಲ, ಜೀವ ರಸಸಾರ, ಜೀವಾಮೃತ, ಬೀಜಾಮೃತ, ಸಸ್ಯಾಮೃತ, ಅಮೃತಪಾನಿ, ಬಯೋಸಾಲ, ನಂದಿನಿ, ತೆಂಗಿನ ಎಳನೀರು, ಹಾಲು, ಮಜ್ಜಿಗೆ ಇತ್ಯಾದಿಗಳನ್ನು ಉಪಯೋಗಿಸುವುದರಿಂದ ಉತ್ತಮ ಇಳುವರಿಯನ್ನು ಪಡೆಯಬಹುದು. ದ್ರವರೂಪದ ಗೊಬ್ಬರಗಳನ್ನು ಪೋಷಕಾಂಶ ಪೂರೈಸಲು, ಬೆಳೆ ಪ್ರಚೋದಕದಂತೆ ಹಾಗೂ ಕೀಟ ರೋಗಗಳನ್ನು ನಿರ್ವಹಣೆ ಮಾಡಲು ಉಪಯೋಗಿಸಬಹುದು.

**ಸಾವಯವ ಕೃಷಿ ಕಾರ್ಯಕ್ರಮ:** ಸಾವಯವ ಕೃಷಿಯನ್ನು ಉತ್ತೇಜಿಸುತ್ತಿದ್ದು, ಸಾವಯವ ಕೃಷಿಗೆ ಪೂರಕವಾದ ಪರಿಕರಗಳನ್ನು ರೈತರಿಗೆ ರಿಯಾಯಿತಿ ದರದಲ್ಲಿ ನೀಡುತ್ತಿದ್ದು, ಮಾದರಿ ಸಾವಯವ ಸ್ಥಳಗಳನ್ನು ಸ್ಥಾಪಿಸಲಾಗುತ್ತಿದೆ. ಸಾವಯವ ಕೃಷಿಯನ್ನು ಇನ್ನೂ ಹೆಚ್ಚಿನ ಮಟ್ಟದಲ್ಲಿ ಪ್ರೋತ್ಸಾಹಿಸಲು ಅಮೃತಭೂಮಿ ಯೋಜನೆಯನ್ನು ಜಾ–ರಿಗೊಳಿಸಲಾಗಿದೆ.

**ಕೃಷಿ ಸಂಬಂಧಿತ ಇಲಾಖಾ ಕಾರ್ಯಕ್ರಮಗಳು:** ಕೃಷಿ ಇಲಾಖೆಯು ರಾಜ್ಯದ ಪ್ರಮುಖ ಅಭಿವೃದ್ಧಿ ಇಲಾಖೆಗಳಲ್ಲಿ ಒಂದಾಗಿದ್ದು, ರೈತರ ಸೇವೆಯಲ್ಲಿ ನಿರಂತರವಾಗಿ ತೊಡಗಿಸಿಕೊಂಡು ಬಂದಿದೆ. ವಿವಿಧ ಮೂಲಗಳಿಂದ ಹೊರಹೊಮ್ಮುವ ಕೃಷಿ ಸಂಶೋಧನಾ ಫಲಿತಾಂಶಗಳನ್ನು ಆಧುನಿಕ ತಂತ್ರಜ್ಞಾನವನ್ನು ರಾಜ್ಯದ ರೈತ ಬಾಂಧವರಿಗೆ ವರ್ಗಾಯಿಸುವ ಮೂಲಕ ಅವರು ತಮ್ಮ ಹಿಡುವಳಿಗಳಲ್ಲಿ ಆಧುನಿಕ ತಂತ್ರಜ್ಞಾನ ಬಳಸಿ ಹೆಚ್ಚು ಇಳುವರಿ ಪಡೆಯಲು ನೆರವಾಗುತ್ತಿದೆ. ಅಲ್ಲದೆ, ರೈತರ ಅಭ್ಯುದಯಕ್ಕಾಗಿ ಅನೇಕ ರೈತಪರ ಯೋಜನೆಗಳನ್ನು ಹಮ್ಮಿಕೊಂಡು ಹಲವಾರು ಸವಲತ್ತುಗಳನ್ನು ಒದಗಿಸಲಾಗುತ್ತಿದೆ.

**ಮಣ್ಣು ಆರೋಗ್ಯ ಕೇಂದ್ರ:** ಮಣ್ಣು ಮಾದರಿ ವಿಶ್ಲೇಷಣೆಯು ಒಂದು ವೈಜ್ಞಾನಿಕ ಪದ್ಧತಿಯಾಗಿದ್ದು, ಭೂ ಫಲವತ್ತತೆಯನ್ನು ಹಾಗೂ ಬೆಳೆಗಳಿಗೆ ದೊರೆಯುವ ಪೋಷಕಾಂಶಗಳನ್ನು ತಿಳಿಸಿ, ಅನವಶ್ಯಕವಾದ ಹೆಚ್ಚು ರಸಗೊಬ್ಬರಗಳ ಬಳಕೆಯನ್ನು ತಪ್ಪಿಸುತ್ತದೆ. ಅಲ್ಲದೇ ಸಮತೋಲನ ರಸಗೊಬ್ಬರಗಳನ್ನು ಬಳಸಿ ಅಧಿಕ ಉತ್ಪಾದನೆ ಪಡೆಯುವಲ್ಲಿ ಮಹತ್ವದ ಪಾತ್ರ ವಹಿಸುತ್ತಿದೆ. ಈ ಕೇಂದ್ರದಲ್ಲಿ ರೈತರು ಹಾಗೂ ಕೃಷಿ ವಿಸ್ತರಣಾ ಸಿಬ್ಬಂದಿ ಸಂಗ್ರಹಿಸಿದ ಮಣ್ಣು ಮಾದರಿಗಳನ್ನು ವಿಶ್ಲೇಷಿಸಿ ಸೂಕ್ತ ರಸಗೊಬ್ಬರಗಳ ಬಳಕೆಗೆ ಸಲಹೆ ನೀಡಲಾಗುತ್ತಿದೆ. ಸಂಚಾರಿ ಮಣ್ಣು ಆರೋಗ್ಯ ಕೇಂದ್ರಗಳು ರೈತರ

ಮಣ್ಣು ಮಾದರಿಗಳನ್ನು ಸ್ಥಳದಲ್ಲಿಯೇ ವಿಶ್ಲೇಷಿಸಿ, ಸೂಕ್ತ ಸಮತೋಲನ ರಸಗೊಬ್ಬರಗಳ ಶಿಫಾರಸ್ಸನ್ನು ನೀಡುತ್ತವೆ. ಜೊತೆಗೆ ರೈತರಿಂದ ಪಡೆದ ನೀರಿನ ಮಾದರಿಗಳನ್ನು ನೀರಾವರಿಗೆ ಯೋಗ್ಯವೇ ಎಂಬುದರ ಬಗ್ಗೆ ವಿಶ್ಲೇಷಿಸಿ ಅವಶ್ಯವಿದ್ದಲ್ಲಿ ಸೂಕ್ತ ಬಳಕೆಯ ಮಾಹಿತಿ ನೀಡಲಾಗುತ್ತಿದೆ. ಸುಣ್ಣ ಮತ್ತು ಜಿಪ್ಸಂ ಮಾದರಿಗಳನ್ನು ಸಹ ವಿಶ್ಲೇಷಿಸಲಾಗುತ್ತಿದೆ. ಪ್ರತಿ ವರ್ಷ ಸುಮಾರು ೩೦,೦೦೦ ಮಣ್ಣಿನ ಮಾದರಿಗಳನ್ನು ಪರೀಕ್ಷಿಸುವ ಸಾಮರ್ಥ್ಯವನ್ನು ಈ ಕೇಂದ್ರ ಹೊಂದಿದೆ.

ಈ ಪರೀಕ್ಷಾ ಕೇಂದ್ರದಲ್ಲಿ ಮಣ್ಣಿನ ಮಾದರಿಯಲ್ಲಿ ಪರೀಕ್ಷೆ ಮಾಡುವ ಅಂಶಗಳೆಂದರೆ ರಸಸಾರ (ಪಿ.ಎಚ್), ಸಾವಯವ ಇಂಗಾಲ, ರಂಜಕ, ಸಾರಜನಕ ಮತ್ತು ಪೊಟ್ಯಾಷ್, ಇದರ ಜೊತೆಗೆ ವಿದ್ಯುತ್ ವಹನತೆಯನ್ನು ಸಹ ಗೊತ್ತುಪಡಿಸುತ್ತದೆ. ಇದರಿಂದ ಆ ಮಣ್ಣಿನಲ್ಲಿರುವ ಚೌಳಿನ ಅಂಶ ತಿಳಿಯಲು ಸಹಾಯವಾಗುತ್ತದೆ. ಈ ಅಂಶಗಳನ್ನು ಆಧಾರವಾಗಿಟ್ಟುಕೊಂಡು ಅದರ ಜೊತೆಗೆ ಬೆಳೆ ಮಾದರಿಯನ್ನು ಹೋಲಿಸಿ ಆ ಮಣ್ಣಿನಲ್ಲಿ ಸೇರಿಸಬೇಕಾದ ಜಿಪ್ಸಂ, ಉಪ್ಪು ಅಥವಾ ಸುಣ್ಣದ ಅಂಶವನ್ನು ನಿರ್ಧರಿಸಲಾಗುತ್ತದೆ. ಇದರ ಜೊತೆಗೆ ಅಲ್ಲಿ ಬೆಳೆಯಬೇಕೆಂದಿರುವ ಪ್ರತಿ ಬೆಳೆಗೂ ಒದಗಿಸಬೇಕಾದ ಪೋಷಕಾಂಶಗಳನ್ನು ನಿರ್ಧರಿಸಲಾಗುವುದು. ಹೆಚ್ಚಾಗಿ ಚೌಳಿನ ಅಂಶವಿರುವ ಕಡೆ ಅದನ್ನು ಸರಿಪಡಿಸಲು ಸೂಕ್ತ ಕ್ರಮವನ್ನು ತಿಳಿಸಲಾಗುವುದು. ಮಣ್ಣಿನ ಪರೀಕ್ಷೆಯ ಗುಣಮಟ್ಟ ರಕ್ಷಣೆಗೆ ಸಂಬಂಧಪಟ್ಟ ಕಾಯಿದೆಯೊಂದು ಜಾರಿಯಲ್ಲಿದೆ. ೧೯೭೦–೭೧ರಲ್ಲಿ ಜಾರಿಗೆ ಬಂದ ಈ ಕಾಯಿದೆಯ ಪ್ರಕಾರ ಪ್ರತಿ ಮಣ್ಣಿನ ಮಾದರಿಯನ್ನು ಪರೀಕ್ಷೆ ಮಾಡಿದ ನಂತರ ಬರುವ ಫಲಿತಾಂಶಗಳನ್ನು ಒಂದು ನಿರ್ದಿಷ್ಟ ರೀತಿಯಲ್ಲಿಯೇ ಕೊಡಬೇಕೆಂದು ನಿಗದಿ ಮಾಡಲಾಗಿದೆ. ಇದರ ಉದ್ದೇಶಗಳು ಈ ರೀತಿ ಇವೆ: ೧)ಮಣ್ಣಿನ ಪರೀಕ್ಷೆಯ ಸಮಯದಲ್ಲಿ ಅನುಸರಿಸುವ ಕ್ರಮಗಳನ್ನು ನಿಯಂತ್ರಿಸುವುದು. ೨)ಪರೀಕ್ಷಾ ಕೇಂದ್ರಗಳು ಬಹಳ ದಕ್ಷತೆಯಿಂದ ಕೆಲಸಮಾಡಲು ಬೆಂಬಲ ನೀಡುವುದು, ೩) ಮಣ್ಣನ್ನು ಪರೀಕ್ಷೆ ಮಾಡಲು ಅನುಸರಿಸಬೇಕಾದ ಕ್ರಮಗಳ ಬಗ್ಗೆ ಪ್ರತೀ ವರ್ಷವೂ ತರಬೇತಿ ನೀಡುವುದು. ಪ್ರಸಕ್ತ ವರ್ಷದಿಂದ ಮಣ್ಣು ಪರೀಕ್ಷಾ ಫಲಿತಾಂಶಗಳನ್ನು ಗಣಕೀಕರಿಸಿ, ಮಣ್ಣು ಆರೋಗ್ಯ ಚೀಟಿಗಳಲ್ಲಿ ಮುದ್ರಿಸಿ ರೈತರಿಗೆ ವಿತರಿಸುವುದು ಹಾಗು ಮಣ್ಣು ಆರೋಗ್ಯ ಚೀಟಿ ಆಧಾರದ ಮೇಲೆ ಗ್ರಾಮವಾರು ಬೆಳೆ ಉತ್ಪಾದನಾ ಯೋಜನೆಯನ್ನು ರೂಪಿಸಿ, ಕ್ಷೇತ್ರಮಟ್ಟದಲ್ಲಿ ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸುವುದು.

**ಗುಣಮಟ್ಟದ ಬಿತ್ತನೆ ಬೀಜ ಸರಬರಾಜು ಕಾರ್ಯಕ್ರಮ:** ಪ್ರಮಾಣಿತ ಹಾಗೂ ಉತ್ತಮ ಗುಣಮಟ್ಟದ ಬಿತ್ತನೆ ಬೀಜಗಳನ್ನು ರಿಯಾಯಿತಿ ದರದಲ್ಲಿ ಸಕಾಲದಲ್ಲಿ ಒದಗಿಸಲಾಗುತ್ತಿದೆ. ಭೂಚೇತನ ಕಾರ್ಯಕ್ರಮ: ಖುಷ್ಕಿ ಪ್ರದೇಶದ ರೈತರ ಜೀವನ ಮಟ್ಟ ಉತ್ತಮಗೊಳಿಸಲು ಭೂಚೇತನ ಕಾರ್ಯಕ್ರಮವನ್ನು ಹಮ್ಮಿಕೊಂಡು ಖುಷ್ಕಿ ಬೇಸಾಯ ತಾಂತ್ರಿಕತೆಗಳ ಅಳವಡಿಕೆಯನ್ನು ಪ್ರೋತ್ಸಾಹಿಸಲಾಗುತ್ತಿದೆ. ಅಲ್ಲದೇ ತಾಂತ್ರಿಕತೆಗಳನ್ನು ಅಳವಡಿಸಿಕೊಳ್ಳಲು ಬೇಕಾಗುವಂತಹ ಪರಿಕರಗಳನ್ನು ಶೇ.೫೦ರ ರಿಯಾಯಿತಿ ದರದಲ್ಲಿ ರೈತರಿಗೆ ಒದಗಿಸಲಾಗುತ್ತಿದೆ.

**ಕೃಷಿ ಯಾಂತ್ರೀಕರಣ ಯೋಜನೆ:** ಕೃಷಿ ಕಾರ್ಮಿಕರ ಕೊರತೆಯನ್ನು ನೀಗಿಸಿ, ಕೃಷಿ ಚಟುವಟಿಕೆಗಳ ಶ್ರಮದಾಯಕ ದುಡಿಮೆಯನ್ನು ತಗ್ಗಿಸಲು ಈ ಯೋಜನೆಯಡಿ ಪವರ್ ಟಿಲ್ಲರ್, ಹೈಟೆಕ್ ಕೃಷಿ ಯಂತ್ರೋಪಕರಣಗಳು, ಡೀಸೆಲ್ ಪಂಪುಸೆಟ್ ಗಳು, ಟ್ರಾಕ್ಟರ್/ಟಿಲ್ಲರ್ ಚಾಲಿತ ಸಸ್ಯ ಸಂರಕ್ಷಣಾ ಉಪಕರಣಗಳು ಮತ್ತು ಕೃಷಿ ಸಂಸ್ಕರಣಾ ಘಟಕಗಳನ್ನು ರೈತರಿಗೆ ರಿಯಾಯಿತಿಯಲ್ಲಿ ಒದಗಿಸಲಾಗುತ್ತಿದೆ. ಲಘು ನೀರಾವರಿ ಯೋಜನೆ: ರೈತರು ಲಘು ನೀರಾವರಿ ಘಟಕಗಳನ್ನು ಅಳವಡಿಸಿಕೊಂಡು ನೀರಿನ ಮಿತ ಬಳಕೆ ಮಾಡುವಂತೆ ಪ್ರೋತ್ಸಾಹಿಸಲು ಈ ಯೋಜನೆಯಡಿ ತುಂತುರು/ಹನಿ ನೀರಾವರಿ ಘಟಕಗಳನ್ನು ರಿಯಾಯಿತಿ ದರದಲ್ಲಿ ವಿತರಿಸಲಾಗುತ್ತಿದೆ.

**ಕೃಷಿ ತಂತ್ರಜ್ಞಾನ ನಿರ್ವಹಣಾ ಸಂಸ್ಥೆ – ಆತ್ಮ ಯೋಜನೆ (ATMA– Agricultural Technology Management Agency)**: ಆತ್ಮ ಯೋಜನೆಯು ರೈತರ ಸರ್ವಾಂಗೀಣ ಮತ್ತು ಸುಸ್ಥಿರ ಕೃಷಿ ಅಭಿವೃದ್ಧಿಗಾಗಿ ಸ್ಥಾಪಿಸಲಾದ ವಿಕೇಂದ್ರಿತ ವ್ಯವಸ್ಥೆಯಾಗಿದ್ದು, ಕೃಷಿ ಮತ್ತು ಕೃಷಿ ಸಂಬಂಧಿತ ಇಲಾಖೆಗಳ, ಸರ್ಕಾರೇತರ ಸಂಸ್ಥೆಗಳ, ಸಂಶೋಧನಾ ಸಂಸ್ಥೆಗಳ ಮಧ್ಯೆ ಸಮನ್ವಯ ತರುವ ಮೂಲಕ ರೈತರಿಗೆ ಉತ್ತಮ ಗುಣಮಟ್ಟದ ವಿಸ್ತರಣಾ ಸೇವೆ ಹಾಗೂ ನೂತನ ತಂತ್ರಜ್ಞಾನವನ್ನು ಒದಗಿಸಲಾಗುತ್ತಿದೆ.

ಸಮಗ್ರ ಎಣ್ಣೆಕಾಳು, ಮುಸುಕಿನ ಜೋಳ, ತಾಳೆ ಬೆಳೆ ಅಭಿವೃದ್ಧಿ ಯೋಜನೆ (ಐಸೋಪಾಂ)**(Integrated Scheme of Oilseeds, Pulses and Maize – ISOPOM)**: ಎಣ್ಣೆಕಾಳು ಹಾಗೂ ಮುಸುಕಿನ ಜೋಳ

ಬೆಳೆಯ ವಿಸ್ತೀರ್ಣ, ಉತ್ಪಾದನೆ ಹಾಗೂ ಉತ್ಪಾದಕತೆಯನ್ನು ಹೆಚ್ಚಿಸುವ ಉದ್ದೇಶದಿಂದ ರೈತರಿಗೆ ಕೃಷಿ ಪರಿಕರಗಳು, ಸಾವಯವ ಗೊಬ್ಬರ ಮತ್ತು ಜೀವಾಣು ಗೊಬ್ಬರಗಳು, ಸಸ್ಯ ಸಂರಕ್ಷಣಾ ಔಷಧಿ ಹಾಗೂ ಉಪಕರಣ ಮುಂತಾದವುಗಳನ್ನು ರಿಯಾಯಿತಿ ದರದಲ್ಲಿ ನೀಡಲಾಗುತ್ತಿದೆ. ವಿವಿಧ ಯೋಜನೆಗಳಡಿಯಲ್ಲಿ ರೈತ ಮತ್ತು ರೈತ ಮಹಿಳೆಯರಿಗೆ ವಿತರಿಸಿದ ಉಪಕರಣಗಳ ಮಾಹಿತಿಯನ್ನು ಕೋಷ್ಟಕ ೪.೧೩ರಲ್ಲಿ ಒದಗಿಸಲಾಗಿದೆ.

**ಕೋಷ್ಟಕ ೪.೧೩: ೨೦೧೧-೧೨ನೇ ಸಾಲಿನಲ್ಲಿ ವಿತರಿಸಿದ ಕೃಷಿ ಉಪಕರಣಗಳು (ಸಂಖ್ಯೆ)**

| ತಾಲೂಕುಗಳು | ಟ್ರಾಕ್ಟರ್ | ಅಗೆಯುವ ಉಪಕರಣ | ಪಂಪ್ ಸೆಟ್ | ಸಿಂಪರಣೆ ಯಂತ್ರ | ಎತ್ತಿನ ಗಾಡಿ | ಸ್ಪ್ರೇಗಳು | ಸಾಗುವಳಿ ಯಂತ್ರಗಳು | ಮೇವು ಕತ್ತರಿಸುವ ಯಂತ್ರ | ಕಟಾವು ಮಾಡುವ ಯಂತ್ರ | ಬತ್ತನಾಟಿ ಮಾಡುವ ಯಂತ್ರ |
|---|---|---|---|---|---|---|---|---|---|---|
| ಚಿಕ್ಕ ನಾಯಕನಹಳ್ಳಿ | ೧೧೨ | ೪೧ | ೧೦ | ೨ | ೩೦೦ | ೦ | ೦ | ೦ | ೧ | ೧೬ |
| ಗುಬ್ಬಿ | ೧೬೭ | ೮೩ | ೮೬ | ೧೦ | ೦ | ೦ | ೨ | ೦ | ೭ | ೩೪ |
| ಕೊರಟಗೆರೆ | ೮೮ | ೨೩ | ೩೫ | ೧ | ೦ | ೦ | ೦ | ೦ | ೮ | ೫ |
| ಕುಣಿಗಲ್ | ೧೪೩ | ೬೨ | ೩೧ | ೨ | ೦ | ೦ | ೦ | ೦ | ೫ | ೩ |
| ಮಧುಗಿರಿ | ೧೩೬ | ೫೩ | ೪೪ | ೨೦ | ೨೦೦ | ೦ | ೧ | ೦ | ೬ | ೧೨ |
| ಪಾವಗಡ | ೧೮೨ | ೫೫ | ೭೫ | ೧೦ | ೪೦೦ | ೦ | ೦ | ೦ | ೯ | ೧೨ |
| ಶಿರಾ | ೯೯ | ೨೭ | ೫೮ | ೯ | ೪ | ೦ | ೦ | ೦ | ೨೪ | ೪ |
| ತಿಪಟೂರು | ೧೫೬ | ೩ | ೫೮ | ೧೪ | ೬೦೦ | ೦ | ೦ | ೦ | ೨ | ೩೫ |
| ತುಮಕೂರು | ೧೯೮ | ೬೨ | ೧೦೮ | ೩೨ | ೨೬೦ | ೦ | ೦ | ೦ | ೯ | ೩೯ |
| ತುರುವೇಕೆರೆ | ೧೬೨ | ೧೧೪ | ೪೯ | ೨೨ | ೨೦೦ | ೦ | ೦ | ೦ | ೧೫ | ೦ |
| ಜಿಲ್ಲಾ ಮೊತ್ತ | ೧,೪೪೩ | ೫೨೩ | ೫೫೪ | ೧೨೨ | ೧೯೬೪ | ೦ | ೩ | ೦ | ೮೬ | ೧೬೦ |

**ಮೂಲ: ತುಮಕೂರು ಜಿಲ್ಲೆಯ ಅಂಕಿ-ಅಂಶಗಳ ನೋಟ ೨೦೧೧-೧೨, ಜಿಲ್ಲಾ ಸಂಖ್ಯಾ ಸಂಗ್ರಹಣಾಧಿಕಾರಿಗಳ ಕಛೇರಿ, ತುಮಕೂರು.**

ರಾಷ್ಟ್ರೀಯ ಕೃಷಿ ವಿಕಾಸ ಯೋಜನೆ: ಕೃಷಿ ಮತ್ತು ಕೃಷಿ ಸಂಬಂಧಿತ ವಲಯದ ಬೆಳವಣಿಗೆಯನ್ನು ಸುಧಾರಿಸುವ ಉದ್ದೇಶದಿಂದ ಈ ಯೋಜನೆಯನ್ನು ಹಮ್ಮಿಕೊಳ್ಳಲಾಗಿದ್ದು, ಬಿತ್ತನೆ ಬೀಜ, ಹೈಟೆಕ್ ಕೃಷಿ ಯಂತ್ರೋಪಕರಣಗಳು, ಲಘು ಪೋಷಕಾಂಶಗಳು, ಸಸ್ಯ ಸಂರಕ್ಷಣಾ ಔಷಧಿ ಹಾಗೂ ಉಪಕರಣಗಳು ಮುಂತಾದವುಗಳನ್ನು ರಿಯಾಯಿತಿ ದರದಲ್ಲಿ ವಿತರಿಸಲಾಗುತ್ತಿದೆ.

ಪೌಷ್ಟಿಕಾಂಶ ಭದ್ರತೆಗಾಗಿ ಕಿರುಧಾನ್ಯಗಳ ಉತ್ತೇಜನ: ಜೋಳ, ರಾಗಿ, ಸಜ್ಜೆ, ನವಣೆ, ಸಾಮೆ ಇತ್ಯಾದಿ ತೃಣ ಧಾನ್ಯಗಳ ಉತ್ಪಾದಕತೆಯನ್ನು ಹೆಚ್ಚಿಸಲು ಹಾಗೂ ಅವುಗಳ ಬಳಕೆಯನ್ನು ಪ್ರಚುರ ಪಡಿಸುವ ನಿಟ್ಟಿನಲ್ಲಿ ರಾಷ್ಟ್ರೀಯ ಕೃಷಿ ವಿಕಾಸ ಯೋಜನೆಯಡಿ ಈ ಹೊಸ ಯೋಜನೆಯನ್ನು ಪ್ರಾರಂಭಿಸಲಾಗಿದೆ. ಕಿರುಧಾನ್ಯಗಳು ಎಂದರೆ ಚಿಕ್ಕದಾದ ಧಾನ್ಯಗಳು ಎಂದರ್ಥ. ಕಾಳುಗಳ ಗಾತ್ರ ಸಣ್ಣದಾಗಿರುವುದರಿಂದ ಇವುಗಳಿಗೆ ಈ ಹೆಸರು ಬಂದಿದೆ. ಆಕಾರದಲ್ಲಿ ಸಣ್ಣದಾದರೂ, ಪೌಷ್ಠಿಕತೆ ಮತ್ತು ರೋಗ ನಿರೋಧಕ ಶಕ್ತಿಯನ್ನು ನೀಡುವಲ್ಲಿ ತೃಣ ಧಾನ್ಯಗಳು ಪ್ರಮುಖವೆನಿಸಿವೆ. ಆಂಗ್ಲ ಭಾಷೆಯಲ್ಲಿ ಇದನ್ನು ಮಿಲೆಟ್ ಎಂದು ಕರೆಯುತ್ತಾರೆ. ಕಿರುಧಾನ್ಯಗಳು ಎಂತಹ ಬರಗಾಲದಲ್ಲೂ ಅಲ್ಪಸ್ವಲ್ಪವಾದರೂ ಇಳುವರಿ ನೀಡಿ ರೈತರಿಗೆ ಆಸರೆಯಾಗುತ್ತವೆ. ಸಾಧಾರಣ ಫಲವತ್ತತೆಯ ಮಣ್ಣಿನಲ್ಲಿಯೂ ಕಿರುಧಾನ್ಯಗಳನ್ನು ಬೆಳೆಯಬಹುದಾಗಿರುತ್ತದೆ. ಬೇಸಾಯದಲ್ಲಿ ಸಾಧಾರಣ ನಿರ್ವಹಣೆಯಲ್ಲಿಯೇ ಈ ಬೆಳೆಗಳನ್ನು ಬೆಳೆಯಬಹುದಾಗಿರುತ್ತದೆ. ರೋಗ ಕೀಟ ಬಾಧೆಗಳೂ ಕಡಿಮೆ. ಈ ಎಲ್ಲಾ ಕಾರಣದಿಂದ ಇದನ್ನು ರೈತರ ಬರಗಾಲದ ಮಿತ್ರ ಎಂದು ಕರೆಯಲಾಗುತ್ತದೆ.

ಕೇಂದ್ರ ಸರ್ಕಾರ ೨೦೧೧-೧೨ನೇ ಮುಂಗಾರಿನಿಂದ ರಾಷ್ಟ್ರೀಯ ಕೃಷಿ ವಿಕಾಸ ಯೋಜನೆ ಅಡಿಯಲ್ಲಿ ಪೌಷ್ಟಿಕ ಧಾನ್ಯಗಳಾದ ತೃಣಧಾನ್ಯಗಳನ್ನು ಅಭಿವೃದ್ಧಿಪಡಿಸಲು ವಿಶೇಷ ಕಾರ್ಯಕ್ರಮವನ್ನು ಹಮ್ಮಿಕೊಂಡಿದೆ. ಪೌಷ್ಟಿಕ ಆಹಾರ ಭದ್ರತೆಗಾಗಿ ಈ ತೃಣಧಾನ್ಯಗಳನ್ನು ಅಭಿವೃದ್ಧಿಪಡಿಸಿ, ಉತ್ಪಾದನೆಯನ್ನು ಹೆಚ್ಚಿಸುವುದೇ ಕಾರ್ಯಕ್ರಮದ ಮುಖ್ಯ

ಗುರಿಯಾಗಿದೆ. ತೃಣಧಾನ್ಯಗಳನ್ನು ಅಭಿವೃದ್ಧಿಪಡಿಸುವುದರ ಜೊತೆಗೆ ಅವುಗಳ ಸಂಸ್ಕರಣೆ ಮತ್ತು ಮೌಲ್ಯವರ್ಧಿತ ತಂತ್ರಜ್ಞಾನವನ್ನು ಅಳವಡಿಸಿಕೊಂಡು ಬಳಕೆದಾರರಿಗೆ ತೃಣಧಾನ್ಯಗಳ ಆಹಾರ ದೊರೆಯುವಂತೆ ಮಾಡುವುದೂ ಯೋಜನೆಯ ಉದ್ದೇಶವಾಗಿರುತ್ತದೆ. ಈ ಗುರಿ ಸಾಧಿಸಲು ಕ್ಷೇತ್ರ ಪ್ರಾತ್ಯಕ್ಷಿಕೆಗಳನ್ನು ಏರ್ಪಡಿಸಿ, ಸುಧಾರಿತ ಪದ್ಧತಿಯಿಂದ ಉತ್ಪಾದನೆಯನ್ನು ಹೆಚ್ಚಿಸುವ ಕಾರ್ಯಕ್ರಮ ಮತ್ತು ಕೊಯ್ಲಿನ ಅನಂತರದ ತಂತ್ರಜ್ಞಾನಗಳನ್ನು ಅಳವಡಿಸಲಾಗಿದೆ. ತೃಣಧಾನ್ಯಗಳಲ್ಲಿರುವ ಪೌಷ್ಠಿಕತೆ ಕುರಿತಂತೆ ಮಾಹಿತಿಯನ್ನು ಕೋಷ್ಟಕ ೪.೧೪ರಲ್ಲಿ ಕಾಣಬಹುದು.

**ಕೋಷ್ಟಕ ೪.೧೪: ಕಿರುಧಾನ್ಯ ಹಾಗೂ ಇತರ ಧಾನ್ಯಗಳ ಪೌಷ್ಠಿಕಾಂಶಗಳ ಪ್ರಮಾಣ (ಸೇವಿಸುವ ಪ್ರತಿ ೧೦೦ ಗ್ರಾಂ.ಗೆ)**

| ಧಾನ್ಯ | ಶಕ್ತಿ (ಕಿ.ಕ್ಯಾಲೊರಿ) | ಪ್ರೋಟೀನ್ (ಗ್ರಾಂ) | ಕೊಬ್ಬು (ಗ್ರಾಂ) | ಶರ್ಕರಪಿಷ್ಟ (ಗ್ರಾಂ) | ನಾರು (ಗ್ರಾಂ) | ಖನಿಜಾಂಶ (ಗ್ರಾಂ) | ಸುಣ್ಣ (ಮಿಗ್ರಾಂ) | ಕಬ್ಬಿಣ (ಮಿ. ಗ್ರಾಂ) | ರಂಜಕ (ಮಿ.ಗ್ರಾ) | ಸತವು (ಮಿ. ಗ್ರಾಂ) |
|---|---|---|---|---|---|---|---|---|---|---|
| ಗೋಧಿ | ೩೪೬ | ೧೧.೮ | ೧.೫ | ೭೧.೨ | ೧.೨ | ೧.೫ | ೪೧ | ೫.೩ | ೩೦೬ | ೨.೭ |
| ಅಕ್ಕಿ | ೩೪೫ | ೬.೮ | ೦.೫ | ೭೮.೨ | ೦.೨ | ೦.೬ | ೧೦ | ೦.೭ | ೧೬೦ | ೧.೪ |
| ಜೋಳ | ೩೪೯ | ೧೦.೪ | ೧.೯ | ೭೨.೬ | ೧.೬ | ೧.೬ | ೨೫ | ೪.೧ | ೨೨೨ | ೧.೬ |
| ಮೆಕ್ಕೆಜೋಳ | ೩೪೨ | ೧೧.೧ | ೩.೬ | ೬೬.೨ | ೨.೭ | ೧.೫ | ೧೦ | ೨.೩ | ೩೪೮ | ೨.೮ |
| ರಾಗಿ | ೩೨೮ | ೭.೩ | ೧.೩ | ೭೨.೦ | ೩೬ | ೨.೭ | ೩೪೪ | ೩೦೯ | ೨೮೩ | ೨.೩ |
| ನವಣೆ | ೩೩೧ | ೧೨.೩ | ೪.೩ | ೬೦.೯ | ೮.೦ | ೩.೩ | ೩೧ | ೨.೮ | ೨೯೦ | ೨.೪ |
| ಸಾವೆ | ೩೪೧ | ೭.೭ | ೪.೭ | ೬೭.೦ | ೭.೬ | ೧.೫ | ೧೭ | ೯.೩ | ೨೨೦ | ೩.೭ |
| ಬರಗು | ೩೭೪ | ೧೨.೫ | ೧.೧ | ೭೦.೪ | ೨.೨ | ೧.೯ | ೧೪ | ೦.೮ | ೨೦೬ | ೧.೪ |
| ಊದಲು | ೩೦೭ | ೬.೨ | ೨.೨ | ೬೫.೫ | ೯.೮ | ೪.೪ | ೨೦ | ೫.೦ | ೨೮೦ | ೩.೦ |
| ಹಾರಕ | ೩೦೯ | ೮.೩ | ೧.೪ | ೬೫.೯ | ೯.೦ | ೨.೬ | ೨೭ | ೦.೫ | ೧೮೮ | ೦.೭ |
| ಸಜ್ಜೆ | ೩೬೧ | ೧೧.೬ | ೫.೦ | ೬೭.೫ | ೧.೨ | ೨.೩ | ೪೨ | ೮.೦ | ೨೯೬ | ೩.೧ |

**ಮೂಲ: ಗ್ರಾಮೀಣ ಗೃಹ ವಿಜ್ಞಾನ ಮಹಾವಿದ್ಯಾಲಯ, ಕೃಷಿ ವಿಶ್ವವಿದ್ಯಾಲಯ, ಧಾರವಾಡ.**

**ರಾಷ್ಟ್ರೀಯ ಕೃಷಿ ವಿಮಾ ಯೋಜನೆ:** ಮುಂಗಾರು, ಹಂಗಾಮಿನಲ್ಲಿ ೨೫ ವಿವಿಧ ಬೆಳೆಗಳನ್ನು ಅಧಿಸೂಚಿಸಲಾಗಿದೆ. ಈ ಯೋಜನೆಯು ಬೆಳೆಸಾಲ ಪಡೆದಂತಹ ರೈತರಿಗೆ ಕಡ್ಡಾಯವಾಗಿರುತ್ತದೆ. ಬೆಳೆಸಾಲ ಪಡೆಯದಂತಹ ರೈತರಿಗೆ ಐಚ್ಛಿಕವಾಗಿರುತ್ತದೆ. ಮುಂಗಾರು, ಹಿಂಗಾರು ಮತ್ತು ಬೇಸಿಗೆ ಹಂಗಾಮುಗಳಲ್ಲಿ ಎಲ್ಲಾ ಬೆಳೆಗಳಲ್ಲಿ ಸ್ಥಳ ನಿರ್ದಿಷ್ಟ ಪ್ರಕೃತಿ ವಿಕೋಪಗಳಾದ ಆಲಿಕಲ್ಲು ಮಳೆ, ಚಂಡಮಾರುತ, ಪ್ರವಾಹ ಮತ್ತು ಭೂ ಕುಸಿತ ಉಂಟಾದ ಸಂದರ್ಭಗಳಲ್ಲಿ ರೈತರಿಗೆ ಪರಿಹಾರ ಒದಗಿಸಲಾಗುವುದು.

ಆತ್ಮಹತ್ಯೆಗೊಳಗಾದ ರೈತ ಕುಟುಂಬಗಳಿಗೆ ಪರಿಹಾರ ಧನ:ಪ್ರಕೃತಿ ವಿಕೋಪ ಹಾಗೂ ಇತರೆ ಕಾರಣಗಳನ್ನು ವಿಶ್ಲೇಷಣೆ ಮಾಡಿ ಸಾಲದ ಹೊರೆಯಿಂದಾಗಿ ಆತ್ಮಹತ್ಯೆ ಮಾಡಿಕೊಂಡ ದುರದೃಷ್ಟಕರ ಅರ್ಹ ರೈತ ಕುಟುಂಬಗಳಿಗೆ ಪರಿಹಾರ ಧನ ಒದಗಿಸಲಾಗುವುದು. ಪ್ರತಿ ರೈತ ಕುಟುಂಬಕ್ಕೆ ರೂ.೧ ಲಕ್ಷಗಳ ನಗದು ಪರಿಹಾರವನ್ನು ನೀಡಲಾಗುತ್ತಿದೆ. ಹಾವು ಕಡಿತಕ್ಕೆ ಪರಿಹಾರ ಕ್ರಮಗಳು:ಹಾವಿನ ಕಡಿತದಿಂದ, ಮರಗಳಿಂದ ಬಿದ್ದು ಅಥವಾ ಇತರೆ ಕೃಷಿ ಸಂಬಂಧಿತ ಆಕಸ್ಮಿಕಗಳಿಂದ ಮರಣ ಹೊಂದಿದ ರೈತರು ಮತ್ತು ಕೃಷಿ ಕಾರ್ಮಿಕರ ಕುಟುಂಬಗಳಿಗೆ ಒಂದು ಲಕ್ಷ ರೂ. ಸಹಾಯ ನೀಡಲಾಗುವುದು ಹಾಗೂ ಬೆಂಕಿ ಆಕಸ್ಮಿಕದಿಂದ ಹುಲ್ಲು ಮೆದೆ/ಬಣವೆಗಳು ನಷ್ಟವಾದ ಪ್ರಕರಣದಲ್ಲಿ ಹತ್ತು ಸಾವಿರ ರೂ. ಗಳ ಪರಿಹಾರ ನೀಡಲಾಗುವುದು. ರೈತರಿಗೆ ಉತ್ಪಾದನಾ ಬಹುಮಾನಗಳು:ಕೃಷಿ ವಲಯದ ಉತ್ಪಾದನೆ ಹೆಚ್ಚಿಸಲು, ರೈತರಲ್ಲಿ ಸ್ಪರ್ಧಾತ್ಮಕ ಮನೋಭಾವ ಬೆಳೆಸುವುದು ಈ ಕಾರ್ಯಕ್ರಮದ ಉದ್ದೇಶವಾಗಿದ್ದು, ರಾಜ್ಯ, ಜಿಲ್ಲಾ ಹಾಗೂ ತಾಲೂಕು ಮಟ್ಟದಲ್ಲಿ ಕೃಷಿ ಪ್ರಶಸ್ತಿಗಳನ್ನು ಆಯಾ ಮಟ್ಟದಲ್ಲಿ ನಿಗದಿಪಡಿಸಿದ ಬೆಳೆಗಳಲ್ಲಿ ಸ್ಪರ್ಧೆಗಳನ್ನು ಏರ್ಪಡಿಸಿ ಹೆಕ್ಟೇರಿಗೆ ಗರಿಷ್ಠ ಇಳುವರಿ ಪಡೆದ ವಿಜೇತರಿಗೆ ಜಿಲ್ಲಾ ಮಟ್ಟದಲ್ಲಿ ಮೂರು ಬಹುಮಾನಗಳನ್ನು ನೀಡಲಾಗುತ್ತಿದೆ. ಕೃಷಿ ಪಂಡಿತ ಪ್ರಶಸ್ತಿ:ಕೃಷಿ ವಲಯದಲ್ಲಿ ಉತ್ಪಾದನೆ ಹೆಚ್ಚಿಸಲು ತಮ್ಮ ಅಮೂಲ್ಯ ಅನ್ವೇಷಣೆ/ವಿಶಿಷ್ಟ ಸಾಧನೆ ಮೂಲಕ ರೈತ

ಸಮುದಾಯದ ಅಭಿವೃದ್ಧಿಗೆ ಅತ್ಯುತ್ತಮ ಕೊಡುಗೆ ನೀಡುತ್ತಿರುವ ಪರಿಣಿತ ಮಹನೀಯರುಗಳನ್ನು ಗುರುತಿಸಿ ಕೃಷಿ ಪಂಡಿತ ಪ್ರಶಸ್ತಿಯನ್ನು ನಗದು ಬಹುಮಾನದೊಂದಿಗೆ ನೀಡಿ ಸನ್ಮಾನಿಸಲಾಗುತ್ತಿದೆ.

**ಸಸ್ಯ ಸಂರಕ್ಷಣಾ ಕಾರ್ಯಕ್ರಮಗಳು:** ರಾಜ್ಯದಲ್ಲಿ ವಿವಿಧ ಬೆಳೆಗಳಿಗೆ ಬಾಧಿಸುವ ಕೀಟ/ರೋಗ ನಿಯಂತ್ರಣಕ್ಕಾಗಿ ರಾಸಾಯನಿಕ/ಜೈವಿಕ ಪೀಡೆನಾಶಕಗಳನ್ನು ಹಾಗೂ ಸಿಂಪರಣಾ ಯಂತ್ರಗಳನ್ನು ಶೇ.೫೦ರ ರಿಯಾಯಿತಿಯಲ್ಲಿ ವಿತ–ರಿಸಲಾಗುತ್ತಿದೆ. ವೈಜ್ಞಾನಿಕ ಧಾನ್ಯ ಸಂಗ್ರಹಣೆಗಾಗಿ ಶೇ.೫೦ರ ರಿಯಾಯಿತಿಯಲ್ಲಿ ಧಾನ್ಯ ಸಂಗ್ರಹಣಾ ಕಣಜಗಳ ವಿತರಣೆ ಹಾಗೂ ಗ್ರಾಮಾಂತರ ಪ್ರದೇಶದಲ್ಲಿ ಪಕ್ಕಾಕೋಠಿಗಳನ್ನು ನಿರ್ಮಿಸಲು ಪ್ರೋತ್ಸಾಹಧನ ನೀಡಲಾಗುತ್ತಿದೆ. ರೈತರ ಅಧ್ಯಯನ ಪ್ರವಾಸ:ರೈತರು ಹಾಗೂ ವಿಸ್ತರಣಾ ಸಿಬ್ಬಂದಿಗೆ ವಿಶ್ವದ ವಿವಿಧೆಡೆ ಕೃಷಿಯಲ್ಲಿ ಅನುಸರಿಸುತ್ತಿರುವ ನವೀನ ತಾಂತ್ರಿಕತೆಗಳಾದ ಹನಿ ನೀರಾವರಿ, ಮಣ್ಣು ರಹಿತ ಕೃಷಿ, ಜಲಕೃಷಿ, ಮುಂತಾದವುಗಳನ್ನು ರೈತರಿಗೆ/ವಿಸ್ತರಣಾ ಸಿಬ್ಬಂದಿಗೆ ಪರಿಚಯಿಸುವುದು ಈ ಯೋಜನೆಯ ಮೂಲ ಉದ್ದೇಶ. ಇದಲ್ಲದೇ, ಕೃಷಿ ಮಾರುಕಟ್ಟೆ ಹಾಗೂ ವ್ಯಾಪಾರ ನಿರ್ವಹಣೆ ಬಗ್ಗೆ ಮಾಹಿತಿ, ಗ್ರಾಮ್ಯ ಜೀವನದಲ್ಲಿ ಗುಂಪು ಸಹಭಾಗಿತ್ವ ಹಾಗೂ ಯಶೋಗಾಥೆಗಳ ಉದಾಹರಣೆಗಳನ್ನು ನಿದರ್ಶಿಸುವುದು, ವಿಶ್ವದ ವಿವಿಧೆಡೆ ರೈತರಲ್ಲಿ ಸಂಪರ್ಕ ಜಾಲ ಬೆಳೆಸುವುದು ಈ ಯೋಜನೆಯ ಉದ್ದೇಶವಾಗಿದೆ.

**ಮಣ್ಣಿನ ಫಲವತ್ತತೆ ಹೆಚ್ಚಿಸುವಿಕೆ–ವಿಶೇಷ ಅಭಿವೃದ್ಧಿ ಯೋಜನೆ:** ಹಿಂದುಳಿದ ಮತ್ತು ಮಳೆಯಾಶ್ರಿತ ತಾಲೂಕುಗಳಲ್ಲಿ ಮಣ್ಣಿನಲ್ಲಿನ ತೇವಾಂಶವನ್ನು ಕಾಯ್ದುಕೊಳ್ಳಲು ಹಾಗೂ ಮಣ್ಣಿನ ಆರೋಗ್ಯವನ್ನು ಸುಧಾರಿಸಲು ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ.

**ರೈತ ಸಂಪರ್ಕ ಕೇಂದ್ರಗಳು:** ರೈತರಿಗೆ ಸುಧಾರಿತ ಕೃಷಿ ತಂತ್ರಜ್ಞಾನವನ್ನು ನಿರಂತರವಾಗಿ ತಲುಪಿಸಿ, ಕ್ಷೇತ್ರಗಳಲ್ಲಿ ಅಳವಡಿಕೆ ಮಾಡಿಕೊಳ್ಳುವುದಕ್ಕೆ ಪ್ರೇರೇಪಿಸಿ, ತನ್ಮೂಲಕ ಕೃಷಿ ಉತ್ಪಾದನೆ ಹಾಗೂ ರೈತ ವರ್ಗದ ಅಭಿವೃದ್ಧಿ ಸಾಧಿಸಲು ೨೦೦೦–೨೦೦೧ನೇ ಸಾಲಿನಲ್ಲಿ ರೈತಮಿತ್ರ ಎಂಬ ವಿನೂತನ ಯೋಜನೆಯನ್ನು ಜಾರಿಗೊಳಿಸಲಾಗಿದೆ. ಈ ಯೋಜನೆಯಡಿಯಲ್ಲಿ ಜಿಲ್ಲೆಯ ಪ್ರತಿಯೊಂದು ಕಂದಾಯ ಹೋಬಳಿ ಕೇಂದ್ರಗಳಲ್ಲಿ 'ರೈತ ಸಂಪರ್ಕ ಕೇಂದ್ರ'ಗಳನ್ನು ಸ್ಥಾಪಿಸಲಾಗಿದೆ. ಆಯಾ ಹೋಬಳಿ ವ್ಯಾಪ್ತಿಯ ರೈತರಿಗೆ ಸುಧಾರಿತ ತಂತ್ರಜ್ಞಾನವನ್ನು ವ್ಯವಸ್ಥಿತವಾಗಿ, ನಿರಂತರವಾಗಿ ಮತ್ತು ಪರಿಣಾಮಕಾರಿಯಾಗಿ ರೈತರಿಗೆ ತಲುಪಿಸುವುದು ಈ ರೈತ ಸಂಪರ್ಕ ಕೇಂದ್ರಗಳ ಮುಖ್ಯ ಉದ್ದೇಶವಾಗಿದೆ. ರೈತರು ಕ್ಷೇತ್ರಮಟ್ಟದಲ್ಲಿ ಸುಧಾರಿತ ಕೃಷಿ ತಂತ್ರಜ್ಞಾನವನ್ನು ಅಳವಡಿಸುವಾಗ ಎದುರಿಸುವ ಸಮಸ್ಯೆಗಳನ್ನು ವೈಜ್ಞಾನಿಕವಾಗಿ ಗುರುತಿಸಿ ಪರಿಹಾರೋಪಾಯಗಳನ್ನು ಸೂಚಿಸುವ ಹಾಗೂ ಈ ಪರಿಹಾರಗಳನ್ನು ಅಳವಡಿಸುವಂತೆ ಮನವರಿಕೆ ಮಾಡುವುದು ಈ ಸಂಪರ್ಕ ಕೇಂದ್ರಗಳ ಮುಖ್ಯ ಚಟುವಟಿಕೆಯಾಗಿರುತ್ತದೆ. ಅಲ್ಲದೆ ಬೀಜ, ಮೊಳಕೆ ಪ್ರಮಾಣ ಪರೀಕ್ಷೆ, ರಾಸಾಯನಿಕ ಗೊಬ್ಬರಗಳ ಭೌತಿಕ ಗುಣಧರ್ಮಗಳ ಪರಿಶೀಲನೆ ಮಾಡಿ ಸಲಹೆ ನೀಡುವುದು ಇವೇ ಮುಂತಾದ ಕೆಲವೊಂದು ಮೂಲಭೂತ ತಾಂತ್ರಿಕ ಬೆಂಬಲ ಸೇವೆಯನ್ನು ಸ್ಥಳೀಯವಾಗಿ ರೈತರಿಗೆ ನೀಡಲಾಗುತ್ತದೆ. ರೈತ ಸಂಪರ್ಕ ಕೇಂದ್ರಗಳು ಈ ಕೆಳಕಾಣಿಸಿದ ಉದ್ದೇಶಗಳ ಈಡೇರಿಕೆಗಾಗಿ ಶ್ರಮಿಸುತ್ತಿವೆ.೧) ಇಲಾಖೆಯ ಬೆಳೆ ಸಂಗೋಪನಾ ಕಾರ್ಯಕ್ರಮಗಳನ್ನು ಕಾರ್ಯಗತಗೊಳಿಸಲು ಪ್ರಾಥಮಿಕ ಘಟಕವಾಗಿ ಕಾರ್ಯನಿರ್ವಹಿಸುವುದರ ಜೊತೆಗೆ ಕ್ಷೇತ್ರಮಟ್ಟದ ಸಮಸ್ಯೆಗಳನ್ನು ಗುರುತಿಸಿ ಪರಿಹಾರೋಪಾಯಗಳನ್ನು ಸೂಚಿಸುವುದು, ೨) ಕೃಷಿ ಹಾಗೂ ಕೃಷಿಗೆ ಸಂಬಂಧಿತ ಇತರೆ ಉತ್ಪಾದನಾ ಚಟುವಟಿಕೆಗಳಲ್ಲಿ ಪ್ರಮುಖವಾಗಿ ತೋಟಗಾರಿಕೆ, ಬೆಳೆ ಉತ್ಪಾದನೆ ಬಗ್ಗೆ ವಿಸ್ತರಣಾ ಸೇವೆಯ ಅವಶ್ಯಕತೆಗಳನ್ನು ಪೂರೈಸುವುದು, ೩) ರೈತರು, ರೈತ ಮಹಿಳೆಯರು ಮತ್ತು ಯುವಕ ರೈತರುಎದುರಿಸುತ್ತಿರುವ ಸಮಸ್ಯೆಗಳನ್ನು ವೈಜ್ಞಾನಿಕವಾಗಿ ಗುರುತಿಸುವ, ಮಾಹಿತಿ ಒದಗಿಸುವ ಹಾಗೂ ಚರ್ಚಾ ಕೇಂದ್ರಗಳಾಗಿ ನಿರ್ವಹಿಸುವುದು, ೪) ಕೃಷಿ ಪರಿಕರಗಳ ಸ್ಥಳೀಯ ಬೇಡಿಕೆಗಳನ್ನು ಪೂರೈಸುವುದು ಮತ್ತು ೫) ಕೃಷಿ ಪದವೀಧರ ವಿದ್ಯಾರ್ಥಿಗಳಿಗೆ ಪ್ರಾಯೋಗಿಕ ತರಬೇತಿ ನೀಡುವುದು. ತುಮಕೂರು ಜಿಲ್ಲೆಯಲ್ಲಿ ಒಟ್ಟು ಐವತ್ತು ರೈತ ಸಂಪರ್ಕ ಕೇಂದ್ರಗಳು ಕಾರ್ಯನಿರ್ವಹಿಸುತ್ತಿವೆ.

**ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಗಳು:** ಸುವ್ಯವಸ್ಥಿತ ಕೃಷಿ ಉತ್ಪನ್ನಗಳ ಮಾರಾಟ ವ್ಯವಸ್ಥೆಯನ್ನು ಆಚರಣೆಯಲ್ಲಿ ತರುವುದು, ಮಾರಾಟಕ್ಕೆ ಅಗತ್ಯವಾದ ಸೌಕರ್ಯ ಹಾಗೂ ಸೌಲಭ್ಯಗಳನ್ನು ಒದಗಿಸುವುದು ಹಾಗೂ ಮಾರಾಟದಲ್ಲಿನ ರಿವಾಜುಗಳನ್ನು ನಿಗದಿಪಡಿಸಿ ತನ್ಮೂಲಕ ಅನಾವಶ್ಯಕ ವೆಚ್ಚಗಳನ್ನು ನಿರ್ಬಂಧಿಸುವುದು ಇವೇ ಮುಂತಾದ ಉದ್ದೇಶಗಳಿಂದ ರೈತರ ಉತ್ಪನ್ನಗಳಿಗೆ ಸ್ಪರ್ಧಾತ್ಮಕವಾದ ಬೆಲೆಗಳನ್ನು ಪಡೆದುಕೊಳ್ಳಲು ಅನುಕೂಲತೆಗಳನ್ನು ಕಲ್ಪಿಸುವುದಕ್ಕಾಗಿ ಕರ್ನಾಟಕ

ಕೃಷಿ ಉತ್ಪನ್ನ ಮಾರಾಟ (ನಿಯಂತ್ರಣ) ಶಾಸನ ೧೯೬೬ ರನ್ನು ರಚಿಸಿ ಜಾರಿಯಲ್ಲಿ ತರಲಾಗಿದೆ. ಈ ಕಾಯ್ದೆಯನ್ವಯ ಕೃಷಿ ಉತ್ಪನ್ನ ಮಾರುಕಟ್ಟೆಗಳು ಕಾರ್ಯ ನಿರ್ವಹಿಸುತ್ತಿವೆ. ರೈತರು ತಾವು ಬೆಳೆದ ಬೆಳೆಗೆ ಸೂಕ್ತ ಬೆಲೆ ದೊರೆಯದೇ ಆರ್ಥಿಕವಾಗಿ ಅವರಿಗೆ ನಷ್ಟ ಸಂಭವಿಸುವುದನ್ನು ತಡೆಗಟ್ಟಲು ಕನಿಷ್ಠ ಬೆಂಬಲ ಬೆಲೆ ಯೋಜನೆಯನ್ನು ಜಾರಿಗೊಳಿಸಲಾಗಿದೆ.

## ತೋಟಗಾರಿಕೆ

ಆಹಾರ ಬೆಳೆಗಳು ದೈಹಿಕ ಬೆಳವಣಿಗೆಗೆ ಎಷ್ಟು ಮುಖ್ಯವೋ ಅಷ್ಟೇ ಮುಖ್ಯವಾಗಿ ದೈಹಿಕ ಬೆಳವಣಿಗೆಗೆ ಪೌಷ್ಠಿಕಾಂಶ ದೊರಕಿಸಿಕೊಡಲು ಹಣ್ಣು ಮತ್ತು ತರಕಾರಿ ಬೆಳೆಗಳು ಮುಖ್ಯವಾಗಿವೆ. ಇಂತಹ ಹಣ್ಣು, ತರಕಾರಿ ಬೆಳೆಗಳ ಕೃಷಿ ಜಯಪ್ರದವಾಗಿ ಅಭಿವೃದ್ಧಿ ಹೊಂದಿದಲ್ಲಿ ಪೌಷ್ಠಿಕ ಆಹಾರದ ಕೊರತೆಯನ್ನು ನಿವಾರಿಸಲು ಸಾಧ್ಯ. ಈ ದಿಸೆಯಿಂದ ತೋಟಗಾರಿಕೆ ಬೆಳೆಗಳಾದ ಹಣ್ಣು, ತರಕಾರಿ, ಸಂಬಾರ ಬೆಳೆಗಳು, ತೋಟದ ಬೆಳೆಗಳು, ವಾಣಿಜ್ಯ ಪುಷ್ಪಗಳ ಬೇಸಾಯ, ಔಷಧೀಯ ಗಿಡಗಳ ಕೃಷಿ ಇತ್ಯಾದಿಗಳನ್ನು ಬೆಳೆಯುವಲ್ಲಿ ತೋಟಗಾರಿಕೆ ಒಂದು ಪ್ರಧಾನ ಕೃಷಿಯಾಗಿರುತ್ತದೆ. ತುಮಕೂರು ಜಿಲ್ಲೆಯು ತೋಟಗಾರಿಕೆ ಬೆಳೆಗಳ ಕೃಷಿಗೆ ಅನುಕೂಲಕರವಾದ ಹವಾಗುಣ ಹೊಂದಿರುವುದರಿಂದ ತೋಟಗಾರಿಕೆ ಅಭಿವೃದ್ಧಿ ಉತ್ತೇಜನಕಾರಿಯಾಗಿ ಮುಂದುವರಿಯುತ್ತಿದೆ.

ಜಿಲ್ಲೆಯಲ್ಲಿ ಹಣ್ಣಿನ ಗಿಡಗಳಾದ ಮಾವು, ಬಾಳೆ, ನಿಂಬೆ, ಸೀಬೆ, ದ್ರಾಕ್ಷಿ, ಸಪೋಟ, ದಾಳಿಂಬೆ, ಪಪ್ಪಾಯ, ಮೂಸಂಬಿ, ಹಲಸು ಮತ್ತು ಸೀತಾಫಲ ಮುಂತಾದವುಗಳ ಕೃಷಿಯನ್ನು ಕಾಣಬಹುದು. ಆಲೂಗಡ್ಡೆ, ಟೊಮ್ಯಾಟೊ, ಬದನೆ, ಹುರಳಿಕಾಯಿ, ಈರುಳ್ಳಿ, ಹಸಿರುಮೆಣಸಿನಕಾಯಿ, ವಿವಿಧ ಜಾತಿಯ ಸೊಪ್ಪುಗಳು, ಕುಂಬಳ ಜಾತಿಯ ತರಕಾರಿಗಳು, ದಪ್ಪಮೆಣಸಿನಕಾಯಿ, ನುಗ್ಗೆಕಾಯಿ, ಮೂಲಂಗಿ, ಕ್ಯಾರೆಟ್, ಇತ್ಯಾದಿ ತರಕಾರಿ ಬೆಳೆಗಳ ಕೃಷಿಯು ಪ್ರಗತಿಯಲ್ಲಿದೆ. ಸಂಬಾರ ಬೆಳೆಗಳಾದ ಮೆಣಸು, ಹುಣಸೆ, ಶುಂಠಿ, ಬೆಳ್ಳುಳ್ಳಿ, ಒಣಮೆಣಸಿನಕಾಯಿ, ಧನಿಯಾ ಮತ್ತು ವೆನಿಲ್ಲ ಕೃಷಿಯನ್ನು ಮಧ್ಯಮ ಪ್ರಮಾಣದಲ್ಲಿ ಬೆಳೆಯುವುದನ್ನು ಕಾಣಬಹುದು. ತೋಟದ ಬೆಳೆಗಳಾದ ತೆಂಗು, ಅಡಿಕೆ, ವೀಳೆಯದೆಲೆ ಹೆಚ್ಚಿನ ಪ್ರಮಾಣದಲ್ಲಿ ಮತ್ತು ಕೋಕೊ ಹಾಗೂ ಗೋಡಂಬಿಯನ್ನು ಕಡಿಮೆ ಪ್ರಮಾಣದಲ್ಲಿ ಕೃಷಿ ಮಾಡುವುದನ್ನು ಕಾಣಬಹುದು. ವಾಣಿಜ್ಯ ಪುಷ್ಪಗಳಾದ ಆಸ್ಟೆರ್, ಕನಕಾಂಬರ, ಚೆಂಡುಹೂ, ಮಲ್ಲಿಗೆ, ಸೇವಂತಿಗೆ, ಸುಗಂಧರಾಜ ಹಾಗೂ ಗುಲಾಬಿ ಗಿಡಗಳ ಕೃಷಿಯನ್ನು ಸಹಾ ಜಿಲ್ಲೆಯಲ್ಲಿ ಕಾಣಬಹುದು. ಕರ್ನಾಟಕ ರಾಜ್ಯದ ಒಟ್ಟು ತೋಟಗಾರಿಕೆ ಬೆಳೆಗಳ ೨೦೧೦–೧೧ನೇ ಸಾಲಿನ ಅಂಕಿ–ಅಂಶಗಳ ಪ್ರಕಾರ ತುಮಕೂರಿನಲ್ಲಿ ತೋಟಗಾರಿಕೆ ಬೆಳೆಗಳ ಶೇಕಡಾವಾರು ವಿಸ್ತೀರ್ಣ ೧೦.೮೫ ಆಗಿರುತ್ತದೆ. ತುಮಕೂರು ಜಿಲ್ಲೆಯು ರಾಜ್ಯದ ಜಿಲ್ಲೆಗಳ ಪೈಕಿ ೨೦೧೦–೧೧ನೇ ಸಾಲಿನಲ್ಲಿ ಒಟ್ಟು ತೋಟಗಾರಿಕೆ ಬೆಳೆಗಳ ವಿಸ್ತೀರ್ಣದಲ್ಲಿ ಮೊದಲನೆ ಶ್ರೇಣಿ, ಉತ್ಪನ್ನದಲ್ಲಿ ಒಂಬತ್ತನೆಯ ಶ್ರೇಣಿ ಮತ್ತು ಮೌಲ್ಯಾನುಸಾರ ಎರಡನೇ ಶ್ರೇಣಿಯನ್ನು ಪಡೆದಿರುತ್ತದೆ. ಜಿಲ್ಲೆಯಲ್ಲಿನ ವಿವಿಧ ಪ್ರಮುಖ ತೋಟಗಾರಿಕೆ ಬೆಳೆಗಳ ಕುರಿತಂತೆ ಅಂಕಿಅಂಶಗಳು ಕೆಳಕಂಡಂತಿದೆ (ಕೋಷ್ಟಕ ೪.೧೫).

**ಕೋಷ್ಟಕ ೪.೧೫: ತುಮಕೂರು ಜಿಲ್ಲೆಯಲ್ಲಿನ ಪ್ರಮುಖ ತೋಟಗಾರಿಕೆ ಬೆಳೆಗಳ ಮಾಹಿತಿ; ವಿಸ್ತೀರ್ಣ–ಹೆಕ್ಟೇರ್ ಗಳಲ್ಲಿ, ಉತ್ಪನ್ನ–ಮೆ.ಟನ್ನುಗಳಲ್ಲಿ, ಇಳುವರಿ–ಪ್ರತಿ ಹೆಕ್ಟೇರಿಗೆ ಮೆ.ಟನ್ನುಗಳಲ್ಲಿ, ಮೌಲ್ಯ–ಲಕ್ಷ ರೂಗಳಲ್ಲಿ.**

| ಕ್ರ.ಸಂಖ್ಯೆ | ತೋಟಗಾರಿಕೆ ಬೆಳೆಗಳು | ವಿಸ್ತೀರ್ಣ | ಉತ್ಪನ್ನ | ಇಳುವರಿ | ಮೌಲ್ಯ |
|---|---|---|---|---|---|
| ೧ | ಹಣ್ಣಿನ ಬೆಳೆಗಳು | ೨೧,೯೦೭ | ೪,೬೬,೮೯೦ | ೨೧.೩೧ | ೫೫,೯೬೩ |
| ೨ | ತರಕಾರಿ ಬೆಳೆಗಳು | ೩,೯೮೪ | ೧,೦೨,೩೧೧ | ೨೫.೬೮ | ೮,೨೫೦ |
| ೩ | ಸಂಬಾರು ಬೆಳೆಗಳು | ೪,೪೨೭ | ೧೯,೮೨೪ | ೪.೪೮ | ೧೪,೫೨೫ |
| ೪ | ತೋಟದ ಬೆಳೆಗಳು | ೧,೭೨,೪೨೯ | ೪೯,೫೯೩ | ೦.೨೯ | ೭೪,೨೯೨ |
| ೫ | ವಾಣಿಜ್ಯ ಪುಷ್ಪಗಳು | ೨,೬೯೬ | ೧೮,೭೫೧ | ೬.೯೬ | ೧೦,೫೧೩ |
| ೬ | ಔಷಧೀಯ ಗಿಡಗಳು | ೮೮ | ೭೭೬ | ೮.೮೨ | ೩೯೫ |
| ೭ | ಸುಗಂಧಿತ ಗಿಡಗಳು | – | – | – | – |
| | ಒಟ್ಟು | ೨,೦೫,೫೩೧ | ೬,೫೮,೧೪೫ | – | ೧,೬೩,೬೬೮ |

ಮೂಲ: ಕರ್ನಾಟಕ ರಾಜ್ಯದ ತೋಟಗಾರಿಕೆ ಬೆಳೆಗಳ ಅಂಕಿ ಅಂಶಗಳ ನೋಟ–೨೦೧೦–೧೧, ತೋಟಗಾರಿಕೆ ನಿರ್ದೇಶನಾಲಯ, ಬೆಂಗಳೂರು.

ತುಮಕೂರು ಜಿಲ್ಲಾ ಕೇಂದ್ರ ಸ್ಥಾನದಲ್ಲಿ ತೋಟಗಾರಿಕೆ ಇಲಾಖೆಯ ಉಪನಿರ್ದೇಶಕರ ಕಛೇರಿಯು ಕಾರ್ಯನಿರ್ವಹಿಸುತ್ತಿದೆ. ಇಲಾಖೆಯ ಮೂಲ ಉದ್ದೇಶಗಳಾದ ವಿವಿಧ ತೋಟಗಾರಿಕೆ ಬೆಳೆಗಳ ಉತ್ಕೃಷ್ಟ ಗುಣಮಟ್ಟದ ಸಸಿ/ಕಸಿ ಗಿಡಗಳ ಉತ್ಪಾದನೆ ಮತ್ತು ವಿತರಣೆ, ತೋಟಗಾರಿಕೆಯ ಕುರಿತಂತೆ ಉನ್ನತ ತಂತ್ರಜ್ಞಾನ ಪ್ರಸರಣ ಹಾಗೂ ತಾಂತ್ರಿಕತೆಗೆ ಪ್ರೋತ್ಸಾಹ ನೀಡುವುದು, ತೋಟಗಾರಿಕೆ ಕೊಯ್ಲೋತ್ತರ ನಿರ್ವಹಣೆ ಮತ್ತು ಮಾರುಕಟ್ಟೆ ನೆರವು ಒದಗಿಸುವುದು, ಸಾವಯವ ಬೇಸಾಯ ಪದ್ಧತಿಗಳನ್ನು ಉತ್ತೇಜಿಸುವುದು, ರೈತರಿಗೆ ತೋಟಗಾರಿಕೆ ಉತ್ಪನ್ನಗಳ ರಫ್ತು ಮತ್ತು ಮೌಲ್ಯವರ್ಧನೆಗೆ ನೆರವು ನೀಡುವುದು, ಖುಷ್ಕಿ ತೋಟಗಾರಿಕೆಗೆ ಉತ್ತೇಜನ ನೀಡುವುದು ಇತ್ಯಾದಿಗಳ ಅನುಷ್ಠಾನದಲ್ಲಿ ಜಿಲ್ಲೆ ಉಪನಿರ್ದೇಶಕರ ಕಛೇರಿಯು ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಕಾರ್ಯಗತಗೊಳಿಸುತ್ತಿದೆ. ಇದಲ್ಲದೆ ಫಲಪುಷ್ಪ ಪ್ರದರ್ಶನ, ಸಿದ್ದಗಂಗಾ ಮತ್ತು ಪಟ್ಟನಾಯಕನಹಳ್ಳಿಗಳಲ್ಲಿ ಕೈಗಾರಿಕಾ ಮತ್ತು ವಸ್ತು ಪ್ರದರ್ಶನ ಏರ್ಪಡಿಸಿ ಪ್ರದರ್ಶಿಕೆಗಳ ಮೂಲಕ ತೋಟಗಾರಿಕೆ ಬೆಳೆಗಳ ಕುರಿತಂತೆ ಪ್ರಚಾರ ಹಾಗೂ ಹನಿ ನೀರಾವರಿ ಅಳವಡಿಸಿದ ರೈತರಿಗೆ ಸಹಾಯಧನ ನೀಡುವ ಕಾರ್ಯವನ್ನು ಯಶಸ್ವಿಯಾಗಿ ಕಾರ್ಯಗತಗೊಳಿಸುತ್ತಿದೆ. ತೋಟಗಾರಿಕೆ ಉಪನಿರ್ದೇಶಕರು ಜಿಲ್ಲೆಯಲ್ಲಿನ ತೋಟಗಾರಿಕೆ ಅಭಿವೃದ್ಧಿಗೆ ಸಂಬಂಧಿಸಿದ ಎಲ್ಲಾ ಅಭಿವೃದ್ಧಿ ಕಾರ್ಯಕ್ರಮಗಳ ಉಸ್ತುವಾರಿ ಅಧಿಕಾರಿಯಾಗಿರುತ್ತಾರೆ. ಇವರ ಸಹಾಯಕರಾಗಿ ಒಬ್ಬರು ಕೇಂದ್ರ ಸ್ಥಾನ ಸಹಾಯಕರು (ಸಹಾಯಕ ತೋಟಗಾರಿಕೆ ನಿರ್ದೇಶಕರು) ಒಬ್ಬರು ರಾಷ್ಟ್ರೀಯ ತೋಟಗಾರಿಕೆ ಮಿಷನ್ ಮತ್ತು ಮಾರುಕಟ್ಟೆ ಸಹಾಯಕ ತೋಟಗಾರಿಕೆ ನಿರ್ದೇಶಕರು ಮತ್ತು ತಾಂತ್ರಿಕ ಸಹಾಯಕರುಗಳು (ಸಹಾಯಕ ತೋಟಗಾರಿಕೆ ಅಧಿಕಾರಿಗಳು) ಹಾಗೂ ಒಬ್ಬರು ಸಹಾಯಕ ಸಾಂಖ್ಯಿಕ ಅಧಿಕಾರಿ ಹಾಗೂ ಆಡಳಿತ ಸಿಬ್ಬಂದಿಯವರು ಕಾರ್ಯನಿರ್ವಹಿಸುತ್ತಿದ್ದಾರೆ.

ತಾಲೂಕು ಮಟ್ಟಗಳಲ್ಲಿ ಪ್ರತೀ ತಾಲೂಕಿನಲ್ಲೂ ಜಿಲ್ಲಾ ಪಂಚಾಯತ್ ಆಡಳಿತ ವ್ಯಾಪ್ತಿಗೆ ಸೇರಿದ ತೋಟಗಾರಿಕೆ ಕಛೇರಿ ಇದ್ದು, ಕಛೇರಿ ಮುಖ್ಯಸ್ಥರಾಗಿ ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರು/ಸಹಾಯಕ ತೋಟಗಾರಿಕೆ ನಿರ್ದೇಶಕರು ಕಾರ್ಯನಿರ್ವಹಣೆ ಮಾಡುತ್ತಿದ್ದಾರೆ. ಇವರ ಸಹಾಯಕ್ಕಾಗಿ ಪ್ರತಿ ಕಛೇರಿಯಲ್ಲಿ ಒಬ್ಬ ಸಹಾಯಕ ತೋಟಗಾರಿಕೆ ಅಧಿಕಾರಿ ಮತ್ತು ತೋಟಗಾರಿಕೆ ಸಹಾಯಕರು ಇರುತ್ತಾರೆ ಹಾಗೂ ಹೋಬಳಿ ಮಟ್ಟದ ರೈತ ಸಂಪರ್ಕ ಕೇಂದ್ರಗಳಲ್ಲಿ ಒಬ್ಬರು ಸಹಾಯಕ ತೋಟಗಾರಿಕೆ ಅಧಿಕಾರಿ ಇರುವರು. ಇವರುಗಳು ರೈತರುಗಳಿಗೆ ತೋಟದ ಬೆಳೆ ಬೆಳೆಯಲು ತಿಳಿವಳಿಕೆ, ತಾಂತ್ರಿಕ ಸಲಹೆ ಹಾಗೂ ಮಾರ್ಗದರ್ಶನ ನೀಡುವುದಲ್ಲದೆ ಇಲಾಖೆಯು ರೂಪಿಸಿದ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸುತ್ತಾರೆ. ಜಿಲ್ಲೆಯಲ್ಲಿ ಒಟ್ಟು ಹದಿನೆಂಟು ತೋಟಗಾರಿಕೆ ಕ್ಷೇತ್ರಗಳು ಕಾರ್ಯನಿರ್ವಹಿಸುತ್ತಿದ್ದು ಅವುಗಳ ವಿವರ ಕೆಳಕಂಡಂತಿದೆ

**ಕೋಷ್ಟಕ ೪.೧೬: ತೋಟಗಾರಿಕಾ ಕ್ಷೇತ್ರಗಳ ವಿವರಗಳು**

| ತಾಲೂಕುಗಳು | ತೋಟಗಾರಿಕೆ ಕ್ಷೇತ್ರದ ಹೆಸರು |
|---|---|
| ತುಮಕೂರು | ಜಿಲ್ಲಾ ನರ್ಸರಿ, ನಿಡುವಳಲು |
| ಕುಣಿಗಲ್ | ರಂಗಸ್ವಾಮಿಗುಡ್ಡ, ಮಾರ್ಕೋನಹಳ್ಳಿ, ಬಿಳಿದೇವಾಲಯ, ಮಂಗಳ |
| ಪಾವಗಡ | ರಾಜವಂತಿ |
| ಮಧುಗಿರಿ | ಇಂದಿರಾ |
| ಚಿಕ್ಕನಾಯಕನಹಳ್ಳಿ | ಜೆ.ಸಿ.ಪುರ |
| ಗುಬ್ಬಿ | ಹೆರೂರು, ಕೆ.ಮತ್ತಿಘಟ್ಟ |
| ಶಿರಾ | ಶಿರಾ ನರ್ಸರಿ, ಮುದಿಗೆರೆ |
| ಕೊರಟಗೆರೆ | ಡಾ.ಎಂ.ಹೆಚ್.ಮರಿಗೌಡ, ವಡ್ಡಗೆರೆ |
| ತುರುವೇಕೆರೆ | ಮಾದಿಹಳ್ಳಿ |
| ತಿಪಟೂರು | ಗೊರಗೊಂಡನಹಳ್ಳಿ |
| ಚಿಕ್ಕನಾಯಕನಹಳ್ಳಿ | ಶ್ರೀ ಧರ್ಮವೀರ |

**ಮೂಲ: ತೋಟಗಾರಿಕೆ ಇಲಾಖೆ, ತುಮಕೂರು.**

ಅಭಿವೃದ್ಧಿ ಕಾರ್ಯಕ್ರಮಗಳು:ಜಿಲ್ಲೆಯ ರೈತ ಸಮುದಾಯದ ಅನುಕೂಲಕ್ಕಾಗಿ ತೋಟಗಾರಿಕೆ ಇಲಾಖೆಯು ಜಿಲ್ಲಾ ಪಂಚಾಯತ್, ತಾಲೂಕು ಪಂಚಾಯತ್, ರಾಜ್ಯ ವಲಯ, ರಾಷ್ಟ್ರೀಯ ತೋಟಗಾರಿಕೆ ಮಿಷನ್ ಯೋಜನೆಗಳನ್ನು ಅನುಷ್ಠಾನಗೊಳಿಸಲಾಗುತ್ತಿದೆ. ೨೦೧೨-೧೩ನೇ ಸಾಲಿನಲ್ಲಿ ಅನುಷ್ಠಾನಗೊಂಡ ಯೋಜನೆಗಳ ವಿವರ ಈ ಕೆಳಗಿನಂತಿರುತ್ತದೆ.

**ಹನಿ ನೀರಾವರಿ ಯೋಜನೆ:** ಈ ಯೋಜನೆಯಡಿ ತೋಟಗಾರಿಕೆ ಬೆಳೆಗಳಲ್ಲಿ ಹನಿ ನೀರಾವರಿ ಅಳವಡಿಕೆಗಾಗಿ ರೈತರಿಗೆ ಸಹಾಯಧನ ನೀಡಲಾಗುವುದು. ಈ ಯೋಜನೆಯಲ್ಲಿ ಅಡಿಕೆ, ತೆಂಗು, ಬಾಳೆ, ಮಾವು, ಸಪೋಟ, ದಾಳಿಂಬೆ, ನುಗ್ಗೆ, ಪಪ್ಪಾಯಿ, ದ್ರಾಕ್ಷಿ ಮತ್ತು ಇತರೆ ತೋಟಗಾರಿಕೆ ಬೆಳೆ ಬೆಳೆಯುವ ರೈತರಿಗೆ ಹನಿ ನೀರಾವರಿ ಅಳವಡಿಕೆಗೆ ಸಹಾಯಧನ ನೀಡಿ ರೈತರನ್ನು ಉತ್ತೇಜಿಸಲಾಗಿದೆ. ಈ ಯೋಜನೆಯಡಿಯಲ್ಲಿ ಜಿಲ್ಲಾ ಪಂಚಾಯತಿಯಿಂದ ಬಿಡುಗಡೆಯಾದ ರೂ.೫೦.೦೦ ಲಕ್ಷಗಳನ್ನು ನಿಯಮಾನುಸಾರ ಖರ್ಚು ಮಾಡಲಾಗಿದೆ.

**ತೋಟಗಾರಿಕೆ ಕಟ್ಟಡಗಳ ದುರಸ್ತಿ/ನವೀಕರಣ:** ರೂ.೨.೦೦ ಲಕ್ಷಗಳನ್ನು ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರು (ಜಿಪಂ) ಚಿಕ್ಕನಾಯಕನಹಳ್ಳಿ ರವರ ಕಚೇರಿ ದುರಸ್ತಿ, ರೂ೨.೫೦ ಗಳನ್ನು ಸಹಾಯಕ ತೋಟಗಾರಿಕೆ ನಿರ್ದೇಶಕರು (ಜಿಲ್ಲಾ ಪಂಚಾಯತ್) ತುರುವೇಕೆರೆ ರವರ ಕಛೇರಿ ದುರಸ್ತಿ, ರೂ.೨.೨೫ ಲಕ್ಷಗಳನ್ನು ಸಹಾಯಕ ತೋಟಗಾರಿಕೆ ನಿರ್ದೇಶಕರು (ಜಿಲ್ಲಾ ಪಂಚಾಯತ್) ಶಿರಾರವರ ಕಚೇರಿ ದುರಸ್ತಿಗಾಗಿ ವೆಚ್ಚ ಮಾಡಲಾಗಿದ್ದು, ಒಟ್ಟು ಈ ಯೋಜನೆಯಡಿಯಲ್ಲಿ ರೂ.೬.೭೫ ಲಕ್ಷಗಳನ್ನು ವೆಚ್ಚ ಮಾಡಲಾಗಿದೆ.

**ತೋಟಗಾರಿಕೆ ಕ್ಷೇತ್ರಗಳ ನಿರ್ವಹಣೆ:** ಈ ಯೋಜನೆಯಡಿ ತುಮಕೂರು ಜಿಲ್ಲೆಯ ಜಿಲ್ಲಾ ವಲಯ ವ್ಯಾಪ್ತಿಗೆ ಸೇರಿದ ನಾಲ್ಕು ತೋಟಗಾರಿಕೆ ಕ್ಷೇತ್ರಗಳಲ್ಲಿ ಉಳುಮೆ, ಗಿಡಗಳಿಗೆ ಪಾತಿ, ಗೊಬ್ಬರಕ್ಕಾಗಿ ರೂ. ಮೂರು ಲಕ್ಷಗಳನ್ನು ಖರ್ಚು ಮಾಡಲಾಗಿದೆ. ತೆಂಗು ಬೀಜ ಸಂಗ್ರಹಣೆ ಮತ್ತು ನರ್ಸರಿ ನಿರ್ವಹಣೆ:ಈ ಘಟಕದಡಿ ೨೪೨೩೦ ಉತ್ತಮ ಗುಣಮಟ್ಟದ ಬೀಜದ ತೆಂಗಿನಕಾಯಿ ಸಂಗ್ರಹಣೆ ಮಾಡಿ ಇಲಾಖಾ ನರ್ಸರಿಗಳಲ್ಲಿ ಬೆಳೆಸಿ ರೈತರಿಗೆ ಉತ್ಕೃಷ್ಟ ತೆಂಗಿನ ಗಿಡಗಳನ್ನು ಮಾರಾಟ ಮಾಡಲು ವ್ಯವಸ್ಥೆ ಮಾಡಲಾಗಿದೆ. ವಿವಿಧ ತೋಟಗಾರಿಕೆ ಕ್ಷೇತ್ರಗಳಲ್ಲಿನ ತೆಂಗಿನ ನರ್ಸರಿ ನಿರ್ವಹಣೆ ಸೇರಿ ಒಟ್ಟು ರೂ. ಮೂರು ಲಕ್ಷಗಳನ್ನು ಖರ್ಚು ಮಾಡಲಾಗಿದೆ.

**ಸಸ್ಯ ಸಂರಕ್ಷಣಾ ಪ್ರಯೋಗಾಲಯ:** ಈ ಘಟಕದಡಿ ಒಟ್ಟು ರೂ.೨.೫೦ ಲಕ್ಷರೂಗಳನ್ನು ಖರ್ಚು ಮಾಡಿ ರೂ.೧೦.೦೦ ಲಕ್ಷ ಗೋನಿಯೋಜಸ್ ಪರೋಪಜೀವಿಗಳನ್ನು ಉತ್ಪಾದಿಸಿ ತೆಂಗು ಬೆಳೆಗೆ ಬೀಳುವ ಕಪ್ಪು ತಲೆ ಹುಳಗಳನ್ನು ಹತೋಟಿ ಮಾಡಲು ರೈತರ ತೆಂಗಿನ ತೋಟಗಳಲ್ಲಿ ಬಿಡುಗಡೆ ಮಾಡಲಾಗಿದೆ. ರೂ.೦.೫೦ ಲಕ್ಷಗಳನ್ನು ಖರ್ಚು ಮಾಡಿ ಪ್ರಯೋಗಶಾಲೆಗೆ ಅಗತ್ಯ ಉಪಕರಣಗಳನ್ನು ಖರೀದಿಸಲಾಗಿದೆ.

**ಪ್ರಚಾರ ಮತ್ತು ಸಾಹಿತ್ಯ:** ಒಂದು ಲಕ್ಷ ರೂ.ಗಳ ವೆಚ್ಚದಲ್ಲಿ ಶ್ರೀ ಸಿದ್ದಗಂಗಾ ಜಾತ್ರೆಯ ಅಂಗವಾಗಿ ನಡೆದ ಸಿದ್ದಗಂಗಾ ಕೃಷಿ ಮತ್ತು ಕೈಗಾರಿಕಾ ವಸ್ತು ಪ್ರದರ್ಶನದಲ್ಲಿ ಮತ್ತು ಪಟ್ಟನಾಯಕನಹಳ್ಳಿ ಜಾತ್ರೆಯ ವಸ್ತು ಪ್ರದರ್ಶನದಲ್ಲಿ ಇಲಾಖಾ ಮಳಿಗೆಗಳನ್ನು ಸ್ಥಾಪಿಸಿ, ತೋಟಗಾರಿಕೆ ಬೆಳೆಗಳ ಪ್ರದರ್ಶಿಕೆಗಳನ್ನು ಪ್ರದರ್ಶಿಸಲಾಗಿದೆ. ರೈತ ಸಮುದಾಯಕ್ಕೆ ಇಲಾಖೆಯಿಂದ ದೊರೆಯುವ ಅನುಕೂಲಗಳ ಬಗ್ಗೆ ಮತ್ತು ತೋಟಗಾರಿಕೆ ಬೆಳೆ ಬೆಳೆಯುವ ಬಗ್ಗೆ ಹೆಚ್ಚಿನ ಪ್ರಚಾರ ನೀಡಲಾಗಿದೆ. ಮೂರು ಲಕ್ಷ ರೂ.ಗಳನ್ನು ಖರ್ಚು ಮಾಡಿ ಪ್ರದರ್ಶಿಕೆ (ಬ್ಲೋಅಪ್ಸ್) ಹಾಗೂ ಕರಪತ್ರಗಳನ್ನು ಮುದ್ರಿಸಿ ರೈತ ಸಮುದಾಯಕ್ಕೆ ಇಲಾಖೆಯಿಂದ ದೊರೆಯುವ ಸೌಲಭ್ಯಗಳ ವಿವರಗಳನ್ನು ಒದಗಿಸಲಾಗಿದೆ.

**ಶೀತಲ ಗೃಹಗಳಿಗೆ ಸಹಾಯಧನ:** ತೋಟಗಾರಿಕೆ ಉತ್ಪನ್ನಗಳನ್ನು ಶೇಖರಿಸುತ್ತಿರುವ ಶೀತಲ ಗೃಹಗಳ ಬಳಕೆಯ ವಿದ್ಯುತ್ತಲ್ಲಿ ಪ್ರತಿ ಯೂನಿಟ್‌ಗೆ ಒಂದು ರೂ. ರಂತೆ ಸಹಾಯಧನ ನೀಡಬೇಕಾಗಿದ್ದು, ಅದರಂತೆ ಗಾಯತ್ರಿ ಶೀತಲ ಗೃಹ (ಕೋಲ್ಡ್ ಸ್ಟೋರೇಜ್) ತುಮಕೂರು ಅವರಿಗೆ ಪ್ರಸಕ್ತ ಸಾಲಿನಲ್ಲಿ ರೂ.೦.೫೧ ಲಕ್ಷ ಹಣವನ್ನು ಸಹಾಯಧನವಾಗಿ ನೀಡಲಾಗಿದೆ.

**ಜೇನು ಕೃಷಿ:** ಈ ಯೋಜನೆಯಡಿ ಜೇನು ಕೃಷಿ ಸಹಾಯಕರಿಗೆ ಗೌರವ ಧನ ರೂ.೩.೩೦ ಲಕ್ಷ ಮತ್ತು ಜೇನು ಕೃಷಿ ತರಬೇತಿಗೆ ರೂ.೧.೭೦ಲಕ್ಷಗಳು ಒಟ್ಟು ಐದು ಲಕ್ಷ ರೂ.ಲಕ್ಷಗಳನ್ನು ವೆಚ್ಚ ಮಾಡಲಾಗಿದೆ. ರೈತರಿಗೆ ತೋಟಗಾರಿಕೆ **ತರಬೇತಿ:** ಈ ಯೋಜನೆಯಡಿ ೫೦೦ ರೈತರಿಗೆ ಅಣಬೆ ಬೇಸಾಯ, ಹಣ್ಣು ಮತ್ತು ತರಕಾರಿ ಸಂಸ್ಕರಣೆ, ಮನೆ-ತೋಟದಲ್ಲಿ ತರಕಾರಿ ಬೆಳೆಯುವ, ಜಾಮ್, ಜೆಲ್ಲಿ ಮತ್ತು ಕೆಚಪ್ ತಯಾರಿಸುವ ಬಗ್ಗೆ ಹಾಗೂ ತೋಟಗಾರಿಕೆ ಬೆಳೆಗಳ

ಆಧುನಿಕ ಬೇಸಾಯದ ಬಗ್ಗೆ ಅಲ್ಪಾವಧಿ ತರಬೇತಿ ನೀಡಿ ಜಿಲ್ಲೆಯಲ್ಲಿ ಪ್ರತಿ ಫಲಾನುಭವಿಗೆ ರೂ.೨೦೦/-ರಂತೆ ಒಟ್ಟು ಒಂದು ಲಕ್ಷ ರೂ. ಖರ್ಚು ಮಾಡಲಾಗಿದೆ.

**ವಿಶೇಷ ಘಟಕ ಯೋಜನೆ:** ಈ ಯೋಜನೆಯಡಿ ಪರಿಶಿಷ್ಟ ಜಾತಿಯ ಫಲಾನುಭವಿಗಳ ಜಮೀನಿನಲ್ಲಿ ಹಣ್ಣಿನ ತಾಕುಗಳ ನಿರ್ವಹಣೆ ಹಾಗೂ ೨೦೧೨-೧೩ನೇ ಸಾಲಿಗೆ ತೆಂಗು ಮತ್ತು ಹಣ್ಣಿನ ಬೆಳೆ ಬೆಳೆಯಲು ೨೪೯ ಮಂದಿ ರೈತರಿಗೆ ಆರ್ಥಿಕ ಸಹಾಯ ಮಾಡಲಾಗಿದೆ. ಒಟ್ಟು ರೂ.೪.೭೯ ಲಕ್ಷಗಳನ್ನು ವೆಚ್ಚ ಮಾಡಲಾಗಿರುತ್ತದೆ. ಗಿರಿಜನ ಉಪಯೋಜನೆ: ಈ ಯೋಜನೆಯಡಿ ಪರಿಶಿಷ್ಟ ಪಂಗಡದ ಫಲಾನುಭವಿಗಳ ಜಮೀನಿನಲ್ಲಿ ಹಣ್ಣಿನ ತಾಕುಗಳ ನಿರ್ವಹಣೆ ಹಾಗೂ ೨೦೧೨-೧೩ನೇ ಸಾಲಿಗೆ ತೆಂಗು ಮತ್ತು ಹಣ್ಣಿನ ಬೆಳೆ ಬೆಳೆಯಲು ೧೬೩ ಮಂದಿ ರೈತರಿಗೆ ಆರ್ಥಿಕ ಸಹಾಯ ಮಾಡಲಾಗಿದೆ. ಒಟ್ಟು ರೂ.೧.೫೬ ಲಕ್ಷದಷ್ಟು ವೆಚ್ಚ ಮಾಡಲಾಗಿರುತ್ತದೆ.

**ನೀರಾವರಿ ಯೋಜನೆ:** ಕೇಂದ್ರ ಸರ್ಕಾರದ ಅನುದಾನ ಮತ್ತು ರಾಜ್ಯ ಸರ್ಕಾರದ ಭಾಗಶ: ಅನುದಾನವನ್ನು ಒಳಗೊಂಡಂತೆ ತುಮಕೂರು ಜಿಲ್ಲೆಯ ತೋಟಗಾರಿಕೆ ಬೆಳೆಗಾರರಿಗೆ ೨೦೧೨-೧೩ನೇ ಸಾಲಿನಲ್ಲಿ ಹನಿ ನೀರಾವರಿ ಪದ್ಧತಿ ಅಳವಡಿಸಿದ ರೈತರಿಗೆ ಎರಡು ಹೆಕ್ಟೇರ್ ವರೆಗೆ ಶೇ.೮೦ ಹಾಗೂ ಎರಡು ಹೆಕ್ಟೇರ್ ಮೇಲ್ಪಟ್ಟು ಐದು ಹೆಕ್ಟೇರ್ ವರೆಗೆ ಶೇ.೫೦ ರಂತೆ ಹನಿ ನೀರಾವರಿ ಸಹಾಯಧನ ಪಾವತಿಸಲು ಒಟ್ಟು ರೂ.೩೦೮ ಲಕ್ಷಗಳ ವೆಚ್ಚ ಭರಿಸಿ, ೯೦೦ ಹೆಕ್ಟೇರ್ ವಿಸ್ತೀರ್ಣದ ತೋಟಗಾರಿಕೆ ಬೆಳೆಗಳಿಗೆ ಹನಿ ನೀರಾವರಿ ಅಳವಡಿಸಲಾಗಿದೆ.

**ತೆಂಗಿನಲ್ಲಿ ಸಂಯೋಜಿತ ಬೇಸಾಯ:** ಈ ಯೋಜನೆಯಡಿ ಹೊಸ ಪ್ರಾತ್ಯಕ್ಷತೆಗಳ ತಾಕುಗಳ ನಿರ್ಮಾಣ, ತೆಂಗಿನ ಬೆಳೆಯ ರೋಗ ಮತ್ತು ಕೀಟ ನಿರ್ವಹಣೆ, ರೈತ ಸಹಾಯಕರ ವೆಚ್ಚ ಭರಿಸುವುದು, ಹೊಸ ಪ್ರಾತ್ಯಕ್ಷತೆ ತಾಕುಗಳ ನಿರ್ಮಾಣ, ಹಳೆ ಪ್ರಾತ್ಯಕ್ಷತೆ ತಾಕುಗಳ ನಿರ್ವಹಣೆ ಮತ್ತು ತರಬೇತಿ ಕಾರ್ಯಕ್ರಮಗಳಿಗೆ ಒಟ್ಟು ರೂ.೧೬೪.೯೬ ಲಕ್ಷಗಳನ್ನು ವೆಚ್ಚ ಮಾಡಲಾಗಿದೆ. ತೋಟಗಾರಿಕೆ ವಿಸ್ತರಣೆ:ಈ ಯೋಜನೆಯಡಿ ವಿಷಯ ತಜ್ಞರು ಮತ್ತು ಗಣಕಯಂತ್ರ ನಿರ್ವಾಹಕರುಗಳನ್ನು ನೇಮಿಸಿಕೊಳ್ಳಲಾಗಿದೆ. ತೋಟಗಾರಿಕೆ ಬೆಳೆಗಳ ಕೃಷಿ ವಿಸ್ತರಣಾ ಕಾರ್ಯಕ್ಕೆ ಒಟ್ಟು ರೂ.೮.೩೦ ಲಕ್ಷ ವೆಚ್ಚ ಭರಿಸಲಾಗಿದೆ.

**ಇಲಾಖೆ ಪ್ರಯೋಗಶಾಲೆಗಳ ಅಭಿವೃದ್ಧಿ:** ಈ ಯೋಜನೆಯಡಿ ತರಕಾರಿ ಬೆಳೆಗಳ ಮಾದರಿಗಳನ್ನು ಸಂಗ್ರಹಿಸಲು ರೂ.೦.೫೦ ಲಕ್ಷಗಳ ವೆಚ್ಚ ಭರಿಸಲಾಗಿದೆ. ತೋಟಗಾರಿಕೆ ಬೆಳೆಗಳ ಕೀಟ ಮತ್ತು ರೋಗಗಳ ಸಮಗ್ರ ನಿಯಂತ್ರಣ: ಈ ಯೋಜನೆಯಡಿ ಗೋನಿಯೇಜಸ್ ಪರೋಪಜೀವಿಗಳ ಉತ್ಪಾದನೆ, ಸಿಬ್ಬಂದಿ ವೇತನ, ಮೂಲಭೂತ ಸೌಕರ್ಯ ನಿರ್ವಹಣೆ ಮತ್ತು ಮೇಲ್ವಿಚಾರಣೆ ಹಾಗೂ ಸಸ್ಯ ಸಂರಕ್ಷಣಾ ಔಷಧಿ ವಿತರಣೆ ಕಾರ್ಯಕ್ರಮಗಳಿಗೆ ಒಟ್ಟು ರೂ.೮.೭೦ ಲಕ್ಷಗಳ ವೆಚ್ಚ ಭರಿಸಲಾಗಿದೆ. ತೋಟಗಾರಿಕೆ ಉದ್ಯಾನವನಗಳು ಮತ್ತು ತೋಟಗಳು: ಉದ್ಯಾನವನ ಮತ್ತು ತೋಟಗಳ ನಿರ್ವಹಣಾ ಕಾರ್ಯಗಳನ್ನು ಕೈಗೊಳ್ಳಲಾಗಿದೆ. ಈ ಯೋಜನೆಯಡಿ ಮಾರ್ಚ್ ೨೦೧೩ರ ಅಂತ್ಯಕ್ಕೆ ಒಟ್ಟು ರೂ.೭೦ ಲಕ್ಷಗಳನ್ನು ವೆಚ್ಚ ಮಾಡಲಾಗಿದೆ.

**ಸಮಗ್ರ ತೋಟಗಾರಿಕೆ ಅಭಿವೃದ್ಧಿ ಯೋಜನೆ:** ಈ ಯೋಜನೆಯಡಿ ಹಣ್ಣು, ತರಕಾರಿ, ಹೂ ಮತ್ತು ತೋಟದ ಬೆಳೆಗಳ ಅಧಿಕ ಸಾಂದ್ರತೆ, ಸಮಗ್ರ ಬೇಸಾಯ ಕಾರ್ಯಕ್ರಮ, ತೋಟಗಾರಿಕೆ ಉತ್ಪನ್ನಗಳ ಸಂಸ್ಕರಣೆ ಮತ್ತು ಮೌಲ್ಯವರ್ಧನೆ ಕಾರ್ಯಕ್ರಮಗಳಿಗೆ ಒಟ್ಟು ರೂ.೩೪೯.೩೫ ಲಕ್ಷಗಳನ್ನು ವೆಚ್ಚ ಮಾಡಲಾಗಿದೆ.

ಸುವರ್ಣ ಭೂಮಿ ಯೋಜನೆ:ತೋಟಗಾರಿಕೆ ಚಟುವಟಿಕೆಗಳಿಗೆ ಸಂಬಂಧಿಸಿದಂತೆ ಈ ಯೋಜನೆಯಡಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ಹಾಗೂ ಇತರೆ ರೈತರಿಗೆ ಗರಿಷ್ಠ ಎರಡು ಎಕರೆ ಪ್ರದೇಶಕ್ಕೆ ರೂ.೧೦,೦೦೦ ಗಳನ್ನು ಪ್ರತಿ ಫಲಾನುಭವಿಗೆ ಎರಡು ಕಂತುಗಳಲ್ಲಿ (ರೂ.೫,೦೦೦ ಪ್ರತಿ ಕಂತು) ನೀಡಲಾಗಿರುತ್ತದೆ. ಪರಿಶಿಷ್ಟ ಜಾತಿ ಫಲಾನುಭವಿಗಳಿಗೆ ರೂ.೬೧.೯೨ ಲಕ್ಷ, ಪರಿಶಿಷ್ಟ ಪಂಗಡ ಫಲಾನುಭವಿಗಳಿಗೆ ರೂ.೩೨.೦೪ ಲಕ್ಷ ಹಾಗೂ ಇತರೆ ರೈತರಿಗೆ ರೂ.೩೧೧.೫೮ ಲಕ್ಷ ವೆಚ್ಚ ಭರಿಸಲಾಗಿರುತ್ತದೆ.

**ಗ್ರಾಮೋದ್ಯಮ ಯೋಜನೆ:** ಈ ಯೋಜನೆಯಡಿ ಜೇನು ಕೃಷಿ ತರಬೇತಿ ಹಾಗೂ ಜೇನು ಪೆಟ್ಟಿಗೆಗಳ ವಿತರಣೆ, ಜೇನು ಪೆಟ್ಟಿಗೆ ಹಾಗೂ ಕಾಲೋನಿಗಳ ಖರೀದಿ ಮತ್ತು ಮಧುವನಗಳ ಅಭಿವೃದ್ಧಿಗಾಗಿ ಒಟ್ಟು ರೂ.೬.೭೬ ಲಕ್ಷಗಳ ವೆಚ್ಚ ಭರಿಸಲಾಗಿದೆ.

**ರಾಷ್ಟ್ರೀಯ ಕೃಷಿ ವಿಕಾಸ ಯೋಜನೆ:** ಬಾಳೆಯಲ್ಲಿ ನಿಖರ ಬೇಸಾಯ ಯೋಜನೆಯಡಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ರೈತರು ಬೆಳೆದ ಒಟ್ಟು ಬಾಳೆ ಪ್ರದೇಶದ ನಿರ್ವಹಣೆಗೆ ರೂ.೫೭.೫೬ ಲಕ್ಷಗಳಷ್ಟು ವೆಚ್ಚ ಭರಿಸಲಾಗಿದೆ. ಯಾಂತ್ರೀಕರಣ ಘಟಕದಡಿಯಲ್ಲಿ ೮೦ ರೈತ ಫಲಾನುಭವಿಗಳಿಗೆ ರೂ.೮೦ ಲಕ್ಷದಷ್ಟು ವೆಚ್ಚ ಭರಿಸಲಾಗಿರುತ್ತದೆ. ಸಂರಕ್ಷಿತ ಬೇಸಾಯ ಕಾರ್ಯಕ್ರಮದಡಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ರೈತರಿಗೆ ಒಟ್ಟು ರೂ.೮೯.೫೦ ಲಕ್ಷಗಳನ್ನು ವೆಚ್ಚ ಮಾಡಲಾಗಿದೆ.

## ರಾಷ್ಟ್ರೀಯ ತೋಟಗಾರಿಕೆ ಮಿಷನ್ ಯೋಜನೆ

**ಹಣ್ಣಿನ ಬೆಳೆಗಳ ಅಭಿವೃದ್ಧಿ:** ತೋಟಗಾರಿಕೆ ಬೆಳೆಗಳ ಉತ್ಪಾದನೆ ಹಾಗೂ ಉತ್ಪಾದಕತೆಯನ್ನು ಹೆಚ್ಚಿಸಲುಬೆಳೆಗಳ ಪ್ರದೇಶವನ್ನು ವಿಸ್ತರಿಸುವುದು, ತೋಟಗಾರಿಕೆ ಮಿಷನ್ ಯೋಜನೆಯ ಮೂಲಭೂತ ಉದ್ದೇಶಗಳಲ್ಲಿ ಒಂದಾಗಿರುತ್ತದೆ. ತೋಟಗಾರಿಕೆ ಬೆಳೆಗಳ ಪ್ರದೇಶ ವಿಸ್ತರಣೆ ಮೂಲಕ ತೋಟಗಾರಿಕೆ ಬೆಳೆ ಮತ್ತು ಹೊಸ ತಳಿಗಳನ್ನು ಪರಿಚಯಿಸಿ ರೈತರ ಆದಾಯವನ್ನು ಹೆಚ್ಚಿಸುವುದರ ಜೊತೆಗೆ ತೋಟಗಾರಿಕೆ ಆಧಾರಿತ ಚಟುವಟಿಕೆಗಳನ್ನು ಸಹ ಅಭಿವೃದ್ಧಿ ಪಡಿಸುವುದರ ಅಗತ್ಯತೆ ಇದೆ. ಈ ಹಿನ್ನೆಲೆಯಲ್ಲಿ ಹಣ್ಣು, ಪುಷ್ಪ, ಸಾಂಬಾರು, ಔಷಧೀಯ ಹಾಗೂ ಸುಗಂಧಿತ ಬೆಳೆಗಳು, ಗೇರು ಮತ್ತು ಕೋಕೋ ಬೆಳೆಗಳ ಪ್ರದೇಶ ವಿಸ್ತರಣೆ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸಲು ಮತ್ತು ಜಿಲ್ಲೆಯಲ್ಲಿ ಸಮೂಹ ಮಾದರಿಯಲ್ಲಿ ತೋಟಗಾರಿಕೆ ಬೆಳೆಗಳನ್ನು ಅಭಿವೃದ್ಧಿಪಡಿಸಲು ಉದ್ದೇಶಿಸಲಾಗಿದೆ. ಹೊಸದಾಗಿ ನಾಟಿ ಮಾಡಿದ ಮಾವು, ಸಪೋಟ, ದಾಳಿಂಬೆ, ಮೊಸಂಬಿ, ಹಣ್ಣಿನ ಬೆಳೆಗಳಿಗೆ ಪ್ರತಿ ಹೆಕ್ಟೇರ್ ಗೆ ರೂ.೧೫,೪೪೨ ಗಳಂತೆ ಹಾಗೂ ಬಾಳೆ (ಗೆಡ್ಡೆಗಳು) ಬೆಳೆಗೆ ಪ್ರತಿ ಹೆಕ್ಟೇರ್ ಗೆ ರೂ.೧೬,೮೭೫ರಂತೆ ಹಾಗೂ ಬಾಳೆ (ಅಂಗಾಂಶ) ಪ್ರತಿ ಹೆಕ್ಟೇರ್ ಗೆ ರೂ.೩೧,೨೦೦ ಹಾಗೂ ಪಪ್ಪಾಯ ಬೆಳೆಗೆ ರೂ.೨೨,೫೦೦ ಸಹಾಯಧನವನ್ನು ರೈತರಿಗೆ ನೀಡಲಾಗಿದೆ. ಯೋಜನೆಯಡಿಯಲ್ಲಿ ಒಟ್ಟು ೧೯೦.೪೭ ಹೆಕ್ಟೇರ್‌ನಲ್ಲಿ ಹಣ್ಣಿನ ಬೆಳೆಗಳನ್ನು ಅಭಿವೃದ್ಧಿ ಪಡಿಸಿದ ರೈತರಿಗೆ ರೂ.೩೦.೩೯ ಲಕ್ಷ ಸಹಾಯಧನ ವಿತರಿಸಲಾಗಿದೆ.

**ವಾಣಿಜ್ಯ ಪುಷ್ಪಾಭಿವೃದ್ಧಿ:** ಈ ಕಾರ್ಯಕ್ರಮದಡಿಯಲ್ಲಿ ಬಿಡಿ ಹೂಗಳಾದ ಕನಕಾಂಬರ, ಮಲ್ಲಿಗೆ, ಸೇವಂತಿಗೆ ಹಾಗೂ ಆಸ್ಟರ್ ಹಾಗೂ ಗುಲಾಬಿ ಬೆಳೆಯುವ ಸಣ್ಣ ರೈತರಿಗೆ ಸಹಾಯಧನ ನೀಡಲಾಗುತ್ತಿದೆ. ಈ ಯೋಜನೆಯಲ್ಲಿ ೪೭ ಹೆಕ್ಟೇರ್ ಪ್ರದೇಶದಲ್ಲಿ ವಿವಿಧ ಹೂಗಳನ್ನು ಅಭಿವೃದ್ಧಿಪಡಿಸಿದ ರೈತರಿಗೆ ಒಟ್ಟು ರೂ.೫.೮೮ ಲಕ್ಷಗಳ ಸಹಾಯಧನವನ್ನು ವಿತರಿಸಲಾಗಿದೆ.

**ಸಸ್ಯ ಸಂರಕ್ಷಣೆ ಹಾಗೂ ಪೋಷಕಾಂಶ ನಿರ್ವಹಣೆ:** ಈ ವಿಭಾಗದಲ್ಲಿ ಸಮಗ್ರ ಕೀಟ ನಿಯಂತ್ರಣಕ್ಕಾಗಿ ಅರ್ಹ ಫಲಾನುಭವಿಗಳಿಗೆ ರೂ.೧,೦೦೦ ದಂತೆ ೧,೦೦೦ ಫಲಾನುಭವಿಗಳಿಗೆ ಕೀಟನಾಶಕ ಔಷಧಿಗಳನ್ನು ನೀಡಲಾಗಿದೆ. ಸಮಗ್ರ ಪೋಷಕಾಂಶ ನಿರ್ವಹಣೆಗೆ ರೂ.೧,೦೦೦ ದಂತೆ ೧,೦೦೦ ಫಲಾನುಭವಿಗಳಿಗೆ ಸಹಾಯಧನ ನೀಡಲಾಗಿದೆ.

**ಸಂರಕ್ಷಿತ ಬೇಸಾಯ:** ಈ ಕಾರ್ಯಕ್ರಮದಡಿ ಕತ್ತರಿಸುವ ಹೂವುಗಳು, ಬಣ್ಣದ ಮೆಣಸಿನಕಾಯಿ ಹಾಗೂ ತರಕಾರಿ ಸಸಿಗಳನ್ನು ಸಂರಕ್ಷಿತ ಬೇಸಾಯದಲ್ಲಿ ಬೆಳೆಯಲು ರೈತರಿಗೆ ಸಹಾಯಧನದ ಮೂಲಕ ಉತ್ತೇಜನ ನೀಡಲಾಗಿದೆ. ಒಟ್ಟು ರೂ.೧೧೦.೫೬ ಲಕ್ಷಗಳ ಸಹಾಯಧನ ನೀಡಲಾಗಿದೆ.

**ಮಾನವ ಸಂಪನ್ಮೂಲ ಅಭಿವೃದ್ಧಿ:** ತೋಟಗಾರಿಕೆ ಕ್ಷೇತ್ರದಲ್ಲಿ ಇತ್ತೀಚಿನ ದಿನಗಳಲ್ಲಿ ಅನೇಕ ನೂತನ ಆವಿಷ್ಕಾರಗಳಾಗಿದ್ದು, ಸದರಿ ಆವಿಷ್ಕಾರಗಳು/ತಂತ್ರಜ್ಞಾನಗಳ ಬಗ್ಗೆ ರೈತರು ಹಾಗೂ ಇಲಾಖಾ ಅಧಿಕಾರಿಗಳಿಗೆ ಆಗಿಂದಾಗ್ಗೆ ಅರಿವು ಮೂಡಿಸಲು ತರಬೇತಿ ಕಾರ್ಯಕ್ರಮಗಳು, ಶೈಕ್ಷಣಿಕ ಪ್ರವಾಸ, ವಿಚಾರ ಸಂಕಿರಣ/ಕಾರ್ಯಾಗಾರಗಳು ಮತ್ತು ಫಲಪುಷ್ಪ ಪ್ರದರ್ಶನಗಳನ್ನು ಏರ್ಪಡಿಸುವುದು ಅಗತ್ಯವಿರುತ್ತದೆ. ಈ ವಿಭಾಗದಲ್ಲಿ ೧,೬೮೯ ರೈತರಿಗೆ ರಾಜ್ಯದೊಳಗೆ ಅಲ್ಪಾವಧಿ ತರಬೇತಿ ಮತ್ತು ಒಂದು ದಿನದ ತರಬೇತಿಗಾಗಿ ರೂ.೧೬.೩೬ ಲಕ್ಷಗಳನ್ನು ವೆಚ್ಚ ಮಾಡಲಾಗಿದೆ (ಆಧುನಿಕ ತೋಟಗಾರಿಕೆ ಬಗ್ಗೆ ವಿಚಾರ ಸಂಕಿರಣ, ರೋಗ ಮತ್ತು ಕೀಟಗಳ ಹತೋಟಿ ಬಗ್ಗೆ ತಾಂತ್ರಿಕ ಮಾಹಿತಿಗಳು).

**ಕೃಷಿಹೊಂಡ:** ವಿವಿಧ ಮೂಲಗಳಿಂದ ನೀರನ್ನು ಸಂಗ್ರಹಿಸಿ ತೋಟಗಾರಿಕೆ ಬೆಳೆಗಳಿಗೆ ಸಂದಿಗ್ಧ ಹಂತಗಳಲ್ಲಿ ನೀರನ್ನು ಬಳಕೆ ಮಾಡಿ ಬೆಳೆಗಳ ಉತ್ಪಾದನೆ ಮತ್ತು ಉತ್ಪಾದಕತೆ ಹೆಚ್ಚಿಸಲು ಅನುಕೂಲವಾಗುವಂತೆ ಕೃಷಿ ಹೊಂಡ ನಿರ್ಮಿಸಲು ರೈತ ಫಲಾನುಭವಿಗಳಿಗೆ ರೂ.೨೦.೨೩ ಲಕ್ಷ ರೂಗಳ ಸಹಾಯಧನವನ್ನು ನೀಡಲಾಗಿದೆ.

**ಜೇನು ಸಾಕಾಣಿಕೆ:** ತೋಟಗಾರಿಕೆ ಬೆಳೆಯ ಉತ್ಪಾದಕತೆಯನ್ನು ಪರಾಗ ಸ್ಪರ್ಶದಿಂದ ಹೆಚ್ಚಿಸಲು ಜೇನು ಸಾಗಾಣಿಕೆಯನ್ನು ಉತ್ತೇಜಿಸುವ ಸಲುವಾಗಿ ರೈತರಿಗೆ ಜೇನು ಸಾಗಾಣಿಕೆ ಬಗ್ಗೆ ತರಬೇತಿ ನೀಡಿ ೩೧೬ ಜೇನು ಪೆಟ್ಟಿಗೆಗಳನ್ನು ವಿತರಿಸಲು ಒಟ್ಟು ರೂ.೪.೭೪ ಲಕ್ಷಗಳನ್ನು ಖರ್ಚು ಮಾಡಲಾಗಿದೆ.

**ಕೊಯ್ಲೋತ್ತರ ನಿರ್ವಹಣೆ:** ಕೊಯ್ಲಾದ ಹಣ್ಣು, ತರಕಾರಿ, ಪುಷ್ಪಗಳು ಹಾಗು ಇತರ ತೋಟಗಾರಿಕೆ ಪದಾರ್ಥಗಳನ್ನು ವಿಂಗಡಿಸಿ, ಅಗತ್ಯತೆಗೆ ತಕ್ಕಂತೆ ವೈಜ್ಞಾನಿಕ ರೀತಿಯಲ್ಲಿ ವಿವಿಧ ಪ್ರಕಾರದ ಕಂಟೈನರ್‌ಗಳಲ್ಲಿ ಪ್ಯಾಕ್ ಮಾಡುವ ಉದ್ದೇಶದಿಂದ ನಿರ್ಮಿಸಿದ, ಸುಸಜ್ಜಿತವಾದ ಕಟ್ಟಡಗಳನ್ನು ಪ್ಯಾಕ್ ಹೌಸ್ ಎಂದು ಕರೆಯಲಾಗುತ್ತದೆ. ಈ ರೀತಿಯಾದ ಪ್ಯಾಕ್‌ಹೌಸ್ ಗಳನ್ನು ನಿರ್ಮಿಸಿರುವ ೧೮ ಫಲಾನುಭವಿಗಳಿಗೆ ರೂ.೨೭ ಲಕ್ಷಗಳ ಸಹಾಯ ಧನ ನೀಡಲಾಗಿದೆ.

**ಯಾಂತ್ರೀಕರಣ:** ತೋಟಗಾರಿಕೆ ಬೆಳೆಗಳ ಚಟುವಟಿಕೆಗಾಗಿ ಟ್ರಾಕ್ಟರ್ ಖರೀದಿಸಿದ ೨೫ ರೈತರಿಗೆ ರೂ.೧೮.೩೦ ಲಕ್ಷಗಳ ಸಹಾಯಧನ ನೀಡಿ ಉತ್ತೇಜಿಸಲಾಗಿದೆ.

## ಮೀನುಗಾರಿಕೆ

ತುಮಕೂರು ಜಿಲ್ಲೆಯಲ್ಲಿ ಮೀನುಗಾರಿಕೆಗೆ ವಿಪುಲವಾದ ಅವಕಾಶಗಳು ಇರುತ್ತವೆ. ಕಲ್ಪತರು ನಾಡೆಂದು ಕರೆಯಲಾದ ತುಮಕೂರು ಜಿಲ್ಲೆಯನ್ನು ಕೆರೆಗಳ ಬೀಡೆಂದೂ ಸಹ ಕರೆಯಬಹುದು. ಕೆರೆಗಳಲ್ಲಿ ಮೀನುಗಾರಿಕೆ ಚಟುವಟಿಕೆಗಳನ್ನು ಕೈಗೊಳ್ಳಲು ಉತ್ತಮ ಅವಕಾಶವಿರುತ್ತದೆ. ಇತ್ತೀಚಿನ ವರ್ಷಗಳಲ್ಲಿ ಹೇಮಾವತಿ ನಾಲಾ ಪಾದಾರ್ಪಣೆ ಮಾಡಿರುವುದರಿಂದ ಮೀನುಗಾರಿಕೆ ಅಭಿವೃದ್ಧಿಗೆ ವಿಪುಲವಾದ ಅವಕಾಶಗಳನ್ನು ಕಲ್ಪಿಸಿದೆ. ಜಿಲ್ಲೆಗಳಲ್ಲಿನ ಕೆರೆಗಳನ್ನು ದೊಡ್ಡ ಮತ್ತು ಸಣ್ಣ ಕೆರೆಗಳೆಂದು ವಿಭಾಗಿಸಬಹುದು. ಹೆಚ್ಚುವರಿಯಾಗಿ ಮಾರ್ಕೊನಹಳ್ಳಿ ಮತ್ತು ಬೋರನ ಕಣಿವೆ ಜಲಾಶಯಗಳು ಮೀನುಗಾರಿಕೆಗೆ ಉತ್ತಮ ಮೂಲವಾಗಿರುತ್ತವೆ. ದೊಡ್ಡ ಕೆರೆಗಳಾದ ಕಡಬ, ಮಲ್ಲಘಟ್ಟ, ಚಂದ್ರಶೇಖರಪುರ, ಕಲ್ಲೂರು, ನಿಟ್ಟೂರು, ಮೈದಾಳ, ತುಂಬಡಿ, ಮಾವತ್ತೂರು, ತುರುವೇಕೆರೆ ಮತ್ತು ಕುಣಿಗಲ್–ದೊಡ್ಡಕೆರೆಗಳು ಮೀನುಗಾರಿಕೆಗೆ ಪ್ರಮುಖ ಕೆರೆಗಳಾಗಿರುತ್ತವೆ. ಕಾಟ್ಲಾ, ರೋಹು, ಮೃಗಾಲ್, ಹುಲ್ಲುಗೆಂಡೆ, ಬೆಳ್ಳಿಗೆಂಡೆ, ಸಾಮಾನ್ಯಗೆಂಡೆ, ತಿಲಾಖಿಯಾ, ಗಿರಲು, ಕುಚ್ಚು, ಕೊರವ,ಅವಲು, ಪಂಟಿಯಸ್, ಮಗುರ್, ಚೇಳುಮೀನು ಇತ್ಯಾದಿಗಳು ಸಾಮಾನ್ಯವಾಗಿ ಜಿಲ್ಲೆಯಲ್ಲಿ ಕಂಡುಬರುವ ಮೀನಿನ ತಳಿಗಳಾಗಿವೆ.

ಶಿರಾ ತಾಲೂಕಿನಲ್ಲಿ ೧೭೨ ಕೆರೆಗಳು, ಕುಣಿಗಲ್‌ನಲ್ಲಿ ೧೮೧, ಮಧುಗಿರಿಯಲ್ಲಿ ೧೯೩, ತುರುವೇಕೆರೆಯಲ್ಲಿ ೧೧೯, ಕೊರಟಗೆರೆಯಲ್ಲಿ ೧೪೪, ಚಿಕ್ಕನಾಯಕನಹಳ್ಳಿಯಲ್ಲಿ ೧೭೪, ಗುಬ್ಬಿಯಲ್ಲಿ ೧೯೪, ತಿಪಟೂರಿನಲ್ಲಿ ೧೬೭ ಪಾವಗಡದಲ್ಲಿ ೧೭೦ ಹಾಗೂ ತುಮಕೂರಿನಲ್ಲಿ ೨೧೨, ಈ ರೀತಿಯಾಗಿ ಜಿಲ್ಲೆಯಲ್ಲಿ ಒಟ್ಟು ೧,೭೨೧ ಕೆರೆಗಳಲ್ಲಿ ಮೀನುಗಾರಿಕೆ ಚಟುವಟಿಕೆಗಳನ್ನು ಕೈಗೊಳ್ಳಲಾಗುತ್ತಿದೆ. ನಲವತ್ತು ಹೆಕ್ಟೇರ್ ಗಿಂತ ಕಡಿಮೆ ಅಚ್ಚುಕಟ್ಟುಳ್ಳ ಕೆರೆಗಳನ್ನು ಆಯಾ ಗ್ರಾಮ ಪಂಚಾಯಿತಿಗಳೇ ನಿರ್ವಹಣೆ ಮಾಡುತ್ತವೆ. ಸದರಿ ಕೆರೆಗಳನ್ನು ಗುತ್ತಿಗೆ ನೀಡುವ ಹಾಗೂ ಹರಾಜು ಮೂಲಕ ವಿಲೇವಾರಿ ಮಾಡುವ ಕ್ರಿಯೆಯನ್ನು ನಿರ್ವಹಿಸಲಾಗುವುದಲ್ಲದೆ ಅಂತಹ ಕೆರೆಗಳಿಂದ ಬರುವಂತಹ ಆದಾಯವನ್ನು ಪಂಚಾಯತಿ ಅಭಿವೃದ್ಧಿ ಮತ್ತು ಗ್ರಾಮಾಭಿವೃದ್ಧಿ ಕಾರ್ಯಗಳಿಗೆ ವಿನಿಯೋಗಿಸಿಕೊಳ್ಳಲಾಗುವುದು. ಮೀನುಗಾರಿಕೆ ಇಲಾಖಾವತಿಯಿಂದ ಕೆರೆಗಳ ಅಭಿವೃದ್ಧಿ ಬಗ್ಗೆ ತಾಂತ್ರಿಕ ಸಲಹೆಯನ್ನು ನೀಡುವುದಲ್ಲದೆ ಕೆರೆಗಳಿಗೆ ಬೇಡಿಕೆಗನುಸಾರವಾಗಿ ಮೀನುಮರಿಗಳನ್ನು ಪೂರೈಸಲಾಗುತ್ತದೆ.

ಕೆರೆ,ಕಟ್ಟೆ, ಜಲಾಶಯಗಳಲ್ಲಿ ಉತ್ತಮ ಮೀನುಮರಿಗಳನ್ನು ವೈಜ್ಞಾನಿಕ ಪದ್ಧತಿ ಅನುಸಾರ ಬಿತ್ತನೆ ಮಾಡಿ ಹೆಚ್ಚು ಮೀನು ಬೆಳೆಯುವುದು ಹಾಗೂ ಪೌಷ್ಟಿಕ ಆಹಾರವನ್ನು ಹೆಚ್ಚು ಉತ್ಪಾದಿಸಿ ಸಾರ್ವಜನಿಕರಿಗೆ ಪೌಷ್ಟಿಕ ಆಹಾರ ಕೊರತೆ ನೀಗಿಸುವುದು ಮತ್ತು ಗ್ರಾಮೀಣ ಜನತೆಗೆ ಉದ್ಯೋಗಾವಕಾಶ ಕಲ್ಪಿಸಿಕೊಟ್ಟು ಆರ್ಥಿಕ ಹಾಗೂ ಸಾಮಾಜಿಕ ಜೀವನ ಮಟ್ಟವನ್ನು ಉತ್ತಮಪಡಿಸುವುದು ಮೀನುಗಾರಿಕೆ ಇಲಾಖೆಯ ಪ್ರಮುಖ ಉದ್ದೇಶಗಳಾಗಿವೆ. ಮೀನುಗಾರಿಕೆಯನ್ನು ಉಪ ಕಸುಬಾಗಿ ಕೈಗೊಂಡು ಸಣ್ಣ ಹಾಗೂ ಅತಿಸಣ್ಣ ರೈತರು, ಕೃಷಿ ಕಾರ್ಮಿಕರು, ಗ್ರಾಮೀಣ ಕುಶಲ ಕರ್ಮಿಗಳು, ಪರಿಶಿಷ್ಟಜಾತಿ ಮತ್ತು ವರ್ಗದ ಜನರು ಹಾಗೂ ಸಮಾಜದ ಇತರೆ ದುರ್ಬಲವರ್ಗದ ಜನರು ತಮ್ಮ ಆರ್ಥಿಕ ಪರಿಸ್ಥಿತಿಯನ್ನು ಉತ್ತಮಪಡಿಸಿಕೊಂಡಿರುತ್ತಾರೆ. ಈ ಮೇಲೆ ಹೇಳಿದ ವರ್ಗದ ಜನರ ಸೌಲಭ್ಯಕ್ಕಾಗಿ ಮೀನುಗಾರಿಕೆ ಇಲಾಖೆಯು ವಿವಿಧ ಅಭಿವೃದ್ಧಿ ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಕಾರ್ಯೋನ್ಮುಖವಾಗಿದೆ. ಇದರಲ್ಲಿ ಮೀನುಗಾರಿಕೆ ಫಾರಂ ನಿರ್ಮಿಸುವುದು, ಮೀನುಗಾರಿಕೆ ನರ್ಸರಿ ಪ್ರಾರಂಭಿಸುವುದು, ಕೆರೆಗಳಲ್ಲಿ ಮೀನುಸಾಕಣೆ ಅಭಿವೃದ್ಧಿಪಡಿಸುವುದು, ಮೀನುಗಾರಿಕೆ ತರಬೇತಿ

ನೀಡುವುದು, ಸ್ಥಳೀಯ ಮೀನುಗಾರರ ಸಹಕಾರ ಸಂಘ/ಸಂಸ್ಥೆಗಳಿಗೆ ಆರ್ಥಿಕ ನೆರವು ನೀಡುವುದು ಮತ್ತು ಮೀನುಗಾರಿಕೆಗೆ ಪೂರಕವಾದ ಉಪಕರಣಗಳನ್ನು ಕೊಳ್ಳಲು ದುರ್ಬಲ ವರ್ಗದವರಿಗೆ ನೆರವು ನೀಡುವ ಘಟಕಗಳು ಪ್ರಮುಖವಾಗಿವೆ. ಈ ಜಿಲ್ಲೆಯ ಒಳನಾಡು ಮೀನುಗಾರಿಕೆ ಸಂಪನ್ಮೂಲಗಳು ಕೆಳಕಂಡಂತಿವೆ (ಕೋಷ್ಟಕ ೪.೧೭).

**ಕೋಷ್ಟಕ ೪.೧೭: ಮೀನುಗಾರಿಕೆ ಸಂಪನ್ಮೂಲಗಳ ವಿವರಗಳು**

| ತಾಲೂಕು | ಮಂಜುಗೆಡ್ಡೆ ಕಾರ್ಖಾನೆಗಳು | | ಶೀತಲೀಕರಣ ಕೇಂದ್ರಗಳು | | ಮೀನುಗಾರಿಕೆಗೆ ಸಂಬಂಧಿಸಿದಂತೆ ಕೆರೆಗಳ ಸಂಖ್ಯೆ | | | ಜಲಾಶಯ ಗಳು | ಮೀನುಮರಿ ಮಾರುಕಟ್ಟೆ ಗಳು (ಸಂಖ್ಯೆ) |
|---|---|---|---|---|---|---|---|---|---|
| | ಸಂಖ್ಯೆ | ಸಾಮರ್ಥ್ಯ ಮೆ.ಟನ್ | ಸಂಖ್ಯೆ | ಸಾಮರ್ಥ್ಯ ಮೆ.ಟನ್ | ಪಂಚಾಯತ್ ರಾಜ್ ಸಂಸ್ಥೆಗೆ ಸೇರಿದ ಕೆರೆಗಳು | ಸಣ್ಣ ನೀರಾವರಿಗೆ ಸೇರಿದ ಕೆರೆಗಳು | ಒಟ್ಟು | | |
| ಚಿಕ್ಕ ನಾಯಕನಹಳ್ಳಿ | – | – | – | – | ೧೪೨ | ೩೨ | ೧೭೪ | – | ೨ |
| ಗುಬ್ಬಿ | – | – | – | – | ೧೫೬ | ೩೮ | ೧೯೪ | – | ೩ |
| ಕೊರಟಗೆರೆ | – | – | – | – | ೧೧೦ | ೩೪ | ೧೪೪ | ೧ | ೩ |
| ಕುಣಿಗಲ್ | – | – | – | – | ೧೪೪ | ೩೭ | ೧೮೧ | ೧ | ೨ |
| ಮಧುಗಿರಿ | – | – | – | – | ೧೫೪ | ೩೯ | ೧೯೩ | – | ೨ |
| ಪಾವಗಡ | – | – | – | – | ೧೩೫ | ೩೫ | ೧೭೦ | – | ೩ |
| ತಿಪಟೂರು | ೧ | ೪,೧೦೦ | – | – | ೧೩೭ | ೩೦ | ೧೬೭ | – | ೨ |
| ತುಮಕೂರು | ೧ | ೮,೦೦೦ | ೧ | ೫ | ೧೬೧ | ೫೧ | ೨೧೨ | – | ೩ |
| ತುರುವೇಕೆರೆ | – | – | – | – | ೯೮ | ೨೧ | ೧೧೯ | – | ೩ |
| ಶಿರಾ | – | – | – | – | ೧೧೯ | ೫೩ | ೧೭೨ | – | ೩ |
| ಜಿಲ್ಲಾ ಮೊತ್ತ | ೨ | ೧೨,೦೦೦ | ೧ | ೫ | ೧೩೫೬ | ೩೭೦ | ೧೭೨೬ | ೨ | ೨೬ |

**ಮೂಲ: ತುಮಕೂರು ಜಿಲ್ಲೆಯ ಅಂಕಿ–ಅಂಶಗಳ ನೋಟ, ಜಿಲ್ಲಾ ಸಂಖ್ಯಾ ಸಂಗ್ರಹಣಾಧಿಕಾರಿಗಳ ಕಛೇರಿ, ತುಮಕೂರು ೨೦೧೧–೧೨.**

ಕೆರೆಗಳ ಜಲಾವೃತ ಪ್ರದೇಶಗಳಲ್ಲಿ ಉತ್ತಮ ತಳಿಯ ಮೀನುಗಳಾದ ಕಾಟ್ಲಾ, ರೋಹು, ಮೃಗಾಲ್, ಸಾಮಾನ್ಯ ಗೆಂಡೆ, ಬೆಳ್ಳಿಗೆಂಡೆ ಮತ್ತು ಹುಲ್ಲುಗೆಂಡೆ ಮೀನುಮರಿಗಳನ್ನು ತಾಂತ್ರಿಕವಾಗಿ ಆಧುನಿಕ ಪದ್ದತಿಯಲ್ಲಿ ಬಿತ್ತನೆ ಮಾಡಿ ಸಾಕಾಣಿಕೆ ಮಾಡಲಾಗುತ್ತದೆ. ಸರ್ವಕಾಲಿಕ ಮತ್ತು ದೀರ್ಘಾವಧಿ ನೀರುಳ್ಳ ಕೆರೆಗಳ ಮೀನು ಪಾಶುವಾರು ಹಕ್ಕನ್ನು ಟೆಂಡರ್ ಹರಾಜು ಮೂಲಕ ಹಾಗೂ ಅಲ್ಪಾವಧಿ ನೀರುಳ್ಳ ಕೆರೆಗಳನ್ನು ವಾರ್ಷಿಕ ಹರಾಜುಗಳ ಮೂಲಕ ವಿಲೇವಾರಿ ಮಾಡಲಾಗುತ್ತದೆ. ಇದರ ಜೊತೆಗೆ ಗ್ರಾಮ ಪಂಚಾಯತಿಗಳಿಗೆ ಮೀನುಗಾರರ ಸಹಕಾರ ಸಂಘಗಳಿಗೆ ಮತ್ತು ಇತರೆ ಸಂಘ ಸಂಸ್ಥೆಗಳಿಗೆ ಮೀನು ಪಾಶವಾರು ಹಕ್ಕನ್ನು ಗುತ್ತಿಗೆ ಆಧಾರದ ಮೇಲೆ ನೀಡಲಾಗುತ್ತದೆ.

ಜಿಲ್ಲೆಯ ಎರಡು ತಾಲೂಕುಗಳಲ್ಲಿ ಎಂಬತ್ತೆರಡು ಮೀನುಮರಿ ಪಾಲನಾ ಕೊಳಗಳಲ್ಲಿ ೨೦೧೧–೧೨ನೇ ಸಾಲಿನಲ್ಲಿ ೧೮.೨೮ ಲಕ್ಷ ಮೀನುಮರಿಗಳನ್ನು ಪಾಲನೆ ಮಾಡಿ ವಿತರಿಸಲಾಗಿದೆ. ಮೀನುಗಾರಿಕೆ ಇಲಾಖೆಯಡಿ ಮಾರ್ಕೋಹಳ್ಳಿ ಮೀನು ಮರಿ ಉತ್ಪಾದನಾ ಕೇಂದ್ರ ಮತ್ತು ಮೀನು ಕೃಷಿಕರ ಅಭಿವೃದ್ಧಿ ಸಂಸ್ಥೆಯಡಿ ಊರುಕೆರೆ ಮೀನುಮರಿ ಉತ್ಪಾದನಾ ಕೇಂದ್ರಗಳು ಕಾರ್ಯನಿರ್ವಹಿಸುತ್ತಿವೆ. ಖಾಸಗಿ ಮೀನುಮರಿ ಉತ್ಪಾದನಾ ಕೇಂದ್ರಗಳಾದ ಶ್ರೀ ಮಂಜುನಾಥ ಮೀನುಮರಿ ಉತ್ಪಾದನಾ ಕೇಂದ್ರ, ಚಿಕ್ಕನಹಳ್ಳಿ, ಶಿರಾ ತಾಲೂಕು ಹಾಗೂ ಶ್ರೀ ರಾಘವೇಂದ್ರ ಮೀನುಮರಿ ಉತ್ಪಾದನಾ ಕೇಂದ್ರ, ಮೆಳೆಕೋಟೆ, ತುಮಕೂರು ತಾಲೂಕು, ಮೀನುಮರಿಗಳ ಉತ್ಪಾದನೆಯನ್ನು ಕೈಗೊಂಡಿವೆ. ಜಿಲ್ಲೆಯಲ್ಲಿ ಒಟ್ಟು ಇಪ್ಪತ್ತೊಂದು ಮೀನುಗಾರರ ಸಹಕಾರ ಸಂಘಗಳು ಕಾರ್ಯನಿರ್ವಹಿಸುತ್ತಿವೆ. ೨೦೧೧–೧೨ನೇ ಸಾಲಿನಲ್ಲಿ ಒಟ್ಟು ೧೬,೮೨೧.೬೩ ಮೆ. ಟನ್ ಮೀನು ಉತ್ಪಾದನೆ ಮಾಡಲಾಗಿದೆ.

**ಅಭಿವೃದ್ಧಿ ಯೋಜನೆಗಳು**

೧. **ಮೀನುಮರಿ ಉತ್ಪಾದನೆ ಪಾಲನೆ ಮತ್ತು ವಿತರಣೆ:** ಜಿಲ್ಲೆಯಲ್ಲಿನ ಮೀನುಮರಿ ಬೇಡಿಕೆಯನ್ನು ಪೂರೈಸುವ ಸಲುವಾಗಿ ಸರ್ಕಾರಿ ಹಾಗೂ ಖಾಸಗಿ ಮೀನುಮರಿ ಉತ್ಪಾದನಾ ಕೇಂದ್ರಗಳಿಂದ ಸುಧಾರಿತ ಜಾತಿಯ ಮೀನುಮರಿಗಳನ್ನು ಆಯಾತ ಮಾಡಿಕೊಂಡು ತಾಲೂಕು ಮಟ್ಟದ ನರ್ಸರಿಗಳಲ್ಲಿ ಪಾಲನೆ ಮಾಡಲಾಗುತ್ತದೆ. ೨೦೧೧-೧೨ನೇ ವರ್ಷದಲ್ಲಿ ೧೮.೨೮ ಲಕ್ಷ ಬಿತ್ತನೆ ಮರಿ ಪೂರೈಸಿದೆ.

೨. **ಬಾವಿ ಮತ್ತು ಹೊಂಡಗಳಲ್ಲಿ ಮೀನುಗಾರಿಕೆ ಅಭಿವೃದ್ಧಿಗೆ ಸಹಾಯ:** (ಅ) ಹೆಚ್ಚು ಜನರನ್ನು ಮೀನುಗಾರಿಕೆ ಅಭಿವೃದ್ಧಿ ವ್ಯಾಪ್ತಿಯಲ್ಲಿ ತರುವ ಉದ್ದೇಶದಿಂದ ಮೀನುಗಾರಿಕೆ ಬಗ್ಗೆ ಆಸಕ್ತಿ ಮೂಡಿಸಲು ಅವರ ಸ್ವಂತ ಜಮೀನಿನ ಕೆರೆ, ಕೊಳ ಬಾವಿಗಳಿಗೆ ಸಾಂಕೇತಿಕವಾಗಿ ಸಾಮಾನ್ಯಗೆಂಡೆ ಬಿತ್ತನೆ ಮರಿ ಬಿತ್ತಿ ಅದರಿಂದ ಮೀನು ಉತ್ಪಾದನೆಯನ್ನು ಸ್ವಂತಕ್ಕೆ ಬಳಸಿಕೊಂಡು ಮೀನುಗಾರಿಕೆಯಲ್ಲಿ ಸಕ್ರಿಯರನ್ನಾಗಿಸಲು ಪ್ರತಿ ಬಾವಿಕೊಳಕ್ಕೆ ೨೫೦ ಬಿತ್ತನೆ ಮರಿಯಂತೆ ಒಟ್ಟು ೧,೦೦೦ ಫಲಾನುಭವಿಗಳಿಗೆ ಒಟ್ಟು ೨.೫೦ ಲಕ್ಷ ಸಾಮನ್ಯಗೆಂಡೆ ಬಿತ್ತನೆ ಮರಿ ವಿತರಿಸಿದೆ.(ಆ)ಹುಲ್ಲುಗೆಂಡೆ ಬಿತ್ತನೆ ಮರಿ ಖರೀದಿಗೆ ಸಹಾಯ: ಜಿಲ್ಲೆಯ ಕೆರೆಗಳಲ್ಲಿ ಜಲ ಕಳೆಗಳನ್ನು ನಿಯಂತ್ರಿಸಲು ಮತ್ತು ಜನಾರೋಗ್ಯ ಕಾಪಾಡಲು ಜಲಸಸ್ಯ ಭಕ್ಷಕ ಹುಲ್ಲುಗೆಂಡೆ ಮೀನುಮರಿ ಬಿತ್ತನೆಗೆ ಶೇ.೫೦ ರ ಸಹಾಯಧನ ಯೋಜನೆಯಡಿ ಜಿಲ್ಲೆಯ ೧೦ ಫಲಾನುಭವಿಗಳಿಗೆ ೪೫ ೨೦೦ ರೂ.ಗಳ ಸಹಾಯಧನ ವಿತರಿಸಿದೆ.

೩. **ವಸ್ತು ಪ್ರದರ್ಶನ ಮತ್ತು ತರಬೇತಿ:** ಮೀನುಗಾರಿಕೆ ಇಲಾಖೆಯ ಚಟುವಟಿಕೆ, ಮೀನು ಅಭಿವೃದ್ಧಿಯ ಆರ್ಥಿಕ ವಿಶ್ಲೇಷಣೆ ಕುರಿತಂತೆ ಸಾರ್ವಜನಿಕರಲ್ಲಿ ತಿಳಿವಳಿಕೆ ಮೂಡಿಸಲು ವಸ್ತು ಪ್ರದರ್ಶನ ಕಾರ್ಯಕ್ರಮದಲ್ಲಿ ಬಿತ್ತಿಚಿತ್ರಗಳು, ವಿವಿಧ ಜಾತಿಯ ಆಹಾರ ಜನ್ಯ ಮೀನುಗಳು, ಅಲಂಕಾರಿಕ ಮೀನುಗಳ ಪ್ರದರ್ಶನವನ್ನೇರ್ಪಡಿಸಲಾಗುತ್ತದೆ. ೨೦೧೧-೧೨ನೇ ಸಾಲಿನಲ್ಲಿ ಇಲಾಖಾವತಿಯಿಂದ ಕನ್ನಡ ರಾಜ್ಯೋತ್ಸವದಲ್ಲಿ ಸ್ತಬ್ಧ ಚಿತ್ರ ರೂಪಿಸಿ ಭಾಗವಹಿಸಿದೆ ಹಾಗೂ ಸಿದ್ಧಗಂಗಾ ಕೃಷಿ ಕೈಗಾರಿಕಾ ವಸ್ತು ಪ್ರದರ್ಶನ ಮತ್ತು ಪಟ್ಟನಾಯಕನಹಳ್ಳಿ ಕೃಷಿ ಮತ್ತು ಕೈಗಾರಿಕಾ ವಸ್ತು ಪ್ರದರ್ಶನ ಸಂದರ್ಭಗಳಲ್ಲಿ ಮಳಿಗೆ ತೆರೆದು ಸಾರ್ವಜನಿಕರಿಗೆ ಮಾಹಿತಿ ಒದಗಿಸಿದೆ. ಅಕ್ವೇರಿಯಂ ನಿರ್ವಹಣೆ ಸಹ ಕೈಗೊಂಡಿದೆ. ಸದರಿ ಯೋಜನೆಯಡಿ ನಾಲ್ಕು ಲಕ್ಷ ರೂ.ಗಳ ಅನುದಾನ ಬಿಡುಗಡೆಯಾಗಿದ್ದು ಮಾರ್ಚ್ ಅಂತ್ಯದವರೆಗೆ ರೂ.೩.೮೪ ಲಕ್ಷ ವೆಚ್ಚ ಭರಿಸಿದೆ.

೪. **ಮೀನು ಮಾರುಕಟ್ಟೆ ಮತ್ತು ಮತ್ಸ್ಯವಾಹಿನಿಗೆ ಸಹಾಯಧನ:** ಮೀನು ಹಿಡಿದು ಮಾರಾಟ ಮಾಡುವ ಮೀನುಗಾರರಿಗೆ ಅವರು ಹಿಡಿದ ಮೀನು ಕೆಡದಂತೆ ತ್ವರಿತವಾಗಿ ಮೀನು ಮಾರಾಟ ಮಾಡಲು ಬೈಸಿಕಲ್ ಹಾಗೂ ಶಾಖನಿರೋಧಕ ಪೆಟ್ಟಿಗೆ ಒದಗಿಸಲು ಈ ಯೋಜನೆಯಡಿ ಒಂದು ಲಕ್ಷ ರೂ.ಗಳ ಅನುದಾನದಲ್ಲಿ ಶೇ.೫೦ ಸಹಾಯಧನ ಯೋಜನೆಯಡಿ ೫೦ ಜನ ಮೀನುಗಾರರಿಗೆ ಒಂದು ಲಕ್ಷ ರೂ.ಗಳ ವೆಚ್ಚ ಭರಿಸಲಾಗಿದೆ.

೫. **ಮೀನುಗಾರಿಕೆ ಕಟ್ಟಡಗಳು ಮತ್ತು ಸೌಲಭ್ಯಗಳ ನಿರ್ಮಾಣ ನಿರ್ವಹಣೆ:** ಸದರಿ ಯೋಜನೆಯಡಿ ಮೀನುಗಾರಿಕೆ ಸಹಾಯಕ ನಿರ್ದೇಶಕರು (ಶ್ರೇಣಿ-೨) ತಿಪಟೂರು, ಕಾವಲುಗಾರರ ವಸತಿ ಗೃಹ ನಿರ್ಮಾಣ, ಪಾವಗಡ ಹಾಗೂ ಚಿಕ್ಕನಾಯಕನಹಳ್ಳಿ ಕಚೇರಿ ಕಟ್ಟಡಗಳ ದುರಸ್ತಿ ಕಾರ್ಯಗಳನ್ನು ರೂ. ೪.೯೫ ಲಕ್ಷ ವೆಚ್ಚದಲ್ಲಿ ಪೂರ್ಣಗೊಳಿಸಿದೆ.

೬. **ಮೀನುಗಾರಿಕೆ ಅಭಿವೃದ್ಧಿ ಸಂಸ್ಥೆಗೆ ಸಹಾಯಧನ:** ಈ ಯೋಜನೆಯಡಿ ಮೀನುಮರಿ ಖರೀದಿಸಲು ಹಾಗೂ ಮೀನುಗಾರಿಕೆ ಸಲಕರಣೆ ಕಿಟ್ ವಿತರಣೆಗೆ ಅನುದಾನ ಒದಗಿಸಿಕೊಳ್ಳಲಾಗಿದೆ. ಇತರೆ ವರ್ಗದ ಮೀನುಗಾರರು, ಪರಿಶಿಷ್ಟಜಾತಿ ಮತ್ತು ಪಂಗಡದ ಮೀನುಗಾರರಿಗೆ ಸಹಾಯಧನ ಒದಗಿಸಲಾಗಿದೆ. ಒಟ್ಟು ೨೮೦ ಫಲಾನುಭವಿಗಳು ರೂ.೧೪ ಲಕ್ಷಗಳ ವೆಚ್ಚದಲ್ಲಿ ಮೀನುಗಾರಿಕೆ ಸಲಕರಣೆ ಕಿಟ್ ಮತ್ತು ಮೀನುಮರಿಗಳನ್ನು ಪಡೆದಿರುತ್ತಾರೆ.

೭. ಕೆರೆಗಳ ವಿಲೇವಾರಿ:ಇಲಾಖೆ ವ್ಯಾಪ್ತಿಯ ದೊಡ್ಡ ಕೆರೆಗಳ ಮೀನು ಪಾಶುವಾರು ಹಕ್ಕನ್ನು ಟೆಂಡರ್-ಯಾ-ಹರಾಜು ಮೂಲಕ ವಿಲೇವಾರಿ ಮಾಡಿ ಕೆರೆಗಳ ಹಕ್ಕನ್ನು ಸಾರ್ವಜನಿಕರಿಗೆ ವಹಿಸಿಕೊಟ್ಟು ಸದರಿ ಕೆರೆಗಳಲ್ಲಿ ಗರಿಷ್ಠ ಪ್ರಮಾಣದ ಮೀನು ಮರಿ ಬಿತ್ತನೆ ಮಾಡಿ ಮೀನಿನ ರೂಪದಲ್ಲಿ ಆಹಾರ ಉತ್ಪಾದಿಸುವ ಉದ್ದೇಶ ಹೊಂದಿರುತ್ತದೆ. ೨೦೧೧-೧೨ನೇ ಸಾಲಿನಲ್ಲಿ ೯೯೫ ಕೆರೆಗಳಲ್ಲಿ ೧೨೫.೭೫ ಲಕ್ಷ ಮರಿ ಬಿತ್ತನೆ ಮಾಡಲಾಗಿದೆ. ಈ ಮೂಲಕ ಕೆರೆಗಳನ್ನು ವಿಲೇ ಮಾಡಿ ರೂ. ೩೧.೪೨ ಲಕ್ಷ ನೇರ ಆದಾಯಗಳಿಸಿದೆ.

೮. **ಸುವರ್ಣ ಭೂಮಿ ಯೋಜನೆ:** ೨೦೧೧-೧೨ನೇ ಸಾಲಿನಲ್ಲಿ ಸುವರ್ಣ ಯೋಜನೆಯಡಿ ಮೀನು ಕೃಷಿಕೊಳ ನಿರ್ಮಿಸಿಕೊಳ್ಳುವ ಸಲುವಾಗಿ ಪರಿಶಿಷ್ಟಜಾತಿಯ ೧೮೯ ಜನರಿಗೆ ರೂ. ೯.೪೫ಲಕ್ಷಗಳನ್ನು ಪರಿಶಿಷ್ಟ ಪಂಗಡಕ್ಕೆ ಸೇರಿದ ೯೪ ಜನರಿಗೆ ರೂ.೪.೭೦ ಲಕ್ಷ ಹಾಗೂ ಇತರೆ ವರ್ಗದ ೭೫೦ ಜನರಿಗೆ ರೂ.೩೭.೫೦ ಲಕ್ಷಗಳನ್ನು ಪಾವತಿಸಲಾಗಿದೆ.

೯. **ಮತ್ಸ್ಯಾಶ್ರಯ ಯೋಜನೆ:** ೨೦೧೧-೧೨ನೇ ಸಾಲಿನ ಮತ್ಸ್ಯಾಶ್ರಯ ಯೋಜನೆಯಡಿ ನಿರ್ವಸತಿ ಮೀನುಗಾರರಿಗೆ ಮನೆ ನಿರ್ಮಿಸಿಕೊಳ್ಳಲು ತಲಾ ರೂ. ೬೦,೦೦೦ ಗಳಂತೆ ಜಿಲ್ಲೆಯ ೬೦ ಜನರಿಗೆ ಸಹಾಯಧನ ಮಂಜೂರು ಮಾಡಿದೆ.

೧೦. **ಕೆರೆಗಳ ವಿಲೇವಾರಿ ಯೋಜನೆ:** ನಲವತ್ತು ಹೆಕ್ಟೇರ್ ಒಳಗಿನ ಅಚ್ಚುಕಟ್ಟುವುಳ್ಳ ಕೆರೆಗಳನ್ನು ಗ್ರಾಮ ಪಂಚಾಯಿತಿಗಳಿಗೆ ಸರ್ಕಾರದ ಆದೇಶದಂತೆ ವರ್ಗಾಯಿಸಿದೆ. ಸದರಿ ಕೆರೆಗಳಲ್ಲಿ ೧೫.೦೦ ಲಕ್ಷ ಮೀನುಮರಿಗಳನ್ನು ಬೇಡಿಕೆಗನುಗುಣವಾಗಿ ಇಲಾಖೆವತಿಯಿಂದ ಸರಬರಾಜು ಮಾಡಿದೆ. ಇದರಿಂದ ಜಿಲ್ಲೆಯ ಗ್ರಾಮಪಂಚಾಯಿತಿಗಳ ಆರ್ಥಿಕ ಮಟ್ಟ ಉತ್ತಮಗೊಂಡಿದೆ.

೧೧. **ವಿಶೇಷ ಘಟಕ ಯೋಜನೆ:** ತಾಲೂಕು ಪಂಚಾಯಿತಿ ನಿಧಿಯಡಿಯಲ್ಲಿ ಜಿಲ್ಲೆಯ ೧೧೯ ಪರಿಶಿಷ್ಟ ಜಾತಿ ಹಾಗೂ ೪೨ ಪರಿಶಿಷ್ಟ ಪಂಗಡದ ರೈತರು ಸೇರಿದಂತೆ ಒಟ್ಟು ೧೬೧ ಫಲಾನುಭವಿಗಳಿಗೆ ತಲಾ ರೂ.೩೦೦೦ ವೆಚ್ಚದಲ್ಲಿ ಮೀನು ಹಿಡಿಯುವ ಬಲೆಗಳನ್ನು ಶೇ.೧೦೦ರ ಸಹಾಯಧನದಡಿ ವಿತರಿಸಿದೆ. ಇದಕ್ಕೆ ರೂ. ೫.೦೪ ಲಕ್ಷ ವೆಚ್ಚ ಭರಿಸಿದೆ.

## ಪಶುಪಾಲನಾ ಮತ್ತು ಪಶುವೈದ್ಯ ಸೇವೆ

ಗ್ರಾಮೀಣ ಜನಜೀವನದಲ್ಲಿ ವ್ಯವಸಾಯ ಮತ್ತು ಪಶುಪಾಲನೆ ಒಂದಕ್ಕೊಂದು ಅವಲಂಬಿತವಾಗಿರುವ ಎರಡು ಪ್ರಮುಖ ಘಟಕಗಳು. ರಾಜ್ಯದ ಆರ್ಥಿಕ ಅಭಿವೃದ್ಧಿಯಲ್ಲಿ ಪಶುಸಂಪತ್ತಿನ ಪಾತ್ರ ಬಹಳ ಮಹತ್ವದ್ದಾಗಿದೆ. ಸಾಮಾನ್ಯವಾಗಿ ಬೃಹತ್ ಪ್ರಮಾಣದ ಗ್ರಾಮೀಣ ಜನತೆ ತಮ್ಮ ಜೀವನೋಪಾಯಕ್ಕಾಗಿ ವ್ಯವಸಾಯ ಮತ್ತು ಪಶುಪಾಲನೆಯನ್ನೇ ಅವಲಂಭಿಸಿದ್ದಾರೆ. ಸುಧಾರಿಸಿದ ಪಶುಪಾಲನಾ ಮತ್ತು ಕೃಷಿ ಚಟುವಟಿಕೆಗಳ ಲಾಭವು ರಾಜ್ಯದ ಗ್ರಾಮೀಣ ಪ್ರದೇಶಗಳಲ್ಲಿ ನೆಲೆಸಿರುವ ಜನತೆಗೆ ಲಭಿಸುತ್ತಿದ್ದು, ಗ್ರಾಮೀಣ ಆರ್ಥಿಕಾಭಿವೃದ್ಧಿಯಲ್ಲಿ ಜಾನುವಾರುಗಳು ಹೆಚ್ಚಿನ ಪ್ರಮುಖತೆ ಹೊಂದಿವೆ. ಕೃಷಿ ಚಟುವಟಿಕೆಗಳಾದ ಉಳುಮೆ, ಬಿತ್ತನೆ, ಅಂತರ ಬೇಸಾಯ, ಕಳೆ ನಿರ್ವಹಣೆ, ಕೃಷಿ ಉತ್ಪನ್ನಗಳ ಸಾಗಾಣಿಕೆ ಇತ್ಯಾದಿಗಳಿಗೆ ಈಗಲೂ ಜಾನುವಾರುಗಳು ಅತ್ಯವಶ್ಯಕ ಹಾಗೂ ಅನಿವಾರ್ಯವೂ ಆಗಿದೆ.

'ಹಳ್ಳಿಕಾರ್' ಸಮುದಾಯಕ್ಕೆ ಸೇರಿದ ಜಾನುವಾರು ತಳಿವರ್ಧಕ ವೃತ್ತಿಯ ಕಾರ್ಯದಲ್ಲಿ ತೊಡಗಿಸಿಕೊಂಡಿರುವ ಕುಟುಂಬಗಳನ್ನು ಶ್ರೀರಂಗಪಟ್ಟಣಕ್ಕೆ ವಿಜಯನಗರ ಸಾಮ್ರಾಜ್ಯದ ಆಡಳಿತಗಾರರೊಬ್ಬರು ಕರೆತಂದರೆಂಬ ಅಭಿಪ್ರಾಯ ಇದೆ. ಈ ಸಮುದಾಯವು ಅವರ ಜೊತೆಯಲ್ಲಿ ಕರೆತಂದ ಉತ್ಕೃಷ್ಟ ಜಾನುವಾರುಗಳನ್ನು 'ಹಳ್ಳಿಕಾರ್' ತಳಿಗಳೆಂದು ಕರೆಯಲಾಯಿತು. ಈ ತಳಿಯು ತುಮಕೂರು ಜಿಲ್ಲೆಯೂ ಸೇರಿದಂತೆ ಅಂದಿನ ಮೈಸೂರು ರಾಜ್ಯದಲ್ಲಿ ಕೃಷಿ ಚಟುವಟಿಕೆಗಾಗಿ ಬಳಸಿಕೊಳ್ಳುತ್ತಿದ್ದ ಪ್ರಸಿದ್ಧ ಜಾನುವಾರುಗಳ ಅಭಿವೃದ್ಧಿಗೆ ಸಂಬಂಧಿಸಿದಂತೆ ಮೂಲ ತಳಿಗಳಾದವು. ತದನಂತರ 'ಅಮೃತಮಹಲ್' ತಳಿಗಳ ಅಭಿವೃದ್ಧಿಗೆ ಈ ತಳಿಗಳು ನಾಂದಿಯಾದವು.

ವಿಜಯನಗರ ಆಡಳಿತಗಾರರ ಕಾಲದಲ್ಲಿ ಪಶುಸಂಗೋಪನಾ ಇಲಾಖೆಯನ್ನು ·ಕರುಹಟ್ಟಿ ಸಾರ್ವಜನಿಕ ಸಂಸ್ಥೆಯೆಂದು ಕರೆಯಲಾಗುತ್ತಿತ್ತು. ರಾಜ್ಯದ ವಿವಿಧೆಡೆ ಪ್ರತ್ಯೇಕ ಹುಲ್ಲುಗಾವಲುಗಳನ್ನು ಪಶುಪಾಲನಾ ಕೇಂದ್ರಕ್ಕೆ ನಿಗದಿಪಡಿಸುವುದರ ಮೂಲಕ ಮೈಸೂರಿನ ಒಡೆಯರ್ ಮನೆತನದವರು ಈ ತಳಿಗಳ ಅಭಿವೃದ್ಧಿಗೆ ಕ್ರಮಕೈಗೊಂಡರು. ಚಿಕ್ಕದೇವರಾಜ ಒಡೆಯರ್ ರವರ ಆಳ್ವಿಕೆಯ ಸಂದರ್ಭದಲ್ಲಿ ಪಶುಪಾಲನಾ ಅಭಿವೃದ್ಧಿ ಕೇಂದ್ರಗಳ ಸ್ಥಾಪನೆಗೆ ಆದ್ಯತೆ ನೀಡಲಾಯಿತು ಮತ್ತು ಈ ಅವಧಿಯಲ್ಲಿ ಸರ್ಕಾರದ ಈ ಕೇಂದ್ರಗಳನ್ನು ·ಬೆಣ್ಣೆ ಚಾವಡಿ ಎಂದು ಕರೆಯಲಾಗುತ್ತಿತ್ತು. ಹುಟ್ಟಿದ ದಿನಾಂಕ ಮತ್ತು ಆಡಳಿತಗಾರರ ಹೆಸರಿನ ಮೊದಲ ಅಕ್ಷರದೊಂದಿಗೆ ದನಗಳಿಗೆ ಮುದ್ರೆ ಹಾಕುತ್ತಿದ್ದರು. ಹೈದರಾಲಿಯು ವಿಶೇಷವಾಗಿ ಎತ್ತುಗಳನ್ನು ಅವುಗಳ ಸಾಮರ್ಥ್ಯ ಮತ್ತು ವೇಗದಿಂದಾಗಿ ಯುದ್ಧ ಸಂದರ್ಭಗಳಲ್ಲಿ ಸಾಮಾಗ್ರಿಗಳ ಸಾಗಾಣಿಕೆಗಾಗಿ ಬಳಸುತ್ತಿದ್ದನು. ರಾಜ್ಯದ ವಿವಿಧೆಡೆ ಅವನು ಸುಮಾರು ೬೦,೦೦೦ ಎತ್ತುಗಳ ನಿರ್ವಹಣೆಯನ್ನು ಮಾಡುತ್ತಿದ್ದನೆಂದು ಹೇಳಲಾಗಿದೆ.

ಟಿಪ್ಪುಸುಲ್ತಾನನ ಆಳ್ವಿಕೆಯ ಕಾಲದಲ್ಲಿ ಪಶುಸಂಗೋಪನಾ ಇಲಾಖೆಯನ್ನು ಸ್ಥಿರವಾಗಿ ಸ್ಥಾಪಿಸಲಾಯಿತು ಮತ್ತು ಅದರ ಹೆಸರನ್ನು 'ಬೆಣ್ಣೆ ಚಾವಡಿ'ಯಿಂದ 'ಅಮೃತಮಹಲ್' ಇಲಾಖೆಯೆಂದು ಬದಲಾಯಿಸಿದನು. ೧೭೯೯ರ ನಂತರ ಇಲಾಖೆಯು ನಿರ್ಲಕ್ಷ್ಯಕ್ಕೆ ಒಳಪಟ್ಟಿತು. ೧೮೯೬–೯೭ರವರೆಗೆ ಇಲಾಖೆಯು ಪ್ರತ್ಯೇಕ ತಾಂತ್ರಿಕ ಅಧಿಕಾರಿಯ ನೆರವನ್ನು ಹೊಂದಿದ್ದ ಸರ್ಕಾರದ ಮಿಲಿಟರಿ ಸಹಾಯಕನೊಬ್ಬನ ಆಡಳಿತಕ್ಕೊಳಪಟ್ಟಿತು. ಸರ್ಕಾರವು ೧೮೯೭ರಲ್ಲಿ ಇಲಾಖೆಗೆ ಸೂಪರಿಂಟೆಂಡೆಂಟ್ ನೇಮಕಕ್ಕೆ ಮಂಜೂರಾತಿ ನೀಡಿತು ಮತ್ತು ಸರ್ಕಾರದ ಮಿಲಿಟರಿ ಇಲಾಖೆಯ ಅಧಿಕಾರ ಮತ್ತು ನಿರ್ದೇಶನದ ವ್ಯಾಪ್ತಿಯಲ್ಲಿ ಸದರಿ ವ್ಯವಸ್ಥೆಯನ್ನು ತರಲಾಯಿತು. ೧೯೧೫–೧೬ರಲ್ಲಿ, ಮೈಸೂರು ರಾಜ್ಯದ ಮುಖ್ಯ ಅಧಿಪತಿ ವ್ಯಾಪ್ತಿಗೆ ಇಲಾಖೆಯ ಅಧಿಕಾರ ಮತ್ತು ನಿರ್ದೇಶನವನ್ನು ವರ್ಗಮಾಡಲಾಯಿತು. ನಂತರ ೧೯೨೩ರಲ್ಲಿ ಕೃಷಿ ಇಲಾಖೆಗೆ ವರ್ಗ ಮಾಡಲಾಯಿತು. ಅದರ ನಂತರ ಕೃಷಿ ಇಲಾಖೆಯ ಅಡಿಯಲ್ಲಿ ಸ್ಥಾಪಿಸಲಾದ ಸಾರ್ವಜನಿಕ ಪಶುವೈದ್ಯಕೀಯ ಇಲಾಖೆಗೆ ವಿಲೀನಗೊಳಿಸಲಾಯಿತು. ತರುವಾಯ ೧೯೪೪ರಲ್ಲಿ ಸೃಜಿಸಿದ ಸ್ವತಂತ್ರ್ಯ ಪಶುಸಂಗೋಪನೆ ಇಲಾಖೆಯ ಭಾಗವಾಯಿತು.

ತುಮಕೂರು ಜಿಲ್ಲೆಯು ದನಗಳ ಜಾತ್ರೆ ಮತ್ತು ಪ್ರದರ್ಶನಕ್ಕೆ ಹೆಸರುವಾಸಿಯಾಗಿದೆ. ಜಾತ್ರೆಗಳು ವರ್ಷದ ನವೆಂಬರ್ ತಿಂಗಳಲ್ಲಿ ಪ್ರಾರಂಭವಾಗಿ ಏಪ್ರಿಲ್ ತಿಂಗಳಲ್ಲಿ ಕೊನೆಗೊಳ್ಳುತ್ತವೆ. ಗೋಸಂವರ್ಧನ ತಾಲೂಕು ಕೇಂದ್ರಗಳಲ್ಲಿ ವಾರದಲ್ಲಿ ಒಂದು ದಿನದ ದನಗಳ ಪ್ರದರ್ಶನವನ್ನು ಎಲ್ಲಾ ತಾಲೂಕುಗಳಲ್ಲಿ ತಪ್ಪದೆ ಏರ್ಪಡಿಸಲಾಗುತ್ತಿತ್ತು. ಪ್ರತಿವರ್ಷ ಹಳ್ಳಿಕಾರ್ ಹೋರಿಗಳ ಪ್ರದರ್ಶನವನ್ನು ಗುಬ್ಬಿ ತಾಲೂಕಿನಲ್ಲಿ ಏರ್ಪಡಿಸಲಾಗುತ್ತದೆ ಮತ್ತು ಈ ಪ್ರದರ್ಶನವು ಜಿಲ್ಲೆಯ ಪಶು ಸಂಗೋಪನಾ ಚಟುವಟಿಕೆಗಳಲ್ಲಿ ಅತ್ಯಂತ ವೈಶಿಷ್ಟ್ಯವಾಗಿದೆ. ಪ್ರಮುಖವಾದ ದನಗಳ ಜಾತ್ರೆಗಳೆಂದರೆ ತುಮಕೂರಿನ ಸಿದ್ದಗಂಗಾ ಮಠದ ಆವರಣದಲ್ಲಿ ನಡೆಯುವ ದನಗಳ ಜಾತ್ರೆ, ಕುಣಿಗಲ್ ತಾಲೂಕಿನ ಎಡೆಯೂರು ದನಗಳ ಜಾತ್ರೆ, ಕೊರಟಗೆರೆ ತಾಲೂಕಿನ ಕ್ಯಾಮೇನಹಳ್ಳಿ ದನಗಳ ಜಾತ್ರೆ, ಪಾವಗಡ ತಾಲೂಕಿನ ನಾಗಲಮಡಿಕೆ ಮತ್ತು ಹರಿಹರಪುರ ದನಗಳ ಜಾತ್ರೆ, ಶಿರಾ ತಾಲೂಕಿನ ತಾವರೆಕೆರೆ ಮತ್ತು ಪಟ್ಟನಾಯಕನಹಳ್ಳಿ ದನಗಳ ಜಾತ್ರೆ, ಗುಬ್ಬಿ ತಾಲೂಕಿನ ಗುಬ್ಬಿ, ಕಲ್ಲೂರು ಮತ್ತು ಚೇಳೂರು ದನಗಳ ಜಾತ್ರೆ, ತುರುವೇಕೆರೆ ಹಾಗೂ ಮತಿಘಟ್ಟ ದನಗಳ ಜಾತ್ರೆಗಳು. ಈ ಜಾತ್ರೆಗಳ ಸಂದರ್ಭಗಳಲ್ಲಿ ಪಶು ಸಂಗೋಪನೆ ಮತ್ತು ವೈದ್ಯಕೀಯ ಸೇವಾ ಇಲಾಖೆಯು ಜಾತ್ರೆಗೆ ಬರುವಂತಹ ದನಗಳಿಗೆ ವೈದ್ಯಕೀಯ ಸೌಲಭ್ಯಗಳನ್ನು ಕಲ್ಪಿಸುತ್ತದೆ ಮತ್ತು ಪಶು ವೈದ್ಯಕೀಯ ಕ್ಷೇತ್ರದಲ್ಲಾಗಿರುವ ಸಂಶೋಧನಾ ಫಲಿತಾಂಶಗಳನ್ನು ಉಪನ್ಯಾಸ, ಬಿತ್ತಿಪತ್ರಗಳು, ಛಾಯಾಚಿತ್ರಗಳ ಮೂಲಕ ಪ್ರಚಾರ ಮಾಡುತ್ತದೆ.

ಜಾನುವಾರು ಆರೋಗ್ಯ ರಕ್ಷಣೆ ಹಾಗೂ ಸಂಪತ್ತಿನ ಅಭಿವೃದ್ಧಿಗೆ ಸಂಬಂಧಿಸಿದಂತೆ ವಿವಿಧ ಕಾರ್ಯಗಳನ್ನು ಅನುಷ್ಠಾನಗೊಳಿಸಲು ೨೩೩ ಪಶು ಸಂಸ್ಥೆಗಳಿರುತ್ತವೆ. ರೈತಾಪಿ ಜನರ ಆರ್ಥಿಕ ಅಭಿವೃದ್ಧಿಗಾಗಿ ಇಲಾಖೆಯು ಹಲವು ಕಾರ್ಯಕ್ರಮಗಳನ್ನು ಹಮ್ಮಿಕೊಂಡಿರುತ್ತದೆ. ಅಲ್ಲದೆ ಜಿಲ್ಲೆಯಲ್ಲಿ ಪಶುವೈದ್ಯಕೀಯ ಪರೀಕ್ಷಕರ ತರಬೇತಿ ಕೇಂದ್ರ, ಹಳ್ಳಿಕಾರ್ ತಳಿ ಅಭಿವೃದ್ಧಿ ಕ್ಷೇತ್ರ ಹಾಗೂ ಕುರಿ ಮಂಡಳಿ ಘಟಕಗಳು ಕಾರ್ಯನಿರ್ವಹಿಸುತ್ತಿವೆ. ೧೮ನೇ ಜಾನುವಾರು ಗಣತಿ ಪ್ರಕಾರ ಜಿಲ್ಲೆಯಲ್ಲಿ ೫,೮೯,೨೨೬ ದನಗಳು, ೨,೪೧,೯೦೭ ಎಮ್ಮೆಗಳು, ೧೦,೬೭,೭೧೯ ಕುರಿಗಳು, ೫,೧೭,೭೬೩ ಮೇಕೆಗಳು, ೭,೧೧,೨೭೩ ಕೋಳಿಗಳು ಹಾಗೂ ೭,೭೧೮ ಹಂದಿಗಳು ಪಶು ಸಂಪತ್ತಿನ ಗಣತಿಯಲ್ಲಿದ್ದು, ಕುರಿಗಳ ಸಂಖ್ಯೆಯಲ್ಲಿ ರಾಜ್ಯದಲ್ಲಿ ಮೊದಲನೆಯ ಸ್ಥಾನ ಹೊಂದಿರುತ್ತದೆ.

**ಕೋಷ್ಟಕ ೪.೧೮: ೨೦೦೭ ರ ಜಾನುವಾರು ಗಣತಿಯನ್ವಯ ತಾಲೂಕುವಾರು ಜಾನುವಾರುಗಳ ವಿವರಗಳು**

| ತಾಲೂಕು | ದನಕರುಗಳು | | | | ಎಮ್ಮೆಗಳು | ಕುರಿಗಳು | | | |
|---|---|---|---|---|---|---|---|---|---|
| | ಸ್ಥಳೀಯ | ವಿದೇಶಿ ತಳಿ | ಮಿಶ್ರ ತಳಿ | ಒಟ್ಟು | | ಸ್ಥಳೀಯ | ವಿದೇಶಿ ತಳಿ | ಮಿಶ್ರ ತಳಿ | ಒಟ್ಟು |
| ಚಿಕ್ಕ ನಾಯಕನಹಳ್ಳಿ | ೫೫,೯೯೯ | – | ೮,೫೨೫ | ೬೪,೫೨೪ | ೧೭,೮೦೧ | ೧೦೮,೭೪೯ | – | – | ೧೦೮,೭೪೯ |
| ಗುಬ್ಬಿ | ೪೯,೯೪೮ | – | ೧೩,೮೭೮ | ೬೩,೮೨೬ | ೨೬,೧೯೫ | ೮೫,೧೨೫ | – | – | ೮೫,೧೨೫ |
| ಕೊರಟಗೆರೆ | ೩೧,೫೯೬ | – | ೧೩,೧೮೬ | ೪೪,೭೮೨ | ೯,೮೭೦ | ೪೨,೧೯೫ | – | – | ೪೨,೧೯೫ |

| | | | | | | | | | |
|---|---|---|---|---|---|---|---|---|---|
| ಕುಣಿಗಲ್ | ೫೭,೨೧೬ | – | ೧೬,೭೭೪ | ೭೩,೯೯೦ | ೩೨,೩೦೯ | ೯೭,೯೭೧ | – | ೧೪ | ೯೭,೯೮೫ |
| ಮಧುಗಿರಿ | ೨೭,೩೭೭ | – | ೨೧,೮೮೨ | ೪೯,೨೫೯ | ೧೯,೧೨೧ | ೭೫,೨೯೨ | ೨೨ | – | ೭೫,೩೧೪ |
| ಪಾವಗಡ | ೫೧,೪೭೮ | – | ೧೦,೭೬೯ | ೬೨,೨೪೭ | ೩೬,೦೧೧ | ೧೪೦,೯೫೧ | – | ೬,೪೮೧ | ೧೪೭,೪೩೨ |
| ಶಿರಾ | ೪೬,೯೯೦ | – | ೪,೪೮೮ | ೫೧,೪೭೮ | ೨೮,೦೧೩ | ೩೪೪,೮೩೫ | – | ೫ | ೩೪೪,೮೪೦ |
| ತಿಪಟೂರು | ೩೯,೯೫೭ | – | ೧೯,೩೯೧ | ೫೯,೩೪೮ | ೨೦,೬೯೭ | ೫೮,೭೮೮ | – | ೬೧ | ೫೮,೮೪೯ |
| ತುಮಕೂರು | ೫೫,೩೭೫ | – | ೨೩,೪೪೮ | ೭೮,೮೨೩ | ೨೨,೯೪೭ | ೫೩,೨೩೯ | – | ೪ | ೫೩,೨೪೩ |
| ತುರುವೇಕೆರೆ | ೩೨,೧೦೦ | – | ೮,೮೪೯ | ೪೦,೯೪೯ | ೨೮,೯೪೩ | ೫೩,೯೮೭ | – | – | ೫೩,೯೮೭ |
| ಜಿಲ್ಲಾ ಮೊತ್ತ | ೪೪೮,೦೩೬ | – | ೧೪೧,೧೯೦ | ೫೪೯,೨೨೬ | ೨೪೧,೯೦೭ | ೧೦,೬೧,೧೩೨ | ೨೨ | ೬,೫೬೫ | ೧೦,೬೭,೭೧೯ |

## ಕೋಷ್ಟಕ ೪.೧೯: ೨೦೦೭ ರ ಜಾನುವಾರು ಗಣತಿಯನ್ವಯ ತಾಲೂಕುವಾರು ಜಾನುವಾರುಗಳ ವಿವರಗಳು

| ತಾಲೂಕು | ಮೇಕೆಗಳು | ಹಂದಿಗಳು | | | | ಮೊಲಗಳು | ನಾಯಿಗಳು | ಒಟ್ಟು ಜಾನುವಾರುಗಳು | ಒಟ್ಟು ಕೋಳಿಗಳು |
|---|---|---|---|---|---|---|---|---|---|
| | | ಸ್ಥಳೀಯ | ವಿದೇಶಿ ತಳಿ | ಮಿಶ್ರ ತಳಿ | ಒಟ್ಟು | | | | |
| ಚಿಕ್ಕ ನಾಯಕನಹಳ್ಳಿ | ೩೨,೪೬೦ | ೪೪೯ | – | – | ೪೪೯ | ೧೩ | ೬,೮೦೮ | ೨೩೧,೩೭೩ | ೩೬,೭೫೦ |
| ಗುಬ್ಬಿ | ೫೩,೨೩೨ | ೧೪೧ | – | – | ೧೪೧ | ೧೧ | ೯,೩೩೫ | ೨೩೮,೨೭೭ | ೬೮,೪೦೮ |
| ಕೊರಟಗೆರೆ | ೪೬,೨೯೦ | ೭೭೨ | – | ೨೫ | ೭೯೭ | ೧ | ೫,೧೭೫ | ೧೪೯,೧೩೨ | ೪೪,೯೮೧ |
| ಕುಣಿಗಲ್ | ೭೭,೫೬೫ | ೫೫೮ | – | – | ೫೫೮ | ೬ | ೧೦,೭೮೯ | ೨೯೩,೩೬೧ | ೧೨೧,೨೬೫ |
| ಮಧುಗಿರಿ | ೪೩,೯೦೭ | ೨,೩೯೩ | ೪೩ | ೮೮ | ೨,೫೨೪ | ೧೦ | ೫,೯೪೬ | ೧೯೬,೧೭೭ | ೪೬,೨೬೭ |
| ಪಾವಗಡ | ೧೦೨,೪೦೦ | ೯೪೬ | – | – | ೯೪೬ | – | ೯,೧೬೦ | ೩೫೮,೯೫೦ | ೮೩,೮೯೭ |
| ಶಿರಾ | ೬೦,೫೦೩ | ೭೫೪ | – | ೧ | ೭೫೫ | ೬ | ೧೬,೨೮೮ | ೫೦೭,೭೯೦ | ೧೦೨,೧೧೫ |
| ತಿಪಟೂರು | ೨೮,೪೫೯ | ೪೫೯ | – | ೧೬ | ೪೭೫ | – | ೭,೪೬೯ | ೧೭೫,೭೧೨ | ೫೭,೩೫೮ |
| ತುಮಕೂರು | ೪೪,೭೦೪ | ೬೪೫ | – | ೧೪ | ೬೫೯ | ೭೩ | ೧೫,೩೫೯ | ೨೧೫,೮೨೨ | ೭೮,೭೨೮ |
| ತುರುವೇಕೆರೆ | ೨೮,೨೪೩ | ೪೧೪ | – | – | ೪೧೪ | ೧ | ೩,೮೧೦ | ೧೫೭,೧೩೩ | ೭೧,೫೦೪ |
| ಜಿಲ್ಲಾ ಮೊತ್ತ | ೫೧೭,೭೬೩ | ೭,೫೩೧ | ೪೩ | ೧೪೪ | ೭,೭೧೮ | ೧೨೧ | ೯೦,೧೧೯ | ೨೫,೨೩,೭೨೭ | ೭೧೧,೨೭೩ |

## ಕೋಷ್ಟಕ ೪.೨೦: ೨೦೦೭ ರ ಜಾನುವಾರು ಗಣತಿಯನ್ವಯ ತಾಲೂಕುವಾರು ಜಾನುವಾರುಗಳ ವಿವರಗಳು

| ತಾಲೂಕು | ಪಶು ಆಸ್ಪತ್ರೆಗಳು | ಚಿಕಿತ್ಸಾಲಯಗಳು | ಪ್ರಾಥಮಿಕ ಪಶು ವೈದ್ಯ ಕೇಂದ್ರಗಳು | ಸಂಚಾರಿ ಚಿಕಿತ್ಸಾಲಯಗಳು | ಕೃತಕ ಗರ್ಭಧಾರಣಾ ಕೇಂದ್ರಗಳು | ಇತರೆ | ಒಟ್ಟು |
|---|---|---|---|---|---|---|---|
| ಚಿಕ್ಕ ನಾಯಕನಹಳ್ಳಿ | ೨ | ೮ | ೧೦ | ೧ | – | – | ೨೧ |
| ಗುಬ್ಬಿ | ೨ | ೧೩ | ೯ | ೧ | – | – | ೨೫ |
| ಕೊರಟಗೆರೆ | ೨ | ೬ | ೮ | ೧ | ೨ | – | ೧೯ |
| ಕುಣಿಗಲ್ | ೨ | ೧೪ | ೩ | ೧ | ೯ | – | ೨೯ |
| ಮಧುಗಿರಿ | ೧ | ೧೪ | ೭ | ೧ | ೧ | – | ೨೪ |

| | | | | | | | |
|---|---|---|---|---|---|---|---|
| ಪಾವಗಡ | ೧ | ೬ | ೮ | ೧ | ೨ | – | ೧೮ |
| ಶಿರಾ | ೩ | ೧೨ | ೮ | ೧ | ೨ | – | ೨೬ |
| ತಿಪಟೂರು | ೨ | ೭ | ೬ | ೧ | – | – | ೧೬ |
| ತುಮಕೂರು | ೧ | ೧೪ | ೧೬ | ೧ | – | – | ೩೨ |
| ತುರುವೇಕೆರೆ | ೨ | ೯ | ೧೦ | ೧ | – | – | ೨೨ |
| ಜಿಲ್ಲಾ ಮೊತ್ತ | ೧೮ | ೧೦೩ | ೮೫ | ೧೦ | ೧೬ | – | ೨೩೨ |

ತುಮಕೂರು ಪಶು ಆಸ್ಪತ್ರೆ ಪಾಲಿಕ್ಲಿನಿಕ್ ವಿಭಾಗದಲ್ಲಿ ಕ್ಷ ಕಿರಣ ಘಟಕವು ಉತ್ತಮವಾಗಿ ಕೆಲಸ ನಿರ್ವಹಿಸುತ್ತಿದ್ದು, ಸಣ್ಣ ಪ್ರಾಣಿಗಳಲ್ಲಿ ಕೆಲವು ಖಾಯಿಲೆಗಳಿಗೆ ನಿರ್ದಿಷ್ಟವಾದ ಚಿಕಿತ್ಸೆ ನೀಡಲು ಅನುಕೂಲವಾಗುತ್ತಿದೆ. ಕಡತಗಳ ಸುಗಮ ಹಾಗೂ ತುರ್ತು ವಿಲೇವಾರಿಗಾಗಿ ಗಣಕೀಕರಣ ಯಂತ್ರವನ್ನು ಉಪನಿರ್ದೇಶಕರ ಕಛೇರಿಯಲ್ಲಿ ಅಳವಡಿಸಲಾಗಿದೆ. ಜಿಲ್ಲೆಯ ಅಂಕಿ–ಅಂಶಗಳ ಅನ್ವಯ (೨೦೧೧–೧೨) ಪಶುಚಿಕಿತ್ಸಾ ಸಂಸ್ಥೆಗಳ ವಿವರ: ಒಟ್ಟು ೧೮ ಪಶುವೈದ್ಯ ಆಸ್ಪತ್ರೆಗಳು, ೧೦೪ ಪಶು ಚಿಕಿತ್ಸಾಲಯಗಳು, ೮೫ ಪ್ರಾಥಮಿಕ ಪಶುಚಿಕಿತ್ಸಾಲಯಗಳು, ೧೦ ಸಂಚಾರಿ ಪಶು ಚಿಕಿತ್ಸಾಲಯಗಳು ಮತ್ತು ೧೬ ಕೃತಕ ಗರ್ಭಧಾರಣಾ ಉಪಕೇಂದ್ರಗಳು ಕಾರ್ಯನಿರ್ವಹಿಸುತ್ತಿವೆ.

ಇತರೆ ಸಂಸ್ಥೆಗಳಡಿಯಲ್ಲಿ ತಲಾ ಒಂದು ಕೋಳಿ ವಿಸ್ತರಣಾ ಕೇಂದ್ರ, ಕುರಿ ಪೋಷಕರ ಸಂಘ, ದೊಡ್ಡರೋಗ ತಡೆ ಉಕ್ಕಡ, ದೊಡ್ಡರೋಗ ನಿವಾರಣಾ ಯೋಜನೆ ಕೇಂದ್ರ, ವಿಶೇಷ ಜಾನುವಾರು ತಳಿ ಅಭಿವೃದ್ಧಿ ಯೋಜನೆ, ಪಶುವೈದ್ಯಕೀಯ ಪರೀಕ್ಷಕರ ತರಬೇತಿ ಕೇಂದ್ರ (ರಾಜ್ಯವಲಯ), ಕುರಿ ಅಭಿವೃದ್ಧಿ ಮಂಡಳಿ ಮತ್ತು ಹಳ್ಳಿಕಾರ್ ತಳಿ ಸಂವರ್ಧನಾ ಕೇಂದ್ರ ಕುಣಿಕೇನಹಳ್ಳಿ, ತುರುವೇಕೆರೆ ತಾಲೂಕು (ರಾಜ್ಯ ವಲಯ) ಇತ್ಯಾದಿ ಘಟಕಗಳು ಕಾರ್ಯನಿರ್ವಹಿಸುತ್ತಿವೆ. ಜಿಲ್ಲೆಯ ಪಶು ಆಸ್ಪತ್ರೆಗಳು ಮತ್ತು ಪಶುಚಿಕಿತ್ಸಾಲಯಗಳಲ್ಲಿ ಪದವೀಧರ ಪಶುವೈದ್ಯಾಧಿಕಾರಿಗಳು ಕಾರ್ಯನಿರ್ವಹಿಸುತ್ತಿರುತ್ತಾರೆ. ಇವರ ಸಹಾಯಕ್ಕೆ ಪ್ರತಿ ಕೇಂದ್ರಗಳಲ್ಲಿ ಜಾನುವಾರು ಅಧಿಕಾರಿಗಳು, ಹಿರಿಯ ಪಶುವೈದ್ಯಕೀಯ ಪರೀಕ್ಷಕರು, ಪಶುವೈದ್ಯಕೀಯ ಪರೀಕ್ಷಕರು, ಪಶುವೈದ್ಯಕೀಯ ಸಹಾಯಕರು ಹಾಗೂ ಡಿ.ದರ್ಜೆ ನೌಕರರ ಸಿಬ್ಬಂದಿ ವರ್ಗವಿರುತ್ತದೆ. ಪ್ರಾಥಮಿಕ ಪಶು ಚಿಕಿತ್ಸಾ ಕೇಂದ್ರ ಮತ್ತು ಕೃತಕ ಗರ್ಭಧಾರಣೆ ಕೇಂದ್ರಗಳು, ಪಶು ಆಸ್ಪತ್ರೆ ಮತ್ತು ಪಶುಚಿಕಿತ್ಸಾಲಯದ ನಿಯಂತ್ರಣದಲ್ಲಿ ಕೆಲಸ ನಿರ್ವಹಿಸುತ್ತಿವೆ. ಜಾನುವಾರುಗಳ ಚಿಕಿತ್ಸೆ, ಕೃತಕ ಗರ್ಭಧಾರಣೆ ಹಾಗೂ ರೋಗಗಳ ವಿರುದ್ಧ ಲಸಿಕೆ ಕಾರ್ಯಕ್ರಮ ಮತ್ತು ಪಶು ಸಂಪತ್ತಿನ ಅಭಿವೃದ್ಧಿ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲಾಗುತ್ತಿದೆ. ೨೦೧೧–೧೨ನೇ ಸಾಲಿನ ಪಶುಪಾಲನೆ ಮತ್ತು ಪಶುಉತ್ಪನ್ನಗಳ ವಿವರಗಳು ಕೋಷ್ಟಕ ೪.೧೮ರಲ್ಲಿ ನೀಡಲಾಗಿದೆ.

**ಕೋಷ್ಟಕ ೪.೨೧: ಪಶು ಉತ್ಪನ್ನಗಳ ವಿವರಗಳು**

| ಕ್ರಮ ಸಂಖ್ಯೆ | ವಿವರ | ಸಾಧನೆ |
|---|---|---|
| ೧ | ಚಿಕಿತ್ಸೆ ನೀಡಲಾದ ಪ್ರಾಣಿಗಳು (ಸಂಖ್ಯೆ) | ೬,೮೬,೨೫೪ |
| ೨ | ಮೇವು ಉತ್ಪಾದನೆ (ಟನ್) | ೮,೦೭೭ |
| ೩ | ಹಾಲು ಉತ್ಪಾದನೆ (ಸಾವಿರ ಟನ್ನುಗಳಲ್ಲಿ) | ೩೨೧ |
| ೪ | ಮೊಟ್ಟೆ ಉತ್ಪಾದನೆ (ಲಕ್ಷಗಳಲ್ಲಿ) | ೪೯೨ |
| ೫ | ಉಣ್ಣೆ ಉತ್ಪಾದನೆ (ಟನ್ ಗಳಲ್ಲಿ) | ೭,೭೭೯ |
| ೬ | ಮಾಂಸ ಉತ್ಪಾದನೆ (ಟನ್ ಗಳಲ್ಲಿ) | ೫,೨೬೮ |

**ಮೂಲ: ೨೦೧೧–೧೨ನೇ ಸಾಲಿನ ತುಮಕೂರು ಜಿಲ್ಲೆಯ ಅಂಕಿ–ಅಂಶಗಳು, ಜಿಲ್ಲಾ ಸಂಖ್ಯಾ ಸಂಗ್ರಹಣಾಧಿಕಾರಿಗಳ ಕಛೇರಿ, ತುಮಕೂರು.**

## ಅಭಿವೃದ್ಧಿ ಯೋಜನೆಗಳು

೧. ಕಟ್ಟಡಗಳ ನವೀಕರಣ ಮತ್ತು ದುರಸ್ತಿ ಯೋಜನೆ: ಸದರಿ ಕಾರ್ಯಕ್ರಮದಡಿ ಅನುಮೋದಿಸಲಾಗಿದ್ದ ರೂ. ೨೦ ಲಕ್ಷಗಳಲ್ಲಿ, ಜಿಲ್ಲೆಯ ೨೬ ವಿವಿಧ ಪಶು ಸಂಸ್ಥೆಗಳ ಕಟ್ಟಡಗಳ ದುರಸ್ತಿ ಮತ್ತು ಇತರೆ ಕಾಮಗಾರಿಗಳನ್ನು ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ ತುಮಕೂರು/ಮಧುಗಿರಿ ಇವರ ಮುಖಾಂತರ ಕಾಮಗಾರಿಗಳಿಗೆ ವೆಚ್ಚಗಳನ್ನು ಭರಿಸಲಾಗಿದೆ.

೨. ಪ್ರಾಥಮಿಕ ಪಶು ಚಿಕಿತ್ಸಾ ಕೇಂದ್ರ ತೆರೆಯುವುದು ಮತ್ತು ಉನ್ನತೀಕರಿಸುವ ಯೋಜನೆ: ಈ ಯೋಜನೆಯಡಿ ೬೦ ವಿವಿಧ ಪಶು ಸಂಸ್ಥೆಗಳಲ್ಲಿ ೧೬೮ ವಿವಿಧ ವೃಂದದ ಹುದ್ದೆಗಳು ಮಂಜೂರಾಗಿರುತ್ತವೆ. ಸದರಿ ಕಾರ್ಯಕ್ರಮಕ್ಕೆ ರೂ. ೪೨೭.೦೭ ಲಕ್ಷಗಳನ್ನು ನಿಗದಿಪಡಿಸಿದ್ದು, ಅದರಲ್ಲಿ ರೂ. ೪೨೭.೦೫ ಲಕ್ಷಗಳನ್ನು ಖರ್ಚು ಭರಿಸಿದ್ದು, ಭೌತಿಕವಾಗಿ ೧೬೮ ವಿವಿಧ ಹುದ್ದೆಗಳಿಗೆ ವೇತನ ಭತ್ಯೆಗಳು ಹಾಗೂ ವಿಶೇಷ ಜಾನುವಾರು ತಳಿ ಅಭಿವೃದ್ಧಿ ಯೋಜನೆಯಲ್ಲಿ ೧೦೧ ಆಯ್ದ ಫಲಾನುಭವಿಗಳಿಗೆ ಮಿಶ್ರತಳಿ ಹೆಣ್ಣು ಕರುಗಳ ಸಾಕಾಣಿಕೆಗಾಗಿ ಸಹಾಯಧನವನ್ನು ನೀಡಲಾಗಿದೆ.

೩. ಗಿರಿರಾಜ ಕೋಳಿ ಸಾಕಾಣಿಕೆ ಯೋಜನೆ:ತುಮಕೂರು ಮತ್ತು ಶಿರಾ ಪಶು ಆಸ್ಪತ್ರೆಯಲ್ಲಿ ಐದು ಲಕ್ಷ ರೂ.ಗಳ ಅನುದಾನದಲ್ಲಿ ೫,೭೩೯ ಗಿರಿರಾಜ ಕೋಳಿ ಮರಿಗಳನ್ನು ಸಾಕಿ ಇಲಾಖೆಯು ನಿಗದಿಪಡಿಸಿದ ದರದಲ್ಲಿ ಸ್ತ್ರೀಶಕ್ತಿ ಮಹಿಳಾ ಫಲಾನುಭವಿಗಳಿಗೆ ಶೇಕಡ ೫೦ರ ರಿಯಾಯಿತಿ ದರದಲ್ಲಿ ಮಾರಾಟ ಮಾಡಲಾಗಿದೆ. ಈ ಬಾಬ್ತು ಆಹಾರ, ಲಸಿಕೆ, ಔಷಧಿ ಖರೀದಿ ಇತ್ಯಾದಿಗಳಿಗೆ ರೂ. ೪.೯೯ ಲಕ್ಷಗಳ ಖರ್ಚು ಮಾಡಲಾಗಿದೆ.

೪. ಆಸ್ಪತ್ರೆ ಮತ್ತು ಔಷಧಾಲಯಗಳು: ಈ ಯೋಜನೆಯಡಿ ರೂ.೬೦ ಲಕ್ಷಗಳು ನಿಗದಿಯಾಗಿದ್ದು, ಇದರಲ್ಲಿ ಜಿಲ್ಲೆಯಲ್ಲಿನ ೨೩೩ ವಿವಿಧ ಪಶು ಸಂಸ್ಥೆಗಳಿಗೆ ಅವಶ್ಯವಾಗಿ ಬೇಕಾದ ೪೫೩೪೨ ಲೀಟರ್ ದ್ರವ ಸಾರಜನಕ, ಔಷಧಿ, ರಾಸಾಯನಿಕಗಳು ಹಾಗೂ ಇತರೆ ಸಾಮಾಗ್ರಿಗಳನ್ನು ಸರಬರಾಜು ಮಾಡಿ ರೂ.೬೦ ಲಕ್ಷಗಳನ್ನು ಖರ್ಚು ಮಾಡಲಾಗಿದೆ.

೫. ಪಶು ಆಸ್ಪತ್ರೆಯಲ್ಲಿ ಪಾಲಿಕ್ಲಿನಿಕ್ ಸ್ಥಾಪನೆ:ಈ ಯೋಜನೆಯಡಿ ರೂ. ೧೨ ಲಕ್ಷಗಳ ಅನುದಾನ ನಿಗದಿಯಾಗಿದ್ದು, ಅದರಲ್ಲಿ ಆರು ಲಕ್ಷ ರೂ.ಗಳು ಬಿಡುಗಡೆಯಾಗಿದ್ದು, ಪಾಲಿಕ್ಲಿನಿಕ್‌ಗೆ ಬೇಕಾದ ಔಷಧಿ ರಾಸಾಯನಿಕಗಳನ್ನು ಮತ್ತು ಶಸ್ತ್ರಚಿಕಿತ್ಸಾ ಸಲಕರಣೆಗಳನ್ನು ಸರಬರಾಜು ಮಾಡಿ ರೂ. ೫.೯೯ ಲಕ್ಷಗಳ ವೆಚ್ಚ ಭರಿಸಲಾಗಿದೆ.

೬. ವಿಸ್ತರಣಾ ಘಟಕಗಳನ್ನು ಬಲಪಡಿಸುವಿಕೆ: ಸದರಿ ಯೋಜನೆಯಡಿಯಲ್ಲಿ ಆರು ಲಕ್ಷ ರೂ.ಗಳು ನಿಗದಿಯಾಗಿದ್ದು, ಅದರಲ್ಲಿ ರೂ. ೫.೯೯ ಲಕ್ಷಗಳ ವೆಚ್ಚವನ್ನು ಭರಿಸಿ ಪ್ರಗತಿ ಸಾಧಿಸಿದೆ. ಅದರಲ್ಲಿ ಹತ್ತು ಮಿಶ್ರತಳಿ ಹಸು ಮತ್ತು ಕರುಗಳ ಪ್ರದರ್ಶನವನ್ನು ಹಾಗೂ ಏಳು ಮುಖ್ಯ ಜಾನುವಾರುಗಳ ಜಾತ್ರೆಗಳಲ್ಲಿ ಉತ್ತಮ ರಾಸುಗಳಿಗೆ ಬಹುಮಾನ ವಿತರಣೆ ಹಾಗೂ ಜಿಲ್ಲೆಯ ಪ್ರಮುಖ ಎರಡು ಕೃಷಿ ಮತ್ತು ಕೈಗಾರಿಕಾ ವಸ್ತು ಪ್ರದರ್ಶನಗಳಲ್ಲಿ ಇಲಾಖಾ ಮಳಿಗೆಗಳನ್ನು ತೆರೆದು ರೈತಾಪಿ ಜನರಿಗೆ ಇಲಾಖೆಯ ಚಟುವಟಿಕೆಗಳ ಬಗ್ಗೆ ಮಾಹಿತಿ ನೀಡಲಾಗಿದೆ.

ಅ) ವಿಶೇಷ ಘಟಕ ಯೋಜನೆ (ಜಿಲ್ಲಾವಲಯ) ಸದರಿ ಯೋಜನೆಯಡಿ ರೂ. ೨೭.೩೦ ಲಕ್ಷಗಳ ಅನುದಾನ ಬಿಡುಗಡೆಯಾಗಿದ್ದು, ಅದರಲ್ಲಿ ಪರಿಶಿಷ್ಟ ಜಾತಿಯ ೨೭೮ ಆಯ್ದ ಫಲಾನುಭವಿಗಳಿಗೆ ಒಟ್ಟು ರೂ. ೨೭.೩೦ ಲಕ್ಷಗಳ ಸಹಾಯಧನವನ್ನು ಸೇವಾ ಬ್ಯಾಂಕ್ ಗಳ ಮೂಲಕ ಪಶು ಸಂಗೋಪನಾ ಸವಲತ್ತುಗಳನ್ನು ನೀಡಲಾಗಿದೆ.

ಆ) ಗಿರಿಜನ ಉಪಯೋಜನೆ (ಜಿಲ್ಲಾವಲಯ) ಸದರಿ ಯೋಜನೆಯಡಿ ರೂ.೬.೪೦ ಲಕ್ಷಗಳ ಅನುದಾನ ಬಿಡುಗಡೆಯಾಗಿದ್ದು, ಅದರಲ್ಲಿ ಪರಿಶಿಷ್ಟ ಪಂಗಡದ ೬೮ ಆಯ್ದ ಫಲಾನುಭವಿಗಳಿಗೆ ಒಟ್ಟು ರೂ.೬.೪೦ ಲಕ್ಷಗಳ ಸಹಾಯಧನವನ್ನು ಸೇವಾ ಬ್ಯಾಂಕ್ ಗಳ ಮೂಲಕ ಪಶು ಸಂಗೋಪನಾ ಸವಲತ್ತುಗಳನ್ನು ನೀಡಲಾಗಿದೆ.

೭. ಜಾನುವಾರು ರೋಗಗಳ ನಿಯಂತ್ರಣ (ಆಸ್ಕಾಡ್):ಸದರಿ ಯೋಜನೆಯು ಕೇಂದ್ರ ಪುರಸ್ಕೃತ ಕಾರ್ಯಕ್ರಮವಾಗಿದ್ದು, ಜಿಲ್ಲೆಯ ಜಾನುವಾರುಗಳಿಗೆ ತಲೆದೋರುವ ಗಳಲೆ ರೋಗ ಮತ್ತು ಕರುಳು ಬೇನೆ ಸಾಂಕ್ರಾಮಿಕ ರೋಗಗಳಿಗೆ ತಡೆಗಟ್ಟಲು ಮುಂಜಾಗ್ರತಾ ಕಾರ್ಯಕ್ರಮವಾಗಿ ಲಸಿಕೆ ಹಾಕಲು ರೂ.೪೬.೫೫ ಲಕ್ಷಗಳ ಅನುದಾನ ಬಿಡುಗಡೆಯಾಗಿದ್ದು ಅದರಲ್ಲಿ ರೂ.೪೬.೫೩ ಲಕ್ಷಗಳನ್ನು ವೆಚ್ಚಮಾಡಲಾಗಿದೆ.

೮. ದೇಶೀಯ ಗಂಡು ಕರು ಸಾಕಾಣಿಕೆ (ರಾಜ್ಯ ವಲಯ): ದೇಶೀಯ ಗಂಡು ಕರು ಸಾಕಾಣಿಕಾ ಯೋಜನೆಯಲ್ಲಿ ಜಿಲ್ಲೆಗೆ ರೂ.೩.೬೦ ಲಕ್ಷಗಳ ಅನುದಾನ ಹಾಗೂ ಭೌತಿಕವಾಗಿ ೯೦ ಘಟಕಗಳ ಕರುಗಳು ನಿಗಧಿಯಾಗಿದ್ದು, ಅದರಲ್ಲಿ ಗಂಡು ಕರುಗಳ ಸಾಕಾಣಿಕೆಗೆ ಘಟಕದ ವೆಚ್ಚ ರೂ.೮,೪೦೦ ಗಳಲ್ಲಿ ರೂ.೪,೪೦೦ ರೈತರ ಪಾಲು ಹಾಗೂ ರೂ.೪,೦೦೦ ಗಳಲ್ಲಿ ಸಮತೋಲನ ಪಶು ಆಹಾರವನ್ನು ಸಹಕಾರಿ ಸಂಘಗಳು/ಕೆ.ಎಂ.ಎಫ್ ಮುಖಾಂತರ ಖರೀದಿಸಿ ಆಯ್ದ ೯೦ ಫಲಾನುಭವಿಗಳಿಗೆ ವಿತರಿಸಲಾಗಿದೆ.

೯. ವಿಶೇಷ ಅಭಿವೃದ್ಧಿ ಯೋಜನೆ:೨೦೧೨-೧೩ನೇ ಸಾಲಿನ ವಿಶೇಷ ಅಭಿವೃದ್ಧಿ ಯೋಜನೆಯಡಿ ರೂ.೨೬.೨೫ ಲಕ್ಷಗಳ ಅನುದಾನ ಬಿಡುಗಡೆಯಾಗಿರುತ್ತದೆ. ಅದರಲ್ಲಿ ಜಿಲ್ಲೆಯ ೮ ಹಿಂದುಳಿದ ತಾಲೂಕುಗಳಲ್ಲಿ ಬಹುವಾರ್ಷಿಕ ಮೇವಿನ ಬೆಳೆ ಬೆಳೆಯಲು ೮೧೯ ಫಲಾನುಭವಿಗಳಿಗೆ ಹಾಗೂ ೧೨ ಫಲಾನುಭವಿಗಳಿಗೆ ಕರಚಾಲಿತ/ಯಂತ್ರಚಾಲಿತ ಮೇವು ಕತ್ತರಿಸುವ ಯಂತ್ರಗಳಿಗೆ ಒಟ್ಟಾರೆ ೮೩೧ ಫಲಾನುಭವಿಗಳಿಗೆ ರೂ. ೨೬.೧೮ ಲಕ್ಷಗಳ ವೆಚ್ಚಗಳನ್ನು ಭರಿಸಿದೆ.

೧೦. ಪಶುವೈದ್ಯಕೀಯ ಪರೀಕ್ಷಕರ ತರಬೇತಿ ಕೇಂದ್ರ, ತುಮಕೂರು:ಈ ಕೇಂದ್ರದಲ್ಲಿ ಜಿಲ್ಲೆಯ ಆಸಕ್ತ ರೈತರಿಗೆ ಮತ್ತು ಇಲಾಖೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಪಶುವೈದ್ಯಕೀಯ ಸಹಾಯಕರಿಗೆ ಮತ್ತು ಪಶುವೈದ್ಯಕೀಯ ಪರೀಕ್ಷಕರುಗಳಿಗೆ ಪುನಃಶ್ಚೇತನ ತರಬೇತಿ ನೀಡಲಾಗುತ್ತಿದೆ.

೧೧. ಹಳ್ಳಿಕಾರ ಸಂವರ್ಧನಾ ಕೇಂದ್ರ:ತುರುವೇಕೆರೆ ತಾಲೂಕು ಕುಣಿಕೇನಹಳ್ಳಿ ಕೇಂದ್ರದಲ್ಲಿ ಒಂದು ಹಳ್ಳಿಕಾರ್ ತಳಿ ಸಂವರ್ದನಾ ಕೇಂದ್ರ ಇದ್ದು, ಹಳ್ಳಿಕಾರ್ ರಾಸುಗಳ ಅಭಿವೃದ್ಧಿ ಹಾಗೂ ಮೇವು ಅಭಿವೃದ್ಧಿ ಕಾರ್ಯವನ್ನು ನಿರ್ವಹಿಸುತ್ತಿದೆ.

ಕುಣಿಗಲ್ ಅಶ್ವಪಾಲನಾ ಕೇಂದ್ರ (Kunigal Stud Farm): ಕುದುರೆ ಪಾಲನಾ ಕೇಂದ್ರವನ್ನು ಸ್ಥಾಪಿಸುವುದರಲ್ಲಿ ಅಂದಿನ ಮೈಸೂರು ರಾಜ್ಯವು ದೇಶದಲ್ಲಿಯೇ ಮೊದಲ ರಾಜ್ಯ ಹಾಗೂ ಇತರೆ ರಾಜ್ಯಗಳಿಗೆ ಮಾರ್ಗದರ್ಶನವಾಗಿತ್ತು. ಈ ಕೇಂದ್ರವು ಭಾರತದಲ್ಲಿರುವ ಅತ್ಯಂತ ಹಳೆಯ ಮತ್ತು ದೊಡ್ಡ ಫಾರಂ ಆಗಿದೆ. ಇಲ್ಲಿನ ಕುದುರೆಗಳ ಕೀರ್ತಿ ದೇಶ ವಿದೇಶಗಳಲ್ಲಿ ವಿಖ್ಯಾತವಾಗಿವೆ. ಈ ಫಾರಂನಲ್ಲಿ ಸಂವರ್ಧನೆಗೊಂಡ ಕೆಲವು ತಳಿಗಳು ಹಲವಾರು ದಾಖಲೆಗಳನ್ನು ಮಾಡಿವೆ. ಈ ಫಾರಂನ ಪಕ್ಕದಲ್ಲಿಯೇ ಇರುವ ಕುಣಿಗಲ್ ಅಮಾನಿಕೆರೆ ಮತ್ತು ಬೇಗೂರು ಅಮಾನಿಕೆರೆಗಳ ಅಚ್ಚುಕಟ್ಟು ಪ್ರದೇಶಗಳಲ್ಲಿ ಕುದುರೆಗಳ ಮೇವಿಗೆ ಬೇಕಾಗಿರುವ ಸುಧಾರಿತ ಹುಲ್ಲನ್ನು ಬೆಳೆಸಲು ಮಣ್ಣು ಮತ್ತು ವಾತಾವರಣ ಯೋಗ್ಯವಾಗಿದೆ.

ಇತಿಹಾಸದಲ್ಲಿ ಈ ಕುದುರೆ ಸಾಕಣೆ ಕೇಂದ್ರವನ್ನು ಟಿಪ್ಪುಸುಲ್ತಾನ್ ನಿರ್ಮಿಸಿದ್ದೆಂದು ಹಾಗೂ ಹದಿನೆಂಟನೇ ಶತಮಾನದಲ್ಲಿ ಯುದ್ಧ ಮತ್ತು ಸಾರಿಗೆಗೆ ಕುಣಿಗಲ್ ಕುದುರೆಗಳನ್ನು ಟಿಪ್ಪು ಬಳಕೆ ಮಾಡಿದನೆಂದು ನಂಬಲಾಗಿದೆ. ಅವನ ಮರಣಾನಂತರ ಫಾರಂ ಬ್ರಿಟಿಷರ ವಶವಾಯಿತು. ಅಶ್ವಸೈನ್ಯ ಪಡೆಯ ಉಪಯೋಗ ಮತ್ತು ಅವಶ್ಯಕತೆಗಾಗಿ ಸ್ಥಳೀಯ ಹೆಣ್ಣುಕುದುರೆ ಮತ್ತು ಅರಬ್ ದೇಶದ ಬೀಜದ ಕುದುರೆಗಳೊಂದಿಗೆ ತಳಿ ಸಂವರ್ಧನೆ ಮಾಡಿ ಉತ್ತಮ ತಳಿಯನ್ನು ಪಡೆಯಲು ಬ್ರಿಟಿಷರು ಈ ಫಾರಂನ್ನು ಹಲವಾರು ದಶಕಗಳ ಕಾಲದವರೆಗೆ ಉಪಯೋಗಿಸಿದರು. ಮೊಟ್ಟಮೊದಲು 'ಪೆರು ಗೊಮೇಜ್ ಎಂಬ ಶುದ್ದ ತಳಿ ಬೀಜದ ಕುದುರೆಯನ್ನು ೧೮೮೬ರಲ್ಲಿ ಕುಣಿಗಲ್‌ಗೆ ಆಮದು ಮಾಡಿಕೊಳ್ಳಲಾಯಿತು. ಇದಾದನಂತರ ಬ್ರಿಟನ್ ಮತ್ತು ಆಸ್ಟ್ರೇಲಿಯಾದಿಂದ ರೇಸ್ ಕುದುರೆಗಳನ್ನು ಭಾರತಕ್ಕೆ ಆಮದು ಮಾಡಿಕೊಳ್ಳಲು ಅನುಮತಿ ನೀಡಲಾಯಿತು. ದೇಶಾದ್ಯಂತ ಹಲವಾರು ಪ್ರತಿಷ್ಠಿತ ಕುದುರೆ ರೇಸ್‌ಗಳಲ್ಲಿ ಈ ಕೇಂದ್ರಗಳಲ್ಲಿ ಸಂವರ್ಧನೆಗೊಂಡ ಕುದುರೆಗಳು ತಮ್ಮ ಸತ್ವವನ್ನು ರುಜುವಾತುಪಡಿಸಿದವು. ಈ ರೀತಿಯ ಪ್ರಸಿದ್ಧತೆಯಿಂದಾಗಿ ಅಶ್ವಪಾಲನಾ ಕೇಂದ್ರದ ಚಟುವಟಿಕೆಗಳ ಪ್ರಾಬಲ್ಯದ ನಿಯಂತ್ರಣವನ್ನು ಬ್ರಿಟೀಷ್ ಸೈನ್ಯದ ಪ್ರಬಲ ಅಧಿಕಾರಿಗಳ ಮೂಲಕ ದೆಹಲಿ ದರ್ಬಾರ್ ನೇರವಾಗಿ ನಿರ್ವಹಿಸಲು ಪ್ರಾರಂಭಿಸಿತು. ೧೯೦೬ರಲ್ಲಿ ಸ್ಟಡ್ ಫಾರಂ ಮುಖ್ಯಸ್ಥನಾಗಿದ್ದ ವಿಲಿಯಮ್ಸ್ ಎಂಬಾತ ಇಲ್ಲಿನ ಚರಿತ್ರೆಯನ್ನು ದಾಖಲಿಸಿದ್ದಾನೆ. ಕರ್ನಲ್ ಹೆ, ಸೇನಾಧಿಪತಿ ಸ್ಟಿವರ್ಟ್, ದಳಪತಿ ಮೆಸೆಂಟ್ರ ಮತ್ತು ಇತರರು ಈ ಕೇಂದ್ರವನ್ನು ಕುದುರೆ ತಳಿ ಸಂವರ್ಧನಾ ಕೇಂದ್ರವನ್ನಾಗಿ ಸ್ಥಿರವಾಗಿ ಸ್ಥಾಪಿಸುವಲ್ಲಿ ಅತ್ಯಂತ ಆಸಕ್ತಿಯನ್ನು ತೋರಿದರು. ಅಂದಿನ ಮೈಸೂರು ಮಹಾರಾಜರಾದ ಶ್ರೀ ಕೃಷ್ಣರಾಜ ಒಡೆಯರ್ ಅವರು ಈ ಕ್ಷೇತ್ರದ ದಿನನಿತ್ಯದ ಅಭಿವೃದ್ಧಿಯ ಬಗ್ಗೆ ಹೆಚ್ಚಿನ ಆಸಕ್ತಿಯನ್ನು ತೋರಿಸಿದರು. ಉತ್ತಮ ತಳಿಯನ್ನು ಅಭಿವೃದ್ಧಿಗೊಳಿಸುವ ಸಲುವಾಗಿ ಸುಮಾರು ೨೦ ವರ್ಷಗಳವರೆಗೆ ಈ ಕೇಂದ್ರದಲ್ಲಿ ಕುದುರೆ ರೇಸ್ ಮತ್ತು ಕುದುರೆ ಪ್ರದರ್ಶನವನ್ನು ಏರ್ಪಡಿಸಲಾಗುತ್ತಿತ್ತು.

ಕಿಂಬರ್ಲಿ ಖ್ಯಾತಿಯ ಕುಣಿಗಲ್ ಸ್ಟಡ್ ಫಾರಂನ ಕುದುರೆಗೆ ಎಲ್ಲಿಲ್ಲದ ಬೇಡಿಕೆ ಇತ್ತು. ಇದರ ಮರಿಗಳು ದೇಶದೊಳಗಿನ ರೇಸ್ ಮತ್ತು ವಿದೇಶಿ ರೇಸ್‌ಗಳಲ್ಲಿ ದೊಡ್ಡಸಾಧನೆ ಮಾಡಿವೆ. ಅಮೆರಿಕದ ರೇಸ್ ನಲ್ಲಿ ಗೆದ್ದ ಮೊದಲ ಭಾರತೀಯ ಕುದುರೆ ಎಂಬ ದಾಖಲೆ ಬರೆದ ಆಡ್ಲರ್ ಇದೇ ಫಾರಂನದು. ಫಾರಂನಲ್ಲಿದ್ದ ಇತರೆ ಬೀಜದ ಕುದುರೆಗಳೆಂದರೆ ಅರ್ಡೆಂಟ್ ನೈಟ್ ಮತ್ತು ಹಕುಚಿಕಾರ. ೧೯೫೭ರಿಂದ ೧೯೭೬ರವರೆಗೆ ಅರ್ಡೆಂಟ್ ನೈಟ್ ಪಾಲನಕೇಂದ್ರದಲ್ಲಿದ್ದು, ಇನ್ನೂರ ಐವತ್ತಕ್ಕೂ ಹೆಚ್ಚಿನ ವಿಜೇತ ಕುದುರೆಗಳನ್ನು ನೀಡಿದೆ. ಹಕುಚಿಕಾರ ಎಂಬ ಕುದುರೆ ತಳಿಯನ್ನು ಜಪಾನ್ ದೇಶದಿಂದ ಆಮದು ಮಾಡಿಕೊಳ್ಳಲಾಗಿತ್ತು. ೧೯೬೮ರಿಂದ ೧೯೭೯ರವರೆಗೆ ಈ ತಳಿಯ ಮರಿಗಳು ಕಲ್ಕತಾಡರ್ಬಿ, ಕಲ್ಕತಾ ಲೀಜಿರ್, ಕಲ್ಕತಾ ಒಕ್ಸ ಮುಂತಾದ ರೇಸ್ ಗಳಲ್ಲಿ ಭಾಗವಹಿಸಿ ವಿಜೇತವಾಗಿವೆ. ಇಲ್ಲಿನ ಕುದುರೆಗಳಿಗೆ ಧಾರಕಶಕ್ತಿ, ಅಗಾಧಶಕ್ತಿ ಮತ್ತು ವೇಗವಿದೆ. ಕುದುರೆಗಳ ಶಕ್ತಿ ಮತ್ತು ವೇಗಕ್ಕೆ ಪೂರಕ ಮತ್ತು ಉತ್ಕೃಷ್ಟವಾದ ಹುಲ್ಲುಗಳಾದ ರೊಡ್ಸ್ ಗ್ರಾಸ್, ಗ್ರೀನ್ ಸ್ಟ್ಯಾನಿಕ್, ಲೂಸನ್ ಇತ್ಯಾದಿ ಹುಲ್ಲಿನ ತಳಿಗಳನ್ನು ಬೆಳೆಯಲಾಗುತ್ತಿದೆ. ದಿನಕ್ಕೆ ಹೆಣ್ಣು ಕುದುರೆಗೆ ೨೦-೨೫ ಕೆ.ಜಿ; ಮರಿ ಕುದುರೆಗೆ ೧೦-೧೫ ಕೆ.ಜಿ ಹುಲ್ಲು ಬೇಕು. ಕುದುರೆಗಳಿಗಾಗಿ ಆಸ್ಟ್ರೇಲಿಯಾ ಮತ್ತು ಐರ್ಲೆಂಡ್ ನಿಂದ ಆಹಾರವನ್ನು ತರಿಸಲಾಗುತ್ತದೆ. ಕುದುರೆಗಳ ಆಯುಷ್ಯ ೨೫ ವರ್ಷ ಮಾತ್ರ. ೨ರಿಂದ ೫ ವರ್ಷದ ಕುದುರೆ ಮಾತ್ರ ರೇಸಿಗೆ ಲಾಯಕ್ಕು. ಹುಟ್ಟಿದಾಗ ೫೦ ಕೆ.ಜಿ ತೂಗುವ ಕುದುರೆ ಮರಿಗಳು ರೇಸ್ ನಲ್ಲಿ ಭಾಗವಹಿಸುವ ವೇಳೆಗೆ ೫೦೦ ಕೆ.ಜಿ.ತೂಗುತ್ತವೆ.

ಸುಮಾರು ೩೦ ದಶಕಗಳವರೆಗೆ ಮೈಸೂರು ಮಿಲಿಟರಿ ಇಲಾಖೆಯು ಈ ಕೇಂದ್ರದ ನಿರ್ವಹಣೆಯನ್ನು ಕೈಗೊಂಡಿತು. ೧೯೪೮ರಲ್ಲಿ ರಾಜ್ಯದ ಪಶುಪಾಲನಾ ಇಲಾಖೆಗೆ ಕೇಂದ್ರದ ನಿಯಂತ್ರಣ ಮತ್ತು ನಿರ್ವಹಣೆಯನ್ನು ಹಸ್ತಾಂತರಿಸಲಾಯಿತು. ನಂತರದ ದಿನಗಳಲ್ಲಿ ಕೇಂದ್ರದ ನಿರ್ವಹಣಾ ವೆಚ್ಚವನ್ನು ಗಣನೀಯವಾಗಿ ಕಡಿಮೆಗೊಳಿಸಿ ನಷ್ಟ ಸಂಭವಿಸಬಹುದಾದ ಉದ್ಯಮವನ್ನು ಸ್ವಂತವಾಗಿ ನಿರ್ವಹಿಸುವಂತೆ ಮಾಡಲಾಯಿತು. ಹೆಣ್ಣು ಕುದುರೆಯ ಗರ್ಭಧಾರಣಾ ಶಕ್ತಿ ಮತ್ತು ಜನನ

ಸಂಖ್ಯಾ ಪ್ರಮಾಣದಲ್ಲಿ ಹೆಚ್ಚಳ ಹಾಗೂ ಶುಚಿತ್ವದ ನಿರ್ವಹಣೆ, ಸರಿಯಾದ ವ್ಯಾಯಾಮ, ಸಮತೋಲನ ಮೇವನ್ನು ನಿಗದಿತ ಸಮಯದಲ್ಲಿ ನೀಡುವುದು, ಇತ್ಯಾದಿಗಳು ಉತ್ತಮ ಫಲಿತಾಂಶವನ್ನು ನೀಡುವಲ್ಲಿ ಪ್ರಮುಖ ಕಾರಣಗಳಾದವು.

ಇಪ್ಪತ್ತು ವರ್ಷಗಳ ನಿರ್ವಹಣೆಯ ನಂತರ ಪಶುಪಾಲನಾ ಇಲಾಖೆಯು ೧೯೬೮ರಲ್ಲಿ ಈ ಕ್ಷೇತ್ರವನ್ನು ಗುತ್ತಿಗೆ ಆಧಾರದ ಮೇಲೆ ಬೆಂಗಳೂರಿನ ಟರ್ಫ್ ಕ್ಲಬ್‌ಗೆ ನಾಲ್ಕು ವರ್ಷದ ಅವಧಿಗೆ ಬಿಟ್ಟುಕೊಟ್ಟಿತು. ನಾಲ್ಕು ವರ್ಷದ ಗುತ್ತಿಗೆ ಅವಧಿ ಮುಗಿದ ನಂತರ ೧೯೭೨ರಲ್ಲಿ ೩೦ ವರ್ಷಗಳ ಗುತ್ತಿಗೆ ಅವಧಿಗೆ ನವೀಕರಿಸಿತು. ಆದರೆ ಟರ್ಫ್ ಕ್ಲಬ್‌ನ ಕೋರಿಕೆಯ ಮೇರೆಗೆ ಹತ್ತು ವರ್ಷದ ಅವಧಿಯ ಮುನ್ನವೇ ಗುತ್ತಿಗೆಯನ್ನು ಕೊನೆಗೊಳಿಸಿ ೧೯೯೨ರಲ್ಲಿ ಜಾಗತಿಕ ಟೆಂಡರ್ ಕರೆದಾಗ ಯುನೈಟೆಡ್ ರೇಸಿಂಗ್ ಅಂಡ್ ಬ್ಲಡ್ ಸ್ಟಾಕ್ ಬ್ರೀಟಲ್ (ಯೂ.ಆರ್.ಬಿ.ಬಿ) ಕಂಪನಿ ೩೦ ವರ್ಷಗಳ ಅವಧಿಗೆ ಗುತ್ತಿಗೆ ಪಡೆದಿದೆ. ಗುತ್ತಿಗೆ ಪಡೆದ ನಂತರಐರ್ಲೆಂಡ್ ದೇಶದವರಾದ ಡಾ: ಜಾನ್ ವೆಲ್ಡ್ ರವರನ್ನು ವ್ಯವಸ್ಥಾಪಕರು ಮತ್ತು ಮುಖ್ಯ ಪಶುವೈದ್ಯಕೀಯ ಸರ್ಜನ್ ಎಂದು ನೇಮಿಸಲಾಯಿತು. ಪಾಲನಾ ಕೇಂದ್ರದಲ್ಲಿರುವ ಉತ್ತಮ ಗಂಡು ತಳಿಯಿಂದಾಗಿ ಹಲವಾರು ಖಾಸಗಿ ಕುದುರೆ ಮಾಲೀಕರು ತಮ್ಮ ಹೆಣ್ಣು ಕುದುರೆಗಳಿಂದ ಉತ್ತಮ ಕುದುರೆ ಮರಿಗಳನ್ನು ಪಡೆಯಲು ಕುಣಿಗಲ್ ಅಶ್ವಪಾಲನಾ ಕೇಂದ್ರಕ್ಕೆ ಮೊದಲ ಪ್ರಾಶಸ್ತ್ಯ ನೀಡುತ್ತಾರೆ.

ಈ ಕೇಂದ್ರದಲ್ಲಿ ಆಪರೇಷನ್ ಥಿಯೇಟರ್, ಎಕ್ಸ್–ರೇ ಉಪಕರಣ, ಎಂಡೋಸ್ಕೋಪ್ ಮತ್ತು ಅಲ್ಟ್ರಾ ಸೌಂಡ್ ಸ್ಕ್ಯಾನರ್ ಸೌಲಭ್ಯಗಳಿರುವ ಸುಸಜ್ಜಿತ ಪಶುವೈದ್ಯಕೀಯ ಆಸ್ಪತ್ರೆ ಇದೆ. ಇದರ ಹೊರತಾಗಿ ಕುದುರೆಗಳನ್ನು ಓಡಾಡಿಸಲು ಯಂತ್ರ ಚಾಲಿತ ಉಪಕರಣ, ರಿವರ್ಸ್ ಆಸ್ಮಾಸಿಸ್ (Reverse Osmosis) ಸೌಲಭ್ಯವಿರುವ ನೀರಿನ ಶುದ್ಧೀಕರಣ ಘಟಕ, ಕುದುರೆಗಳನ್ನು ಪಳಗಿಸುವ ವರ್ತುಲಾಕಾರದ ಮೈದಾನ, ಎತ್ತರವಾಗಿ ಕಟ್ಟಿರುವ ದಾರಿ, ಏಳು ಫರ್ಲಾಂಗ್ ಉದ್ದವುಳ್ಳ ತರಬೇತಿ ಮಾರ್ಗ, ಇತ್ಯಾದಿ ಸೌಲಭ್ಯಗಳಿವೆ. ದಿನದ ಇಪ್ಪತ್ತನಾಲ್ಕು ಗಂಟೆಗಳ ಕಾಲ ಪಶುವೈದ್ಯರ ಸೇವೆಯು ಸಹಾ ಲಭ್ಯವಿದೆ. ನಲ್ವತ್ತೈದು ಸಣ್ಣ ಹುಲ್ಲುಗಾವಲುಗಳ ಸೌಲಭ್ಯವಿದೆ. ಒಳ್ಳೆಯ ಗಾಳಿ ಬೆಳಕು ಮತ್ತು ಚೆನ್ನಾಗಿ ನಿರ್ವಹಿಸಿರುವ ೨೩೦ ಕುದುರೆ ಲಾಯಗಳನ್ನು ಕಾಣಬಹುದು. ಈ ಕೇಂದ್ರದಲ್ಲಿ ಪ್ರಸ್ತುತ ೨೩೦ ಕುದುರೆಗಳಿದ್ದು ಅವುಗಳಲ್ಲಿ ೧೦೦ ಹೆಣ್ಣು, ಐದು ಗಂಡು, ಎರಡು ವರ್ಷಗಳಾಗಿರುವ ೬೫ ಕುದುರೆ ಮರಿ ಮತ್ತು ಒಂದು ವರ್ಷದೊಳಗಿನ ೬೦ ಕುದುರೆ ಮರಿಗಳನ್ನು ಕಾಣಬಹುದು. ಬೇಗೂರು ಫಾರಂ, ಹೆರೂರು ಫಾರಂ ಮತ್ತು ರಂಬನ್ ಫಾರಂಗಳಲ್ಲಿ ಕುದುರೆಗಳ ಮೇವಿಗಾಗಿ ಹುಲ್ಲನ್ನು ಬೆಳೆಸಲಾಗುತ್ತಿದೆ. ಈ ಮೂರು ಫಾರಂಗಳ ಒಟ್ಟು ವಿಸ್ತೀರ್ಣ ೧೩೦ ಎಕರೆಗಳಾಗಿದ್ದು ದಿನ ಒಂದಕ್ಕೆ ಸರಾಸರಿ ೪–೫ ಟನ್ ಮೇವನ್ನು ಉತ್ಪಾದಿಸಲಾಗುತ್ತದೆ. ಬೇಗೂರು ಫಾರಂ ಅಶ್ವಪಾಲನಾ ಕೇಂದ್ರಕ್ಕೆ ಹೊಂದಿಕೊಂಡಿರುತ್ತದೆ ಮತ್ತು ಇತರೆ ಎರಡು ಫಾರಂಗಳು ಅಶ್ವಪಾಲನಾ ಕೇಂದ್ರದಿಂದ ಹೊರಗಿರುತ್ತವೆ. ಕುಣಿಗಲ್ ಅಶ್ವ ಪಾಲನಾ ಕೇಂದ್ರವು ಕುಣಿಗಲ್ ತಾಲೂಕು ಕೇಂದ್ರಕ್ಕೆ ಹೊಂದಿಕೊಂಡಂತೆ ಇದೆ.

ಈ ಕೇಂದ್ರದ ಒಟ್ಟು ೫೦೦ ಎಕರೆಗಳಲ್ಲಿ ಕಾಲಕಳೆದಂತೆ ಸಾರ್ವಜನಿಕ ಸೌಕರ್ಯಗಳಿಗೆ ಒಟ್ಟು ೭೦ ಎಕರೆ ಪ್ರದೇಶವನ್ನು ಸರ್ಕಾರಕ್ಕೆ ಬಿಟ್ಟುಕೊಟ್ಟು ಈಗ ಕೇವಲ ೪೩೦ ಎಕರೆಗಳನ್ನು ಮಾತ್ರ ಉಳಿದಿದೆ. ಈ ವಿಶಾಲ ಪ್ರದೇಶದಲ್ಲಿ ಶ್ರೀಗಂಧ, ಹುಣಸೆ, ಬೇವು, ನೀಲಗಿರಿ, ರೋಸ್ ವುಡ್, ಬೀಟೆ, ತೇಗ, ಹೊನ್ನೆ ಸೇರಿದಂತೆ ೩೦೦ರಿಂದ ೩೫೦ ಕ್ಕೂ ಹೆಚ್ಚು ವೈವಿಧ್ಯಮಯ ಮರಗಳಿವೆ. ಜೊತೆಗೆ ಅಸಂಖ್ಯ ಪ್ರಾಣಿ ಸಂಕುಲವೂ ಉಂಟು. ಗೂಗಲ್ ಅರ್ಥ್‌ನಲ್ಲೂ ಇದಕ್ಕೆ ವಿಶೇಷ ಮಾನ್ಯತೆ ಇದೆ. ಸಮೃದ್ಧಿಯಾದ ಜಾಗ, ಸುಸಜ್ಜಿತ ಸೌಲಭ್ಯ, ಫಲವತ್ತತೆಯಿಂದ ಕೂಡಿರುವ ಮಣ್ಣು, ಜಾತಿ ಕುದುರೆಗಳು ಮತ್ತು ಉತ್ತಮ ನಿರ್ವಹಣೆಯಿಂದಾಗಿ ಕುಣಿಗಲ್ ಅಶ್ವಪಾಲನಾ ಕೇಂದ್ರವು ರಾಷ್ಟ್ರೀಯ ಮತ್ತು ಅಂತರಾಷ್ಟ್ರೀಯ ಮಟ್ಟದಲ್ಲಿ ಹೆಸರು ಮಾಡಿದೆ.

## ಜಲಾನಯನ ಅಭಿವೃದ್ಧಿ ಇಲಾಖೆ

ತುಮಕೂರು ಜಿಲ್ಲೆಯಲ್ಲಿ ಸಾಗುವಳಿ ಭೂಮಿಯು ಅತಿ ತೀವ್ರವಾಗಿ ಸವಕಳಿಯಾಗುತ್ತಿದ್ದು, ಪೋಷಕಾಂಶಗಳ ಕೊರತೆ ಉಂಟಾಗಿ ಬೆಳೆ ಉತ್ಪಾದನೆಯು ಕುಂಠಿತಗೊಂಡಿರುತ್ತದೆ. ದಿನೇ ದಿನೇ ಮಳೆ ಪ್ರಮಾಣ ಕಡಿಮೆಯಾಗುತ್ತಿರುವುದರಿಂದ ಹಾಗೂ ಬಂದಂತಹ ಮಳೆ ನೀರನ್ನು ಸಂರಕ್ಷಣೆ ಮಾಡದೆ ಇರುವುದರಿಂದ ನೀರು ಇಂಗುವಿಕೆ ಕಡಿಮೆಯಾಗಿ, ಭೂ ಕೊಚ್ಚಣೆ ಜಾಸ್ತಿಯಾಗಿ ಬಹುತೇಕ ಕೆರೆಗಳು ಶೇ.೩೦ ಯಿಂದ ೫೦ರಷ್ಟು ಹೂಳು ತುಂಬಿಕೊಂಡಿರುತ್ತವೆ ಹಾಗೂ ಅಂತರ್ಜಲಮಟ್ಟ ೬೦೦ರಿಂದ ೧೦೦೦ ಅಡಿಗೆ ಕುಸಿದಿದ್ದು ತೆರೆದ ಬಾವಿಗಳು ಒಣಗಿಹೋಗಿದ್ದು, ಕೊಳವೆ ಬಾವಿಗಳಲ್ಲಿ ನೀರಿನ ಇಳುವರಿಯು ಕಡಿಮೆಯಾಗಿರುತ್ತದೆ. ಇದರ ಪರಿಣಾಮದಿಂದ ಅರಣ್ಯ ಸಂಪತ್ತು ಹಾಳಾಗಿ ನೈಸರ್ಗಿಕ ಅಸಮತೋಲನ ಉಂಟಾಗಿರುತ್ತದೆ. ಈ ಎಲ್ಲಾ ಸಮಸ್ಯೆಗಳನ್ನು ಪರಿಶೀಲಿಸಿ, ಇವುಗಳನ್ನು ನಿವಾರಿಸಲು ಸಮಗ್ರ ಜಲಾನಯನ ಅಭಿವೃದ್ಧಿ ಯೋಜನೆಗಳನ್ನು ಹಮ್ಮಿಕೊಳ್ಳಲಾಗಿದೆ.

## ಜಲಾನಯನ ಅಭಿವೃದ್ಧಿ ಯೋಜನೆ

ಈ ಯೋಜನೆಯ ಮುಖ್ಯ ಉದ್ದೇಶಗಳು ಯಾವುವೆಂದರೆ, ನೈಸರ್ಗಿಕ ಸಂಪನ್ಮೂಲಗಳಾದ ನೀರು, ಮಣ್ಣು ಸಂರಕ್ಷಣೆ, ಪರಿಸರ ಸಂರಕ್ಷಣೆ ಮತ್ತು ಅಭಿವೃದ್ಧಿ, ಕೃಷಿ ಉತ್ಪಾದನೆ ಮತ್ತು ಉತ್ಪಾದಕತೆಗಳನ್ನು ಹೆಚ್ಚಿಸುವುದು, ಸ್ಥಳೀಯ ಸಂಘ–ಸಂಸ್ಥೆಗಳ ಶಕ್ತಿ ಸಾಮರ್ಥ್ಯವನ್ನು ಹೆಚ್ಚಿಸುವುದು ಹಾಗೂ ನೈಸರ್ಗಿಕ ಸಂಪನ್ಮೂಲಗಳನ್ನು ಅಭಿವೃದ್ಧಿಪಡಿಸಿ ಸಂಘ–ಸಂಸ್ಥೆಗಳೇ ಸಂರಕ್ಷಿಸುವಂತೆ ಮಾಡುವುದು ಮತ್ತು ಜಲಾನಯನ ಪ್ರದೇಶದಲ್ಲಿ ಬರುವ ದುರ್ಬಲ ವರ್ಗದವರ ಕೌಶಲ್ಯತೆಯನ್ನು ಹೆಚ್ಚಿಸಿ ಬದಲಿ ಜೀವನೋಪಾಯವನ್ನು ಕಲ್ಪಿಸುವುದು ಇತ್ಯಾದಿಗಳು.

ಜಲಾನಯನ ಅಭಿವೃದ್ಧಿ ಇಲಾಖೆಯಲ್ಲಿ ಅನುಷ್ಠಾನಗೊಳಿಸುತ್ತಿರುವ ಯೋಜನೆಗಳು: ೧. ರಾಷ್ಟ್ರೀಯ ಜಲಾನಯನ ಅಭಿವೃದ್ಧಿ ಯೋಜನೆ, ೨.ಸಮಗ್ರ ಜಲಾನಯನ ನಿರ್ವಹಣಾ ಯೋಜನೆ, ೩.ಜಲಸಿರಿ ಯೋಜನೆ, ೪.ವಿಶೇಷ ಘಟಕ ಯೋಜನೆ, ೫.ಗಿರಿಜನ ಉಪಯೋಜನೆ, ೬.ಗ್ರಾಮೀಣ ಕೃಷಿ ಅಭಿವೃದ್ಧಿ ಯೋಜನೆ. ಈ ಮೇಲ್ಕಂಡ ಯೋಜನೆಗಳಲ್ಲಿ ಕ್ರಮವಾಗಿ ೧ ಮತ್ತು ೨ ಯೋಜನೆಗಳನ್ನು ಜಲಾನಯನ ಸಂಘಗಳ ಮೂಲಕ ಅನುಷ್ಠಾನಗೊಳಿಸುತ್ತಿದ್ದು, ಎಲ್ಲಾ ಜಲಾನಯನ ಸಂಘಗಳನ್ನು ಸಂಬಂಧಪಟ್ಟ ಗ್ರಾಮ ಪಂಚಾಯತಿ ಅಡಿಯಲ್ಲಿ ಜಲಾನಯನ ಉಪಸಮಿತಿಯನ್ನು ರಚಿಸಿ ಅದಕ್ಕೆ ಆಯಾ ಗ್ರಾಮ ಪಂಚಾಯಿತಿ ಅಧ್ಯಕ್ಷರು ಉಪ ಸಮಿತಿಯ ಅಧ್ಯಕ್ಷರಾಗಿ ಹಾಗೂ ಜಲಾನಯನ ಅಭಿವೃದ್ಧಿ ಇಲಾಖೆಯ ಸಹಾಯಕ ಕೃಷಿ ಅಧಿಕಾರಿಗಳು ಖಜಾಂಚಿಯಾಗಿ ಕಾರ್ಯ ನಿರ್ವಹಿಸುತ್ತಿದ್ದು ಜಲಾನಯನ ಉಪ ಸಮಿತಿಯ ಕಾರ್ಯಕಾರಿ ಸಮಿತಿಯು ಯೋಜನೆಯನ್ನು ಅನುಷ್ಠಾನಗೊಳಿಸುತ್ತಿದೆ. ಈ ಎಲ್ಲಾ ಯೋಜನೆಗಳ ಅಡಿಯಲ್ಲಿ ನೈಸರ್ಗಿಕ ಸಂಪನ್ಮೂಲಗಳಾದ ಮಣ್ಣು, ನೀರು ಮತ್ತು ಪರಿಸರ ಸಂರಕ್ಷಣೆಗೆ ಹೆಚ್ಚಿನ ಒತ್ತು ನೀಡಿದ್ದು, ಅದಕ್ಕೆ ಪೂರಕವಾಗಿ ನೀರು ಸಂಗ್ರಹಣಾ ವಿನ್ಯಾಸಗಳು, ಕೃಷಿ ಅರಣ್ಯ ಮತ್ತು ಖುಷ್ಕಿ ತೋಟಗಾರಿಕೆ ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಅನುಷ್ಠಾನಗೊಳಿಸಲಾಗಿದೆ. ಅಲ್ಲದೆ ಪಶುಸಂಗೋಪನಾ ಕಾರ್ಯಕ್ರಮಕ್ಕೂ ಸಹಾ ಆದ್ಯತೆಯನ್ನು ನೀಡಲಾಗಿದೆ.

೨೦೧೨–೧೩ನೇ ಸಾಲಿನಲ್ಲಿ ತುಮಕೂರು ಜಿಲ್ಲೆಯಲ್ಲಿ ರಾಷ್ಟ್ರೀಯ ಜಲಾನಯನ ಅಭಿವೃದ್ಧಿ ಯೋಜನೆಯಲ್ಲಿ ಮೂರು ಉಪಜಲಾನಯನಗಳು ಚಿಕ್ಕನಾಯಕನಹಳ್ಳಿ, ಶಿರಾ ಮತ್ತು ಪಾವಗಡ ತಾಲೂಕುಗಳಲ್ಲಿ ಮಂಜೂರಾಗಿದ್ದು, ಬಿಡುಗಡೆಯಾಗಿದ್ದ ರೂ.೫೬.೪೨ ಲಕ್ಷ ಅನುದಾನವನ್ನು ವೆಚ್ಚ ಮಾಡಿ, ೯೫೫ ಹೆಕ್ಟೇರ್ ಭೂಮಿಯನ್ನು ಅಭಿವೃದ್ಧಿ ಪಡಿಸಲಾಗಿದೆ. ಸಮಗ್ರ ಜಲಾನಯನ ನಿರ್ವಹಣಾ ಯೋಜನೆಯು ೨೦೦೯–೧೦ನೇ ಸಾಲಿನಿಂದ ಪ್ರಾರಂಭವಾಗಿದ್ದು ಕೇಂದ್ರ ಪುರಸ್ಕೃತ ಯೋಜನೆಯಾಗಿರುತ್ತದೆ. ಈ ಯೋಜನೆಗೆ ಶೇ.೯೦ರಷ್ಟು ಕೇಂದ್ರ ಪಾಲಿನ ಮತ್ತು ಶೇ.೧೦ರಷ್ಟು ರಾಜ್ಯ ಪಾಲಿನ ಅನುದಾನದಿಂದ ಅನುಷ್ಠಾನಗೊಳಿಸಲಾಗುತ್ತಿದೆ. ಈ ಯೋಜನೆಯಲ್ಲಿ ಎಲ್ಲಾ ಯೋಜನೆಗಳನ್ನು ಒಟ್ಟುಗೂಡಿಸಿ ಜಲಾನಯನವನ್ನು ಆಯ್ಕೆ ಮಾಡಿ ಕಾರ್ಯಕ್ರಮ ರೂಪಿಸಿ ಕಾರ್ಯಗತಗೊಳಿಸಲು ನಿರ್ದೇಶಿಸಲಾಗಿದೆ. ಮತ್ತು ಕೇಂದ್ರ

ಸರ್ಕಾರದ ಹೊಸ ಸಾಮಾನ್ಯ ಮಾರ್ಗಸೂಚಿಯ ಪ್ರಕಾರ ಪ್ರತಿ ತಾಲೂಕಿಗೆ ೪–೫ ಸಾವಿರ ಹೆಕ್ಟೇರ್ ಪ್ರದೇಶವನ್ನು ಉಪ ಜಲಾನಯನವಾರು ಆಯ್ಕೆ ಮಾಡಿಕೊಂಡು ಕಾರ್ಯಕ್ರಮ ಅನುಷ್ಠಾನಗೊಳಿಸಲಾಗಿದೆ. ಜಲಾನಯನ ಸರಾಸರಿ ಕ್ಷೇತ್ರಕ್ಕನುಗುಣವಾಗಿ ಜಲಾನಯನಗಳನ್ನು ಈ ಕೆಳಕಂಡಂತೆ ವಿಂಗಡಿಸಲಾಗಿದೆ.

| | | |
|---|---|---|
| ೧. ಜಲಾನಯನ | –ಸರಾಸರಿ ಕ್ಷೇತ್ರ | –೫೦,೦೦೦ ಹೆಕ್ಟೇರು |
| ೨. ಉಪ ಜಲಾನಯನ | –ಸರಾಸರಿ ಕ್ಷೇತ್ರ | –೫,೦೦೦ ಹೆಕ್ಟೇರು |
| ೩. ಕಿರು ಜಲಾನಯನ | –ಸರಾಸರಿ ಕ್ಷೇತ್ರ | –೫೦೦ ಹೆಕ್ಟೇರು |
| ೪. ಸಣ್ಣ ಕಿರು ಜಲಾನಯನ | –ಸರಾಸರಿ ಕ್ಷೇತ್ರ | –೨೦೦ ಹೆಕ್ಟೇರು |

ಜಲಸಿರಿ ಯೋಜನೆಯು ೨೦೧೨–೧೩ನೇ ಸಾಲಿನಲ್ಲಿ ತುಮಕೂರು ಮತ್ತು ತಿಪಟೂರು ತಾಲೂಕು ಹೊರತುಪಡಿಸಿ ಉಳಿದ ತಾಲೂಕುಗಳಿಗೆ ಮಂಜೂರಾಗಿ ರೂ.೩೩೨.೭೦ ಲಕ್ಷ ಅನುದಾನ ವೆಚ್ಚ ಮಾಡಿ ೭೩ ನೀರು ಸಂಗ್ರಹಣಾ ವಿನ್ಯಾಸಗಳು ಹಾಗೂ ೨೧೩೦ ಹೆಕ್ಟೇರ್ ಪ್ರದೇಶದಲ್ಲಿ ಕಂದಕದೊಂದಿಗೆ ಬದು ಕಾಮಗಾರಿ ಕೈಗೊಳ್ಳಲಾಗಿದೆ. ವಿಶೇಷ ಘಟಕ ಯೋಜನೆಯಲ್ಲಿ ರೂ.೨೫.೫೫ ಲಕ್ಷ ಅನುದಾನವನ್ನು ವೆಚ್ಚಮಾಡಿ ೩೩೭ ಹೆಕ್ಟೇರ್ ಪರಿಶಿಷ್ಟ ಜಾತಿ ರೈತರ ಭೂಮಿಯನ್ನು ಅಭಿವೃದ್ಧಿಪಡಿಸಲಾಗಿದೆ. ಗಿರಿಜನ ಉಪಯೋಜನೆಯಲ್ಲಿ ರೂ.೨೩.೫೭ ಲಕ್ಷ ಅನುದಾನವನ್ನು ವೆಚ್ಚ ಮಾಡಿ ೩೪೦ ಹೆಕ್ಟೇರ್ ಪರಿಶಿಷ್ಟ ಪಂಗಡದ ರೈತರ ಭೂಮಿಯನ್ನು ಅಭಿವೃದ್ಧಿಪಡಿಸಲಾಗಿದೆ. ಗ್ರಾಮೀಣ ಕೃಷಿ ಅಭಿವೃದ್ಧಿ ಕಾರ್ಯಕ್ರಮದಲ್ಲಿ ಬಿಡುಗಡೆಯಾಗಿದ್ದ ರೂ.೧೫.೦೦ ಲಕ್ಷಗಳನ್ನು ಉಪಯೋಗಿಸಿಕೊಂಡು ೪೩ ಕೃಷಿ ಹೊಂಡಗಳನ್ನು ಮತ್ತು ೮೫ ಹೆಕ್ಟೇರ್‌ನಲ್ಲಿ ಕಂದಕದೊಂದಿಗೆ ಬದು ಕಾಮಗಾರಿ ಕೈಗೊಳ್ಳಲಾಗಿದೆ.

***